ಬಂಗಾಳಕೊಲ್ಲಿಯ ಕಡೆದಿಟ್ಟ ನವನೀತ ಅಂಡಮಾನ್

ಜಿ.ಎನ್. ಅಶೋಕ ವರ್ಧನ

ಅಮೆರಿಕಾದಲ್ಲಿರುವ ನನ್ನೊಬ್ಬ ತಮ್ಮ ಆನಂದವರ್ಧನ. (ಐದು ವರ್ಷ ಕಿರಿಯನಾದರೂ) ನನ್ನ 'ಬಹುಹುಚ್ಚುಗಳ' ನಿಕಟ ಅನುಯಾಯಿ. ಹತ್ತತ್ತಿರ ಎರಡು ವರ್ಷದ ಹಿಂದಿನ ಅನುಭವವಿದಾದರೂ ಪುರುಸೊತ್ತಿದ್ದಾಗ ಉದ್ದಕ್ಕೂ ನಿಧಾನಕ್ಕೆ ಬರಹಕ್ಕಿಳಿಯುತ್ತಲೇ ಇತ್ತು.
ಆನಂದನಿಗೂ ಬ್ಲಾಗಿಗರಿಗೂ ಅದನ್ನು ಒಮ್ಮೆಗೇ ಉಣಬಡಿಸುವ ಉಮೇದು ನನ್ನದು.



ಪತ್ರ ಒಂದು

ಪ್ರಿಯಾನಂದಾ,



ನಿನಗೆ ಬೇಕೋ ಬೇಡವೋ ಎಂಬ ಪ್ರಶ್ನೆ ಇಲ್ಲ, ನನಗೆ ಪುರ್ಸೊತ್ತಾಗಿದೆ, ಅಂಡಮಾನ್ ಪ್ರವಾಸದ ಅನುಭವ (೨೦೦೭ ಏಪ್ರಿಲ್ಲಿಂದ) ವರ್ಷಕ್ಕೂ ಮಿಕ್ಕು ಕಾಲದಿಂದ ಒತ್ತಡ ಹಾಕುತ್ತಲೇ ಇದೆ. ಈಗ ಇಳಿಸ್ಕೊಳ್ಳಲು ನಿನ್ನ ಹೆಸರಿನಲ್ಲಿ ಒಂದಷ್ಟು ಕುಟ್ಟಿ ಕಂತುಗಳಲ್ಲಿ ಬ್ಲಾಗಿಗೇರಿಸಿ ಒಂದಷ್ಟು ಜನರನ್ನು ಗೋಳುಹೊಯ್ಕೊಳ್ತೇನೆ. ಸಿಂಡಿಕೇಟ್ ಬ್ಯಾಂಕಿನ ಗೆಳೆಯರಾದ ಶಕುಂತಲಾ ಉಚ್ಚಿಲ್ ಸುಮಾರು ಹದಿನೆಂಟು ವರ್ಷಗಳ ಹಿಂದೆ ಅಲ್ಲಿಗೆ ವರ್ಗಾವಣೆ ಪಡೆದು ಹೋಗಿದ್ದಾಗ, ಎಡೆಡೆಯಲ್ಲಿ ರಜಾದಲ್ಲಿ ಬಂದಾಗೆಲ್ಲಾ ನಮ್ಮ ಹುಚ್ಚು ಚೆನ್ನಾಗಿ ಗೊತ್ತಿದ್ದುದರಿಂದ "ಬನ್ನಿ, ಭನ್ನೀ"ಂತ ಕರೀತ್ಲೇ ಇರ್ತಿದ್ರು. ಅಖಿಲಭಾರತ ಮಹಾಯಾನದ ('ಕುವೆಂಪು ಸೃಜಿಸಿದೀ ಮಹಾಕಾವ್ಯ' ಎಂಬಂತೆ!) ಕಲ್ಪನೆಗಳಿಗೆ ದಿನ ಹೊಂದಿಸುವ ಉನ್ನತಿಕೆಯಿಂದ ಅಪಾರ ನೀರ ನಡುವಿನ ನಾಲ್ಕೆಂಟು ತುಂಡು ನೆಲ, ಅಲ್ಲಿನ ಒಂದೆರಡು ಬೆತ್ಲೆಪುರ್ಕರನ್ನು ನೋಡಲು ಮನಸ್ಸು ಇಳಿಯಲೇ ಇಲ್ಲ. ಈಚೆಗೆ ಅಂಗಡಿಯ ಶೆಲ್ಫುಗಳ ಪರಿಷ್ಕರಣ, ಮುಖ ಎತ್ತುವಿಕೆ, ಅಭಿಮಾನೀ ಕೊಳ್ಳುಗರಿಗಿನ್ನೊಂದಿಷ್ಟು (ಇಲ್ಲಿ ಓದುಗ ಮಹಾಶಯ ಈಚೆಗೆ ಸಂದುಹೋದ ಕನ್ನಡದ ಮೇರುನಟನ ಪ್ರಿಯಪದದ ಪ್ರಭಾವವನ್ನು ಅವಶ್ಯ ಗಮನಿಸಬೇಕು) ಅನುಕೂಲವೆಲ್ಲ ಕಲ್ಪಿಸುವ ಅಂದಾಜು ಹಾಕಿ ಆಚಾರಿಯ ಬಿಡುವು ಕಾದಿದ್ದೆ. ಅಭಯ ಪ್ರಥಮ ಕನ್ನಡ ವೃತ್ತಿಪರ ಸಿನಿರಂಗದೊಡನೆ ತೊಡಗುವ ಉತ್ಸಾಹದಲ್ಲಿ ಬೆಂಗಳೂರಿಸಿದ್ದಾನೆ. ಬೇಸಗೆಯ ಉರಿ, ಹಂಪನ್ಕಟ್ಟಕ್ಕೆ ಹೋಗುವ ದಾರಿ ಬಂದಾಗಿ ನಿರೀಕ್ಷೆಯ ಜನರ ಸಮ್ಮರ್ದವಿಲ್ಲದ ದಿನ ಎಂದೆಲ್ಲಾ ದುಷ್ಟಗ್ರಹಗಳು ಸೇರಿರುವಂತಾ ಗಳಿಗೆಯಲ್ಲಿ ನಿರೇನ್ ಫಕ್ಕನೆ ದೂರವಾಣಿಸಿ ಕೇಳಿದರು, "ಅಂಡಮಾನಿಗೆ ಬರ್ತೀರಾ? ಆಫ್ ಸೀಸನ್ ರೇಟಿನಲ್ಲಿ ಅಂಡಮಾನಿಗೆ ಹೋಗೋಣ ಬರ್ತೀರಾ?" ನನ್ನ ಸುಮಾರು ಹದಿನಾರು ವರ್ಷಗಳ ಸುಪ್ತ ಬಯಕೆಗೆ ಒಮ್ಮೆಲೇ ಮೀಟುಗೋಲು ಸಿಕ್ಕಿದ ಹಾಗಾಯ್ತು. ಅದೂ ಪೂರ್ತಿ ಪ್ರಯಾಣ ವಿಮಾನದಲ್ಲಾದರೂ ರೈಲು ಹಡಗುಗಳ ಖರ್ಚಿಗೂ ಕಡಿಮೆಯಲ್ಲಿ ಎಂದಾಗ ಯಾಕೆ ಬೇಡ ಎಂದು ದೊಡ್ಡದಾಗಿಯೇ ಹೂಂಗುಟ್ಟಿದೆ. ಅಂದ ಹಾಗೇ ಈ ನಿರೇನ್ ಅಥವಾ ನಿರೇನ್ ಜೈನ್ ಈಚೆಗೆ ಈ ವಲಯದ ವನ್ಯ ಸಂರಕ್ಷಣೆಗೆ ಒದಗಿ ಬಂದ ಬಲುದೊಡ್ಡ ಅದೃಷ್ಟ, ಪುತ್ತೂರು ಮೂಲದ ತರುಣ, ಮಂಗಳೂರಿನಲ್ಲೇ ವೃತ್ತಿಪರವಾಗಿ ನೆಲೆಸಿದ ಆರ್ಕಿಟೆಕ್ಟ್.

ಮಾತುಕತೆ ಬೆಳೆದು ಇನ್ನೇನು ಟಿಕೆಟ್ ತೆಗೆಯಲು ಹೋಗುವುದು ಎಂದು ಲೆಕ್ಕ ತೆಗೆಯುವವರೆಗೆ ಜೊತೆಗಿದ್ದ ಏಕೈಕ ಹೆಸರು ದೇವಕಿಯದು. ಆದರೆ ಸಾಲಿಗ್ರಾಮದ ಎಂಕ್ಟ್ರಮ್ಣ ಉಪಾಯ್ದರೂ ಅಭಯನೂ ಯಾವ ಮಾಯೆಯಲ್ಲಿ ಸೇರಿಹೋದರು ಎನ್ನುವುದನ್ನಷ್ಟು ಹೇಳಲೇಬೇಕು. ನಾನು ಚರವಾಣಿ ತಿರಸ್ಕರಿಸಿದರೆ ಈ ವೆಂಕಟ್ರಮಣ ಉಪಾಧ್ಯರು (ಆ ಕಾಲದಲ್ಲಿ) ಸಾಮಾನ್ಯ ದೂರವಾಣಿ ಸಂಪರ್ಕವನ್ನೂ ದೂರ ಇಟ್ಟಿದ್ದರು. ಇನ್ನು ಅವರಣ್ಣ ಮಂಜ್ನಾತರಿಗೆ ಹೇಳಿ, ಬಿಡುವು ನೋಡಿ, ನಿರ್ಧಾರ ಮಾಡುವುದೆಲ್ಲಾ ಆಪುದಲ್ಲ ಹೋಪುದಲ್ಲಾನ್ನುವಾಗಲೇ ಅಂಗ್ಡೀಲ್ಲಿ ಸ್ವತಃ ವೆಂಕಟ್ರಮಣ (ದೇವರಲ್ಲ, ಉಪಾಯದರು) ಪ್ರತ್ಯಕ್ಷ. ಅವರಂಗಡಿಗೆ ಸಾಮಾನು ಖರೀದಿಸಲು ಮಂಗಳೂರಿಗೆ ಬಂದವರು ಹೀಗೇ 'ಅಶೋಕರನ್ನು ನೋಡದೇ ಬಹುಕಾಲವಾಯ್ತು' ಎಂದು ನನ್ನತ್ತ ಸುಳಿದು ಅಂಡಮಾನ್ ಸೆಳವಿಗೆ ಸಿಕ್ಕಿಕೊಂಡರು. (ಕಡೇ ಮಿನಿಟಿನ ಸೇರ್ಪಡೆಯ ಈ ಹಳೆ ಹುಲಿ, ಉಪಾಧ್ಯ ನಿನಗ್ಗೊತ್ತಲ್ಲಾ? ಅದೇ ಮೈಸೂರಿನ ಬೆಂಕಿ ನವಾಬ ಬೀದೀಂದ ಅದೆಂಥದ್ದೋ ಮಣ್ಣು ತೆಕ್ಕೊಂಡು, ಮಂಗಳೂರು ಬಂದರಿನಿಂದ ಮುರುಕಲು ಹಡಗಿನ ಕಂಡಿ ಗಾಜು ಕೊಂಡು, ಮನೆಯಟ್ಟದಲ್ಲಿ ಅಂಡುಹೋದ ಕುರ್ಚಿಗೆ ಜೋಡಿಸಿ, ವಾರಗಟ್ಟಳೆ ಉಜ್ಜುಜ್ಜುಜ್ಜುಜ್ಜಿ ಮಸೂರ ಮಾಡಿ, ಪೀವೀಸಿ ಕೊಳವೆ ತುಂಡಿಗೆ ಇನ್ಯಾವುದೋ ವಾಶರ್ ಇಟ್ಟು ಮತ್ಯಾವುದೋ ರಿವಿಟ್ಟು ಜಡಿದು ದುರ್ಬೀನಾಗಿಸಿ, ಗ್ರಹಚಾರಗಳಲ್ಲಿ ವಕ್ಕರಿಸಿದ ಹ್ಯಾಲೀ ಧೂಮಕೇತುವಿನ ಫೋಟೋ ತೆಗೆದದ್ದು ನೆನಪಾಯ್ತಾ? ಹೂಂ ಅದೇ ಮನ್ಸಾ!)

ಅಭಯ 'ಯೂತ್ ನೆಕ್ಸ್ಟ್' ಎಂಬ ಸಾಕ್ಷ್ಯ ಚಿತ್ರದ ತಯಾರಿಯಲ್ಲಿ ಹತ್ತಿಪ್ಪತ್ತಕ್ಕೂ ಮಿಕ್ಕು ವಿಮಾನಯಾನದಲ್ಲಿ ಅಖಿಲಭಾರತದ ಹದಿನೈದಕ್ಕೂ ಮಿಕ್ಕು ಸ್ಥಳಗಳನ್ನು ತಿರುಗಿ ಬಂದು, ಉಸಿರುಗಟ್ಟಿ ಹತ್ತು ಕಂತಿನ ಸಾಕ್ಷ್ಯ ಚಿತ್ರ ಮುಗಿಸಿದ್ದ. ಅದರ ಬೆನ್ನಿಗೆ ಒದಗಿದ ತಾರಾಮೌಲ್ಯದ ಸಿನಿಮಾವೊಂದರ ಪೂರ್ವ ಕರ್ಮಗಳಿಗೆ ಬೆಂಗಳೂರಿಗೆ ಓಡಿದ್ದ. ಆದರೆ ಅಲ್ಲಿ ಇವನ ಅದೃಷ್ಟಕ್ಕೆ ಕೆಲಸ ಹತ್ತು ದಿನಗಳಿಗೆ ಮುಂದೂಡಲ್ಪಟ್ಟು "ಅಂಡಮಾನಿಗೆ ನಾನೂ ಇದ್ದೇನೆ" ಎಂದ. ಮತ್ತೆ ನಿರೇನ್ ಮತ್ತು ಅಭಯ

ಲೋನ್ಲಿ ಪ್ಲಾನೆಟ್ಟಿನ ಇಂಡಿಯಾ ಗೈಡ್ ಇಟ್ಟುಕೊಂಡು ಅಂತರ್ಜಾಲದಲ್ಲಿ ಭಾರೀ ಸರ್ಕಸ್ ನಡೆಸಿದರು. ಮುಖ್ಯವಾಗಿ ಹೋಗಿಬರುವಲ್ಲಿ ಕನಿಷ್ಠ ಆರು ಹಾರಾಟಗಳನ್ನು ನಮ್ಮ ಖಜಾನೆಗೆ ವಿಶೇಷ ಪೆಟ್ಟಾಗದಂತೆ, ಬೆಲೆಕಟ್ಟಲಾಗದ ಸಮಯ ವ್ಯರ್ಥ ಸೋರಿಹೋಗದಂತೆ ಹೊಂದಿಸಿ ಮಾಡಿ ಏಪ್ರಿಲ್ ಹದಿನೆಂಟರಿಂದ ಇಪ್ಪತ್ತೈದರವರೆಗೆ ಕಾರ್ಯಕ್ರಮ ಗಟ್ಟಿ ಮಾಡುವಾಗ ತಯಾರಿಗೆ ಉಳಿದ ದಿನಗಳು ಎರಡೇ! ಇಪ್ಪತ್ತರಿಂದ ಅಥವಾ ಇಪ್ಪತ್ತೆರಡರಿಂದ ಸುಮಾರು ಒಂದು ವಾರ ಎಂದು ತೊಡಗಿದ್ದವರು ಎಲ್ಲಾ ನಿಶ್ಚಯವಾಗಿ ಟಿಕೇಟ್ ಬಂತು ಎನ್ನುವಾಗ ಹದಿನೆಂಟರಿಂದ ಇಪ್ಪತ್ತೈದು ಎನ್ನಬೇಕೇ! ಪ್ರಸ್ತುತ ಪ್ರವಾಸದ ಮುಖ್ಯ ಪ್ರಯಾಣದ ವಿವರಗಳ ಮಟ್ಟಿಗೆ ಅಭಯ, ದ್ವೀಪಸ್ತೋಮದಲ್ಲಿ ಏನೇನೋ ನೋಡಲು ಎಲ್ಲೆಲ್ಲಿ ಸುತ್ತಬೇಕು ಎಂಬ ಸೂಕ್ಷ್ಮಗಳ ಬಗ್ಗೆ ನಿರೇನ್ ಹೊಣೆವಹಿಸಿಕೊಂಡರು. ಮತ್ತೆ ನನ್ನ ನಾಯಕತ್ವ ಎಂದು ಪ್ರಶ್ನಿಸಿದ್ಯಾ? ಇಂಥಾ ಸಂಶಯಗಳು ಮುಂದೆಯೂ ಕೆಲವು ಬರಬಹುದಾದ್ದರಿಂದ ಓದುಗ ಮಹಾಶಯ ನನ್ನನ್ನು ಕಿಂಗ್ಮೇಕರ್ ಎಂಬ ಮತ್ತಷ್ಟು ಉಚ್ಚಸ್ಥಾನದಲ್ಲಿ ಗುರುತಿಸತಕ್ಕದ್ದು; ಮೀಸೆ ಮಣ್ಣಾಗಿಲ್ಲ ಏನು!

ದಿನ ಒಂದು (ಏಪ್ರಿಲ್ ೧೮)

ಸ್ಟಾರ್ಟಿಂಗ್ ಟ್ರಬಲ್ಸ್

ಕನಿಷ್ಠ ಒಂದು ವಾರವಾದರೂ ಅಂಗಡಿಯಲ್ಲಿ ನೋಟೀಸು ಹಚ್ಚಿ ಮತ್ತೆ ಬಾಗಿಲಮೇಲೂ ಹಚ್ಚಿ ಹೋಗಬೇಕು, ಪೂರ್ವಸೂರಿಗಳ ಅನುಭವಕಥನಗಳೆಲ್ಲವನ್ನೂ ಸಮೂಲಾಗ್ರ ಓದಿ, ಟಿಪ್ಪಣಿ ಮಾಡಿ, ಕೆಲವಂ ಬಿಲ್ಲವರಿಂದ, ಅಲ್ಲಲ್ಲ (ಇದು ಅಂಗಡಿಯ ಶಾಂತ್ರಾಮನ್ನ ತಮಾಶೆ ಮಾಡಿ ಮಾಡಿ ರೂಢಿಸಿದ ಪ್ರಯೋಗ. ಮತ್ತೆ ಲಟಪಟಾಚಾರಿ ನೆಪದಲ್ಲಿ ಕಾರಂತರು ಕೆಟ್ಟಂತೆ ನನ್ನನ್ನು ಯಾರಾದರೂ ನರಕಕ್ಕಟ್ಟು ನಾಲ್ಗೆ ಸೀಳ್ಸಿಯಾರಲ್ವಾ) ಬಲ್ಲವರಿಂದ ಕಲ್ತು ಎಂಬೆಲ್ಲಾ ಯೋಚನೆ ಬಿಟ್ಟು, ೧೮ರ ಬೆಳಿಗ್ಗೆ ಮಂಗಳೂರಿನಿಂದ ಬೆಂಗಳೂರಿಗೆ ಹೊರಟೇ ಬಿಟ್ಟೆವು. ನಮ್ಮ ಸಂಖ್ಯೆ ಐದು, ಗೊತ್ತಲ್ಲಾ ಅಮ್ಮ ಹೇಳಿಯಾಳು ಪಂಚಮಂ ಕಾರ್ಯಸಿದ್ಧಿಃ (ಪಂಚಪಾಂಡವರೂಂದ್ರೇ ಮಂಚದ ಕಾಲಿನ ಹಾಗೆ ಕೈಯಲ್ಲಿ ಮೂರು ತೋರ್ಸಿ ಎರ್ಡು ಹೇಳಿದ ಹಾಗಲ್ಲ ದಾನೇ?) ಏರ್ ಡೆಕ್ಕನ್ನಿನವರ ವಿಚಿತ್ರ ಕೊಡುಗೆಗಳ ಲಾಭದಲ್ಲಿ ಮಂಗಳೂರು–ಬೆಂಗಳೂರು–ಚೆನ್ನೈ–ಪೋರ್ಟ್ ಬ್ಲೇರ್ (ಅಂಡಮಾನಿನ ರಾಜಧಾನಿ) ಹಾಗೇ ವಾಪಾಸು ಟಿಕೆಟ್ಟುಗಳು (ಇದರಲ್ಲಿ ಬ್ಲೇರಿನಿಂದ ಚೆನ್ನೈಗೆ ಮಾತ್ರ ಏರ್ ಇಂಡಿಯಾ ಹಿಡಿಯಬೇಕಾಯ್ತು) ನಮ್ಮ ಕೈಯಲ್ಲಿದ್ದವು. ಮನೇಂದ ನಿಲ್ದಾಣಕ್ಕೆ ಮತ್ತೆ ಒಳಗಿನ ಔಪಚಾರಿಕತೆಗೆ ಹಾಳಾಗುವ ಸಮಯಕ್ಕೆ ವಾಸ್ತವದ ಬೆಂಗಳೂರು ಪಯಣದ ಅವಧಿ ಹೋಲಿಸಿದರೆ ನಾವು ಕನಿಷ್ಠ ಎರಡು ಬಾರಿ ಬೆಂಗಳೂರಿಗೆ ಹೋಗಿಬರಬಹುದಿತ್ತು! ಸಮುದ್ರಕ್ಕೆ ದೂರದ ಸಲಾಂ. ಸೂರ್ಯನ ಕಣ್ಣಿರಿಯುವ ಗುರಿ ವಿಮಾನದ್ದು. ಇದು ನೇತ್ರಾವತಿಯೇ? ಇದು ಉಪ್ಪಿನಂಗಡಿಯ ಸಂಗಮವೇ? ಪಶ್ಚಿಮ ಘಟ್ಟದ ಮಹಾಗಂಬಳಿಯಲಿಷ್ಟೊಂದು ಹರಕೇ? ಹೀಗೇ ವಿಸ್ಮಯಗಳು ಮೂಡುವುದರೊಳಗೆ ಹೊಸಹೊಸತು ಕಿಟಕಿಯಂಚಿನಾಚೆ ಕಾದಿರುತ್ತಿತ್ತು. ನಾವು ಕಂಡ ಜಲಾಶಯವನ್ನು ಹೇಮಾವತಿ ಹಾರಂಗಿ ಅಣೆಕಟ್ಟುಗಳ ನಡುವೆ ಇತ್ಯರ್ಥ ಮಾಡಲಾಗಲಿಲ್ಲ. ಶ್ರವಣಬೆಳ್ಗೊಳದ ಗೊಮ್ಮಟಗಿರಿಯೇ ಶಿವಗಂಗೆಯ ಮಹಾ ಬಂಡೆಯೇ ಎಂದು ಚೌಕಾಸಿ ಮುಗಿಯುವುದರೊಳಗೆ ನಿರ್ವಿವಾದವಾಗಿ ಬೆಂಗಳೂರು ಧಾವಿಸಿ ಬಂದಿತ್ತು.

ಸದ್ಯದಲ್ಲೇ ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಲಿದ್ದ ಅಭಯ ಅಲ್ಲಿವರೆಗೆಂದೇ ಎರಡು ಭಾರೀ ಪೆಟ್ಟಿಗೆಗಳಷ್ಟು ಖಾಸಗಿ ಸಾಮಾನುಗಳನ್ನು ಸಾಗಿಸಿದ್ದ. ಹತ್ತುಗಂಟೆಗೆ ಇಳಿದವರಿಗೆ ಮಧ್ಯಾಹ್ನ ಒಂದು ಹತ್ತರವರೆಗೂ ಬಿಡುವು. ಅಭಯ ತನ್ನ ಸಾಮಾನು ಸಾಗಣೆಗೆ ಹೋದ. ಕನಿಷ್ಠ ಎರಡು ಗಂಟೆಯುದ್ದಕ್ಕೆ ವ್ಯಾಪಿಸಬೇಕಿದ್ದ (ಕಾಯುವ ಸಮಯವನ್ನು) ಆಲಸ್ಯವನ್ನು ಕಡಿಮೆ ಮಾಡುವಂತೆ ಹೊರೆ ನೂಕುವ ಗಾಡಿಯೊಡನೆ ಕಾಲೆಳೆಯುತ್ತಾ ಹೋದ ನಮಗೆ ಎದೆಗುಂದಿಸುವಂತೆ ಸಿಕ್ಕಿತು ಸುದ್ದಿ! ಏರ್ ಡೆಕ್ಕನಿನ ಮಧ್ಯಾಹ್ನದ ನಮ್ಮ ಯಾನ ರದ್ದಾಗಿದೆ. ಬಸ್ನಿಲ್ದಾಣದ ತಾರಸ್ಥಾಯಿಯ ವಿಚಾರಣೆ ಬಿಟ್ಟು (ಮತ್ತೆ ಸ್ಥಳಗೌರವ ಕಾಪಾಡಬೇಕಲ್ಲ) ಸಾಕಷ್ಟು ಎಕ್ಸ್ಕ್ಯೂಸ್ಮಿಗಳು, ಪಾರ್ಡನ್ಮಿಗಳು ವ್ಯಯಿಸಿದಾಗ ರಾತ್ರಿ ಹತ್ತು ಐವತ್ತರ ಯಾನದಲ್ಲಿ ನಮಗೆ ಸೀಟು ಹೊಂದಿಸಿಕೊಡುವ ಕೃಪೆ ಮಾಡಿದರು. ನಿರ್ದಾಕ್ಷಿಣ್ಯವಾಗಿ ನಮ್ಮ ಕಾರ್ಯ ಗೌರವ ಒಂದಕ್ಕೇ ಚೂಪುಗೊಟ್ಟಾಗ (ಈಗ ಬೇಕಾದ್ರೆ ಬಸ್ ನಿಲ್ದಾಣದ ಸ್ಟೈಲ್ ಅನ್ನು ಅಥವಾ ಇನ್ನೂ ವಾಚ್ಯವಾಗಿ ಹೇಳುವುದಾದರೆ ನಮ್ಮಂಗಿ ಕೈ ಮೇಲ್ಮಾಡಿ, ಕಾಲರ್ ಕುತ್ತ ಮಾಡಿ, ಸ್ವಾಗತಕಾರನ ಕತ್ತ್ನ ಪಟ್ಟಿ ಹಿಡ್ದ್ ಬೋ?. ಮಗ, ಸೂ? ಮಗ ಹೇಳೋ ಮಟ್ಟಕ್ಕಿಳಿದಾಗ) ಕ್ಷಮೆ ಯಾಚಿಸುತ್ತಾ ರಾತ್ರಿ ಏಳೂವರೆಗೆ ಹೊಂದಿಸಿ ಕೊಟ್ಟರು. ಉಳಿದ ಸಮಯ ಕೊಲ್ಲುವ ಕೆಲಸದಲ್ಲಿ ನಿಲ್ದಾಣದ ಸೋಮಾರಿ ಕಟ್ಟೆ ಸಾಕಷ್ಟು ಬಳಸಿದೆವು. ಅಲ್ಲಿನ ದುಬಾರಿ ಊಟ ಕಾಪಿ ತಿರಸ್ಕರಿಸಿ, ನಿಲ್ದಾಣದ ಪರಿಸರ ಮೀರಿ ಅಂದರೆ ನೂರು ಮೀಟರಾಚೆ ಊರಿನ ಬೆಲೆಯ ಒಳ್ಳೆಯ ಹೋಟೆಲಿರುವುದನ್ನೂ ಶೋಧಿಸಿದೆವು! ವಿಮಾನ ನಿಲ್ದಾಣದಲ್ಲಿ ತಂಗುವ ಯಾವುದೇ ವಾಹನಕ್ಕೆ ದುಬಾರಿ ನೆಲ ಬಾಡಿಗೆ ಬೀಳುವುದರಿಂದ ಮತ್ತದರ ಗಡಿಯಾಚೆ ಅಂದರೆ ಅದೇ ನೂರು ಮೀಟರ್ ನಡೆದರೆ ಊರಿನ ಎಲ್ಲಾ ಸಾರಿಗೆ

ಸೌಕರ್ಯಗಳೂ ಲಭ್ಯ ಎಂದೂ ಕಂಡುಕೊಂಡೆವು (ಅಭಯ ಅವಸರದಲ್ಲಿ ಎಂಜಿ ರಸ್ತೆಗೆ ಆಟೋರಾಕ್ಷಸನಿಗೆ ಐವತ್ತು ರೂಪಾಯಿ ದಂಡ ತೆತ್ತರೆ ನಾನು ವಿರಾಮದಲ್ಲಿ ಎಂಟೇ ರೂಪಾಯಿಯ (ಕೊಲಂ)ಬಸ್ಸೇರಿದ್ದೆ!). ರಾತ್ರಿಯೂ ಸಾಕಷ್ಟು ಜ್ಞಕ್ಕು ಜ್ಞಿಕ್ಕಿ ಮಾಡಿದ ವಿಮಾನ ಕಂಪೆನಿ ಹತ್ತು ಗಂಟೆಗೆ ನಮ್ಮನ್ನು ಚೆನ್ನೈಗೆ ಹೊತ್ತು ಹಾಕಿತು. ಅಲ್ಲಿ ಹತ್ತೋ ಹನ್ನೆರಡೋ ಕಿಮೀಯಾಚೆಗಿದ್ದ ಪಾಂಗ್ರೋವ್ ಹೋಟೆಲ್ ನಮ್ಮನ್ನು ಕಾದಿದ್ದರೂ ದಾರಿಯಾವುದಯ್ಯಾ ಎಂದು ಸಿಕ್ಕ ಕಾರೋ ಜನವೋ ಕೇಳುವಂತಿರಲ್ಲಿಲ್ಲ. ಇದಕ್ಕಾಗಿಯೇ ಮಾಡಿದ ಪೂರ್ವಪಾವತಿಯ ಕಾರಿನ ವ್ಯವಸ್ಥೆಗೆ ಶರಣಾಗಿ, ವ್ಯಾಜ್ಯಗಳಿಲ್ಲದೆ ಹೋಟ್ಲ್ ತಲಪಿದೆವು. ಖಂಡಿತವಾಗಿಯೂ ಊರಿನ ದರಕ್ಕೆ ಎರಡುಪಟ್ಟು ಜಾಸ್ತಿಯೇ ಈ ಪ್ರೀಪೇಡ್ ವ್ಯವಸ್ಥೆಯಲ್ಲಿರಬಹುದು ಅದರೆ ಉತ್ತರೋತ್ತರವಾಗಿ ಇಳಿದು ಹೋಗುವಾಗ 'ಮೊದಲೇ ಕೊಡಲಿಲ್ಲವೇ' ಎನ್ನುವ ಗತ್ತು, ಗೌರವ ನಮಗಿತ್ತು! ಮತ್ತೆ ಅಜ್ಞಾನಂ ಪರಮ ಸುಖಂ!

ಪ್ಲಗ್ ಕ್ಲೀನಿಂಗ್



ಹೋಟೆಲ್ ಪಾಂಗ್ರೋವ್ ಸುಲಿಗೆಗೇ ಇದ್ದಂತಿತ್ತು. ಐದು ಜನರ ಚೀಲಗಳಲ್ಲಿ ಎಲ್ಲೋ ಒಂದನ್ನು ಒಬ್ಬ ಮುಟ್ಟಿದ್ದಕ್ಕೆ, ಕುಡಿಯುವ ನೀರು ಇಟ್ಟದ್ದಕ್ಕೆ, ಹೆಚ್ಚುವರಿ ಹಣ ಕೊಟ್ಟೇ ಪಡೆದುಕೊಂಡ ಹೆಚ್ಚಿನ ಹಾಸಿಗೆ ಹಾಕಿದ್ದಕ್ಕೆಲ್ಲಾ ನೇರ ಭಕ್ಷೀಸು ಕೇಳಿದವರೊಡನೆ ನಮಗೆ ರೋಸಿಹೋಯ್ತು. ಇನ್ನು ಅಲ್ಲಿನ ಕ್ಯಾಂಟೀನಿನಲ್ಲಿ ಊಟಮಾಡಿದರೆ ಪ್ರತಿ ಚಮಚಾ, ಲೋಟವೂ 'ಮೂಮೆಂಟ್ ಆರ್ಡರ್' ನಿರೀಕ್ಷಿಸಿದರೆ, ಅದನ್ನು ನಾವು ಪ್ರತಿಭಟಿಸುತ್ತಾ ಕೂತರೆ ಬೆಳಗ್ಗಿನವರೆಗೂ ಬಗೆಹರಿಯಲಾರದು ಎಂದನ್ನಿಸಿ ಪಕ್ಕದ ಎರಡೆರಡು ಹೋಟೆಲನ್ನು ಸ್ವಲ್ಪ ಶೋಧಿಸಿದೆವು. ಕೊನೆಗೆ ಬೆಳಿಗ್ಗೆ ದುಬಾರಿ ಹೋಟೆಲ್ ಬಿಲ್ಲ್ ಕೊಟ್ಟು ಹೊರಟದ್ದಕ್ಕೂ ಭಕ್ಷೀಸು ಕೇಳುತ್ತಿದ್ದ ಸಿಬ್ಬಂದಿ ಒಟ್ಟಾರೆ ತಮಿಳರ ಬಗ್ಗೇ ನಮಗೆ ಹೇಸಿಗೆ ಹುಟ್ಟಿಸಿಬಿಟ್ಟಿತು. ಅಭಯನಂತೂ ತಮಿಳ್ನಾಡ್ ರೆಜಿಮೆಂಟ್ ಎಂದೇ ನಾಮಕರಣ ಮಾಡಿಬಿಟ್ಟ! ಎಲ್ಲ ಮುಗಿಸಿ ಹೊರಡುವಾಗ ಸಿಬ್ಬಂದಿವರ್ಗಕ್ಕೆ ಆಯ್ದ ಶಬ್ದಗಳ ಆಶೀರ್ವಚನ ಕೊಡುವುದಂತೂ ಮರೆಯಲಿಲ್ಲ. ತಮಾಷೆ ಎಂದ್ರೆ ಇದರ ಯಜಮಾನಿಕೆ ನಮ್ಮ ಮೂಡಬಿದ್ರೆಯವರದ್ದೇ ಅಂತೆ. ದಿನ ಎರಡು (೧೯) ಮರು ಬೆಳಿಗ್ಗೆಗೆ ಕಾರು ಕೇಳಿದ್ದಂತೆ ಬಂದದ್ದು ಮತ್ತು ತಕರಾರಿಲ್ಲದೆ ಆತ ನಿಗದಿತ ಬಾಡಿಗೆಗೆ ನಮ್ಮನ್ನು ವಿಮಾನ ನಿಲ್ದಾಣಕ್ಕೆ ಮುಟ್ಟಿಸಿದ್ದು ಪ್ರತಿ ಕಾನೂನಿಗಿರುವ ವಿನಾಯ್ತಿಯಂತೆ (ಪ್ಯೂರ್ ಕನ್ನಡದಲ್ಲಿ ಹೇಳುವುದಾದರೆ, ರೂಲಿಗಿರುವ ಎಕ್ಸೆಪ್ಷನ್ನಿನಂತೆ) ಕಾಣಿಸಿತು.

ದಿನ ಎರಡು (ಏಪ್ರಿಲ್ ೧೯)

ನಿಲ್ದಾಣದೊಳಗಿನ ಕಾಫಿ ಅಡ್ಡಾಗಳಲ್ಲಿ ಏನು ತಿಂದರೂ ನಮಗೆ ಅಜೀರ್ಣವಾಗುವಂತಿತ್ತು ಬೆಲೆ. ಮತ್ತೆ ಸಣಕಲು ಬ್ರೆಡ್ಡೋ ನಿರ್ಗುಣ ಬೆಣ್ಣೆಯೋ ಸಿಹಿಯೊಂದೇ ಗುಣವೆನ್ನುವ ಜ್ಯಾಮೋ ಚಟಾಕು ಲೋಟ ಯೂನಿಟೇಸ್ಟಿನ (ಬೇರೆಬೇರೆ ಕೊಳಾಯಿಯಡಿ ಹಿಡಿದರೂ ಆಕರ್ಷಕ ನಾಮಫಲಕಗಳು ಏನು ಹೇಳಿದರೂ ಆಚಾರವಿಲ್ಲದ ನಾಲಗೆ ಕಾಫಿ, ಟೀ ನಬೇಧಃ ಎಂದು ಬಿಡುತ್ತದೆ) ಬಿಸಿನೀರಿಗೆ ಐದು ರೂಪಾಯಿ ಕೊಡಬೇಕಲ್ಲಾ ಎಂದು ಸಂಕಟವಾಯ್ತು. ಹಾಗೇ ನಿಲ್ದಾಣದ ಹೊರ ವಲಯದಲ್ಲಿ ಸುತ್ತು ಹಾಕುವಾಗ ಒಂದು ದರ್ಶಿನಿ ತರದ್ದು ಸಿಕ್ಕಿ, ಬೆಲೆ ಮತ್ತು ರುಚಿಯಲ್ಲಿ ಸಮಾಧಾನಿಸಿತು. ನಮ್ಮೆಲ್ಲ ಗಂಟುಗದಡಿ ಒಳಗೆ ಸಾಗಿಸಿಯಾಗಿದ್ದರೂ ಒಬ್ಬಿಬ್ಬರು ಪಾರಕ್ಕೆ ಕುಳಿತು, ಸರದಿಯ ಮೇಲೆ ಎಲ್ಲ ಹೊರಗೆ ಹೋಗಿ ಬಂದು ಮನಸೋ ಇಚ್ಛೆ ಮೇಯ್ದು ಬಂದೆವು. ಬೇಲಿಯಾಚಿನ ರುಚಿ ಯಾವತ್ತೂ ಹೆಚ್ಚೇ!

ಅಜ್ಜಿ ಪುಣ್ಯಕ್ಕೆ ಸರಿಯಾದ ಸಮಯಕ್ಕೇ ಎಂಬಂತೆ (ಅಂದರೆ ಸ್ವಲ್ಪ ತಡವಾಗುವುದು ನಮಗೆ ರಕ್ತಗತವಾಗಿಬಿಟ್ಟಿರುವುದರಿಂದ ಗೊತ್ತಾಗುವುದೇ ಇಲ್ಲ!) ಹೊರಟ ವಿಮಾನ ಎರಡೇ ಮಿನಿಟಿನಲ್ಲಿ ನಮ್ಮನ್ನು ಕೊನೆಗಾಣದ ನೀಲಿಮೆಗೆ ಹಚ್ಚಿತು! ಹಾರುವ ಎತ್ತರ, ಬಿತ್ತರ, ದಿಕ್ಕು, ಸಮಯ ಒಂದರ ಅರಿವಾಗದಂತೆ ವಿಮಾನದ ಏಕಶ್ರುತಿಯೊಂದೇ ಕೇಳುತ್ತಿತ್ತು. ಹಿಂದೆ ಯಾರನ್ನೋ ವಂಚಕರು ಗಲ್ಫಿಗೆ ಮುಟ್ಟಿಸುತ್ತೇವೆಂದು ಎಲ್ಲೋ ದೋಣಿಗೆ ಹತ್ತಿಸಿ ಒಂದಷ್ಟು ಸಮುದ್ರ ಸುತ್ತಿಸಿ ಇನ್ನೆಲ್ಲೋ ಇಳಿಸಿ (ಇಲ್ಲೇ ಭಾರತದಲ್ಲಿ) ಬಿಡುತ್ತಿದ್ದರಂತೆ. ಹಾಗಾಗುವ ಯಾವ ಭಯವೂ ಇಲ್ಲದಿದ್ದರೂ ಯೋಚನೆ ಬಂದದ್ದಂತೂ ನಿಜ. ನನಗೆ ಹಿಂದೆ ಅಪ್ಪಮ್ಮರೊಡನೆ ದಿಲ್ಲಿಗೆ ಹೋಗಿಬಂದದ್ದೊಂದೇ ವಿಮಾನ ಪ್ರಯಾಣದನುಭವ. ಆಗ ಗಾಳಿಯಲ್ಲೇ ತಿಂಡಿಯೋ

ಊಟವೋ ಎಡೆ ತಿನಿಸುಗಳೋ ಬಂದದ್ದು ಭಾರೀ ಮಜಾ ಅನ್ನಿಸಿತ್ತು. ಈ ಬಾರಿ ಮೊದಲ ಎರಡು ಹಾರಾಟ ತೀರಾ ಸಣ್ಣ ಪ್ರಯಾಣಗಳೆಂದು ಉಪೇಕ್ಷಿಸಿದರೂ ಈಗಿನದ್ದು ಹಾಗಲ್ಲ, ಏನಾದರೂ ಕೊಟ್ಟಾರು ಎಂಬ ನಿರೀಕ್ಷೆ ಬಂದದ್ದು ಸುಳ್ಳಲ್ಲ. ಅದಕ್ಕೆ ಸರಿಯಾಗಿ ಮೊದಲೆರಡರ ಸಣ್ಣ ಅವಧಿಯನ್ನೂ ಬಿಡದಂತೆ, ಇಲ್ಲೂ ಏರ್ ಡೆಕ್ಕಾನ್ ಸಿಬ್ಬಂದಿಗಳೂ ಗಾಡಿಯಲ್ಲಿ ಏನೇನೋ ತಿಂಡಿ ತಿನಿಸೇನೋ ತಂದರು. ಆದರೆ ಎಲ್ಲಾ (ಕುಡಿಯುವ ನೀರೂ) ಒಂದಕ್ಕೆ ಹತ್ತರ ಬೆಲೆಯಲ್ಲಿ ಮಾರಾಟಕ್ಕೆ ಮಾತ್ರ. ಅಷ್ಟಕ್ಕೆ ಮುಗಿಯಲಿಲ್ಲ. ನಾವು ವಿಮಾನ ಹತ್ತಿ ಕುಳಿತುಕೊಳ್ಳುವಾಗಲೇ ಪ್ರತೀ ಸೀಟಿನ ಮೇಲೆ ಬಾರ್ಗೈನ್ ಆಫರಿನ ಮೂವತ್ತು ನಲವತ್ತು ಸಾಮಾನುಗಳ ಸಚಿತ್ರ ಪಟ್ಟಿ ಬಿದ್ದುಕೊಂಡಿರುತ್ತಿತ್ತು. ಹಿಂದಿನೆರಡು ಪ್ರಯಾಣದಲ್ಲಿ ಸಮಯ ಸಾಲದ್ದರಿಂದಲೋ ಏನೋ ಎರಡೆರಡು ಬಾರಿ “ಮಾದರಿಗಳನ್ನು ತರಿಸಿಕೊಂಡು ನೋಡಲು ದಯವಿಟ್ಟು ದಾಕ್ಷಿಣ್ಯ ಮಾಡಬೇಡಿ” ಎಂದು ಭಾರೀ ವ್ಯಾಪಾರೀ ನಯಸಾಣೆಯಲ್ಲಿ ಗಗನ ಸಖಿಯರು ಘೋಷಿಸಿದ್ದರು. ಇಲ್ಲಿ ಅವನ್ನು ಗಾಡಿಯಲ್ಲಿ ಹೇರಿಕೊಂಡು ಬಂದು ಆಮಿಷ ಹೆಚ್ಚಿಸಿದರು. ದೀರ್ಘ ಪ್ರಯಾಣದ ಬಸ್ಸು ನಿಲ್ದಾಣಕ್ಕೆ ನುಗ್ಗಿ ನಿಂತಾಗ, ಸಾಲುಗಟ್ಟಿ ನುಗ್ಗುವ “ಕ್ಯೂಲ್ ಡ್ರೀಂಕ್ಸ್, ಆಹ್! ಪ್ಯಾರೀಸ್ ಸ್ವೀಟ್ಸ್, ಆರೆಂಜಾರೆಂಜೀ, ಪೇಪಾರ್, ಧರ್ಮಾಕೊಡೀ? ಒಂದ್ರುಪಾಯಾದ್ರೂ ಕೊಡೀ?” ಇತ್ಯಾದಿಗಳಿಗೆ ಏನೂ ಬಿಟ್ಟುಕೊಡದ ವೈಮಾನಿಕ ಮಾರ್ಕೆಟಿಂಗ್ ನೋಡಿ ನಗಬೇಕೋ ಅಳಬೇಕೋ ತಿಳಿಯಲಿಲ್ಲ. ಆದರೆ ಎಲ್ಲರೂ ನಮ್ಮ ಹಾಗೆ ‘ಜಗತ್ತಿಗೆ ಆದರ್ಶ’ ಕಲ್ಪಿಸುವ ಉರಿಮುಸುಡು ಹೊತ್ತು ಕುಳಿತಿರಲಿಲ್ಲ. ಏನೋ ಪರ್ಸಂತೆ, ತುರ್ಕಿ ಟವಲಂತೆ. ಯಾರ್ಯಾರೋ ಕೊಂಡರು, ಒಟ್ಟಾರೆ ವ್ಯಾಪಾರ ಬುರೂಸ್ ಅಲ್ಲ! ಬರಿಯ ನೀರು ಕೊಂಡರು, ಹೆಚ್ಚಿನ ಬೆಲೆಯ ಕಲಂಕು ನೀರೂ (ಕ್ಷಮಿಸಿ, ಅದಕ್ಕವರು ಚಾಯ ಎನ್ನುತ್ತಾರೆ!) ಕೊಂಡು ಕುಡಿದವರು ಉಂಟು. ನನ್ನ ಪಕ್ಕದ ಘನಾಂದಾರೀ ವ್ಯಕ್ತಿಯೊಬ್ಬ ನಾವು ಕಿಟಕಿಯ ಹೊರಗಿನ ದೃಶ್ಯಕ್ಕೆ ಸಂಭ್ರಮ ಪಡುವುದು ಕಂಡು ಸರಿಯಾಗಿಯೇ ವಿಮಾನ ಯಾನದ ಅನುಭವ (ಇಲ್ಲದವರು?) ಕಡಿಮೆಯಿರುವವರು ಎಂದು ಗ್ರಹಿಸಿದ್ದ. ಇಲ್ಲಿನ ಮರ್ಜಿಯನ್ನು ನಮಗೆ ಪ್ರದರ್ಶನ ಪಾಠಮಾಡುವವನ ಗೈರತ್ತಿನಲ್ಲಿ ಎದುರು ಸೀಟಿನ ಹಿಂಬದಿಯ ಮೇಜನ್ನು ಬಿಡಿಸಿಕೊಂಡು ಒಂದು ನೀರಿನ ಅಂಡೆ ಮತ್ತೇನೋ ತಿನಿಸು ಕೊಂಡು ಪ್ರತಿಷ್ಠಾಪಿಸಿದ. ನನ್ನ ಕಣ್ಣು ಕದ್ದು ನೋಡುತ್ತಿತ್ತು, ಮೂಗಿಗೇನೂ ದಾಕ್ಷಿಣ್ಯವಿರಲಿಲ್ಲ. ಏನೋ ಅದ್ಭುತ ಅನಾವರಣಗೊಳ್ಳುತ್ತದೆ, ರಸಘಟ್ಟಿ ಪರಿಮಳಿಸಲಿದೆ ಎಂಬ ಕುತೂಹಲ. ಆದರೆ ಇದ್ದದ್ದೇನು? ಬೆಣ್ಣೆ ತೋರಿಸಿದ, ಜ್ಯಾಂ ಮೂಸಿಸಿದ ಎರಡು ಬ್ರೆಡ್ಡಿನ ಹಳಕುಗಳು! ಮೂವತ್ತೋ ನಲವತ್ತೋ ಕಕ್ಕಿದ್ದಕ್ಕೆ ಸರಿಯಾಗಿ ಆತ ಅದನ್ನು ‘ಪರಿಷ್ಕಾರವಾಗಿ’ ತಿಂದು, ಗಂಗೋದಕವನ್ನು ಕುಡಿದ. ನಿಜಾ ಹೇಳಬೇಕೆಂದರೆ ಆ ಬ್ರೆಡ್ಡು ನನ್ನ ಹಲ್ಲಿನ ತೂತು ತುಂಬಲೂ ಸಾಲದಿತ್ತು. ಇನ್ನು ನೀರು ನವರಾತ್ರಿಯಲ್ಲಿ ಪಂಚಾಮೃತಕ್ಕೆ ಕೈ ಒಡ್ಡಿದಾಗ ಅಣ್ಣ (ನಿಜದಲ್ಲಿ ಸೋದರ ಮಾವ) ಉದ್ಧರಣೆಯಲ್ಲಿ ಕೈ ತೊಳೆಯಲೆಂಬಂತೆ ಬಿಡುವ ನೀರ ಬೊಟ್ಟಿಗೂ ಸಮವಿರಲಿಲ್ಲ!

ಇಲ್ಲಿ ನನ್ನ ಬಾಲ್ಯದ ನೆನಪು ಸ್ವಲ್ಪ ಹೇಳಲೇಬೇಕು. (ಇದು ನಿನಗಷ್ಟಾಗಿ ದಕ್ಕಿರಲಾರದು, ಯಾಕಂದರೆ ನಿನ್ನ ಬಾಲಲೀಲೆಗಳು ವಿಕಸಿಸಿದ್ದು ಬಳ್ಳಾರಿ, ಬೆಂಗಳೂರ ಹಿನ್ನೆಲೆಯಲ್ಲಲ್ಲವೇ?) ಪುತ್ತೂರಿನಿಂದ (ಅಜ್ಜನ ಮನೆ) ಮಡಿಕೇರಿಗೆ ಅಪರಾಹ್ನ ಹೊರಟ ಕೂರ್ಗ್ ಟ್ರಾನ್ಸ್ಪೋರ್ಟ್ ಓಡೋಡೋಡಿ, ಏದುಸಿರು ಬಿಡುತ್ತಾ ಅರೆಘಟ್ಟ ಹತ್ತುವಾಗ ಜೋಡುಪಾಲ ಸಿಗುತ್ತದೆ. ಅಲ್ಲಿ ಅದು ನಿಲ್ಲುವುದು ತಡವಾಯ್ತೆಂಬಂತೆ ಜನ ಹಾರಿಳಿದು, ಮುರುಟಿದ ಕೈಕಾಲು ಬಿಡಿಸಿ, ನಸು ಚಳಿಗೆ ಆಆಆಆಃ ಎಂದು ಮೈಮುರಿದು ನೀರು ಸುರಿವ ದಂಬೆಗಳ ಮರೆಯ ಕ್ಯಾಂಟೀನು ಸೇರುತ್ತಿದ್ದರು. ದೋಸೆ, ಚಟ್ನಿ, ಪಲ್ಯ, ಸಾಂಬಾರುಗಳ ಪರಿಮಳ ಸುಳಿಸುಳಿದು ಬಂದು ನನ್ನ ಮೂಗನ್ನು ಕೆಣಕುತ್ತಿತ್ತು. ಆದರೇನು ಅಪ್ಪಮ್ಮರ ಆರೋಗ್ಯ ಪ್ರಜ್ಞೆಯೋ ಅನಾವಶ್ಯಕ ಖರ್ಚುಗಳನ್ನು ನಿಯಂತ್ರಿಸುವ ಕ್ರಮವೋ ನಾಲಗೆ ಚಪ್ಪರಿಸಿ ಉತ್ತರಿಸಲು ಅವಕಾಶ ಒದಗಿಸಿದ್ದೇ ಇಲ್ಲ. ಹುಡುಗಾಟಿಕೆಯಲ್ಲಿ ಎಷ್ಟೋ ಬಾರಿ ಇದು ಜಿಪುಣತನವೇ ಇರಬೇಕೆಂದು ಕಂಡದ್ದೂ ಇತ್ತು. ಆದರೆ ಇಂದು ನಾನೇ ಯಜಮಾನನಾಗಿಯೂ ಬಾಯಿ ಚಪಲವೇನೂ ಕಡಿಮೆಯಾಗಿಲ್ಲದಿದ್ದರೂ ಬುದ್ಧಿಪೂರ್ವಕವಾಗಿ (ವಿಮಾನದಲ್ಲಿ) ‘ತಿಂಡಿ ತೀರ್ಥಗಳನ್ನು’ ತಿರಸ್ಕರಿಸಿದ್ದಕ್ಕೆ ವಿಷಾದವಿಲ್ಲ. (ಅಭಯನ್ನ ಕೇಳಿಲ್ಲ, ಆದರೂ ಯಾರೂ ಜಿಪುಣತನದ ಆಪಾದನೆ ಹೊರಿಸಲಾರರು!). ವಿಮಾನದ ಈ ಜಿಗುಪ್ಸೆಯ ವಹಿವಾಟುಗಳಿಗೆ ಕೊನೆ ತರುವಂತೆ ಪೋರ್ಟ್ ಬ್ಲೇರ್ ಸಮೀಪಿಸಿದ ಸೂಚನೆ ಬಂತು. ಅದುವರೆಗೆ ಹಾರುತ್ತಿದ್ದ ಎತ್ತರ, ಅಲ್ಲಿನ ಊಹಾತೀತ ತಾಪಮಾನ (ಅದು ಶುಭ್ರ ಬಿಸಿಲಿನ ಹಗಲಾದರೂ ಎಷ್ಟೋ ಡಿಗಿ ಮೈನಸ್ ಇತ್ತು!), ಅದನ್ನು ಕಳಚಿಕೊಂಡು ಸಮೀಪಿಸುತ್ತಿರುವ ಭೂಮಿಯ ವಾಸ್ತವದ ವಿವರಗಳೂ ಪೈಲಟ್ಟಿನ ಮಾತುಗಳಲ್ಲಿ ಯಾಂತ್ರಿಕವಾಗಿ ಬಂತು, ಆದರೆ ಇಳಿಯಲು ಸಂಭ್ರಮಿಸುವವರ ಗದ್ದಲದಲ್ಲಿ ಎಲ್ಲ ಅಸ್ಪಷ್ಟವಾಗಿ ಕರಗಿಹೋಯ್ತು. ಉತ್ತರ ಧ್ರುವಕ್ಕೆ ಸಮೀಪವರ್ತಿಯಾಗಿರುವ, ಅಲ್ಲೂ ಎಲ್ಲೆಲ್ಲೂ ಅಸಂಖ್ಯ ವಿಮಾನಯಾನ ಮಾಡಿರುವ ನಿನಗಿದೇನೂ ವಿಷಯವಲ್ಲದಿರಬಹುದು. ಆದರೆ ನನ್ನನುಭವದ ಅಂಡಮಾನ್ಗೆ ಇದು ಬೇಕೇ ಬೇಕಲ್ಲಾ! ಉಪಾಧ್ಯರನ್ನೋ ನಿರೇನನ್ನೋ ಸಾವಕಾಶವಾಗಿ ಕೇಳಿ ತಿಳ್ಕೊಳ್ತೇನೆ ಬಿಡು. ಅಲ್ಲಿವರೆಗೆ ಶುಭವಿದಾಯ.
ಇಂತು ನಿನ್ನ ಏಕಮಾತ್ರ ಅಣ್ಣ

ಪತ್ರ ಎರಡು

ಪ್ರಿಯಾನಂದಾ,



ತಾಪೇದಾರಿಯಲ್ಲಿರುವವರು ಒಂದು ಲೆಕ್ಕದಲ್ಲಿ ('ನಮಗೆ ನಾವೇ ಯಜಮಾನರು' ಎಂದುಕೊಳ್ಳುವ ನನ್ನಂಥವರಿಗಿಂಥ) ಸ್ವೋದ್ಯೋಗಿಗಳಿಗಿಂಥ ಹೆಚ್ಚು ಮುಕ್ತರು. ಅವರು ರಜಾ ಅರ್ಜಿ ಎಸೆದು ಎಲ್ಲಿಗೂ ಎದ್ದುಕೊಂಡು ಹೋಗಿಬಿಡಬಹುದು. ಹಾಗೆಂತ ನಾನು ದಿಢೀರ್ ಅಂಗಡಿ ಬಾಗಿಲು ಎಳೆದು ಹೋದರಾದೀತೇ? ಅಂಗಡಿ ತೆರೆದ ಮೊದಮೊದಲ ಸ್ಥಿತಿಯನ್ನು ಸರಳವಾಗಿ ಹೇಳುವುದಾದರೆ ಹೊಟ್ಟೆಪಾಡು ಮತ್ತು ಭವಿಷ್ಯದ ಹೆದರಿಕೆ ನಿವಾರಣೆಗೆ ಶಿಸ್ತು ಅಗತ್ಯವಿತ್ತು. ಕಾಲಾನಂತರ ಆ ಸ್ವಾರ್ಥಕ್ಕೂ ಮಿಗಿಲಾಗಿ ಒಂದು ಸಾಮಾಜಿಕ ಜವಾಬ್ದಾರಿಯಾಗಿ ನಾನು ಶಿಸ್ತು ಪಾಲಿಸಲೇಬೇಕಾಗುತ್ತದೆ. ಎಲ್ಲೆಲ್ಲಿಂದಲೋ ವೈಯಕ್ತಿಕ ಮತ್ತು ಸಾಂಸ್ಥಿಕ ಪುಸ್ತಕ ಅಗತ್ಯಗಳವರು ಸ್ಪಷ್ಟವಾಗಿ ನನ್ನಂಗಡಿಗೇ ಸಮಯ, ಹಣಹೊಂದಿಸಿಕೊಂಡು ಬರುವಾಗ ನಾನಿಲ್ಲದಿದ್ದರೆ? ನನ್ನಂಗಡಿಗೆ ಬರುವ ತುಂಬಾ ವಿದೇಶೀ ಪ್ರವಾಸಿಗಳು ಒಂಬತ್ತು ತಿಂಗಳು ಸರಿಯಾಗಿ ದುಡಿದು ಹಣ, ರಜೆ ಕೂಡಿಹಾಕಿ ಪ್ರವಾಸ ಹೊರಟುಬಿಡ್ತಾರಂತೆ. ಕಷ್ಟವೋ ನಷ್ಟವೋ ನಿನ್ನ ಭಾರತಯಾತ್ರೆಗಳು ನಡೆಯುವುದೂ ಇದೇ ಸೂತ್ರದಲ್ಲಿ ತಾನೇ. ಆದ್ರೆ ನನ್ನದು? "ಬೆಳಿಗ್ಗೆ ಎಂಟೂವರೆಯಿಂದ ಒಂದು, ಎರಡೂವರೆಯಿಂದ ಎಂಟು. ವಾರದ ರಜಾ ಆದಿತ್ಯವಾರ" ಎಂದು ವರ್ಷದ ಹನ್ನೆರಡೂ ತಿಂಗಳು ಸಾರ್ವಜನಿಕಕ್ಕೆ ಒಪ್ಪಿಸಿಕೊಳ್ಳುತ್ತೇನೆ. ಮಹಾರಾಜನ ವೇಷದ ಗುಲಾಮ, ಏರಿಂಡಿಯಾ 'ಮಹಾರಾಜ'ನ ಹಾಗೇ! ನನಗೂ ಹೀನಾಯ ನನ್ನ ಸಹಾಯಕ ಶಾಂತಾರಾಮನದು!! ಇದಕ್ಕೆ ಸಣ್ಣ ಸಮಾಧಾನವಾಗಿ ಸುಮಾರು ಮೂರ್ನಾಲ್ಕು ವರ್ಷದ ಹಿಂದೆ ಆರೇಳು ದಿನ ಮೀರದ 'ಅತ್ರಿಗೆ ಬೇಸಗೆ ರಜಾ' ಘೋಷಿಸಿದೆ. ಅದನ್ನು ಅರ್ಥಪೂರ್ಣವಾಗಿ ನಡೆಸುವ ಅನುಕೂಲ ಒದಗಿದ್ದು ಬಹುಶಃ ಒಮ್ಮೆ ಮಾತ್ರ. ಆದರೆ ಮೊದಲೇ ಹೇಳಿದ ಹಾಗೆ ಸುಮಾರು ಎರಡು ವರ್ಷದ ಹಿಂದೆ ಒದಗಿದ ಅಂಡಮಾನ್ ಪ್ರವಾಸಾವಕಾಶ. ಅದು ಕಾಲದಿಂದ ಮಾಸದಾ ವಿಚಿತ್ರವಾಗಿಯೇ ನನ್ನ ಮನದೊಳಗಿರುವುದರಿಂದ ಮತ್ತೆ ಹೇಳಲು ತೊಡಗುತ್ತೇನೆ. ಮೊನ್ನೆ ಅಂಗಡಿಯ ಗಲ್ಲಾದಲ್ಲಿ ನಿರ್ಯೋಚನೆಯಿಂದ ಕುಳಿತಿದ್ದವ ಇಂದು, ಹಿಂದಿನ ಪತ್ರ ಕಂತಿನಲ್ಲಿ ಹೇಳಿದಂತೆ?

ಫಸ್ಟ್ ಗೇರ್

"ಇನ್ನು ಕೆಲವೇ ಮಿನಿಟುಗಳಲ್ಲಿ ಪೋರ್ಟ್ ಬ್ಲೇರಿನಲ್ಲಿ ಇಳಿಯಲಿದ್ದೇವೆ" ಎಂದು ಘೋಷಿಸಿಕೊಂಡು ಅಂಡಮಾನ್ ದ್ವೀಪ ಸ್ತೋಮಕ್ಕೆ ಸಣ್ಣ ಸುತ್ತು ಹಾಕಲುತೊಡಗಿದ್ದೆವು. ಇಳಿದಾಣ ತೆರವು ಮಾಡಲು ನೆಲದ ಸಿಬ್ಬಂದಿಗೆ ಕೆಲವು ಮಿನಿಟುಗಳ ಕೊರತೆ ಕಾಡಿರಬೇಕು. ವಿಮಾನ ಹೀಗೊಮ್ಮೆ ಹಾಗೊಮ್ಮೆ ತೀವ್ರ ತಿರುವುಗಳನ್ನು ತೆಗೆಯುತ್ತಾ ಎಲ್ಲಾ ಕಿಟಕಿ ನೋಟಕರಿಗೂ ಅನುಕೂಲವಾಗುವಂತೆ, ಮುತ್ತುತ್ತಿದ್ದ ಬಿಳಿಮುಗಿಲ ಸಾಗರದಿಂದ ಪಾರಾಗುವಂತೆ ವಿಹರಿಸಿತು. ಅಖಂಡ ನೀಲಿಮೆಯಲ್ಲಿ ಒಮ್ಮೆಗೆ ಮೂಡಿದ ಅನೂಹ್ಯ ಕಲಾಪತ್ತಿನಂತೆ ನೆಲ ಕಾಣಿಸಿತು. ನೀರು ಮಗುಚುತ್ತಿದ್ದ ಸಪುರ ಬಿಳೀ ಮರಳ ಕಿನಾರೆ (ಹೀಗೂ ಉಂಟೇ? ಮತ್ತೆ ತಿಳಿಯಿತು ಇಲ್ಲಿ ವಾಸ್ತವದ ಮರಳಿಲ್ಲ, ಎಲ್ಲವೂ ಹವಳದ ವೈವಿಧ್ಯ ಅಂದರೆ ಸುಣ್ಣದ ಕಲ್ಲಿನ ರೂಪಗಳು), ಒತ್ತಿ ಬಂದಂತೆ ಗಾಢ ಹಸಿರಿನ ಕಾಡ ಕವಚ ಮೋಹಕವಾಗಿ ಕಾಣಿಸಿತು. ಅದು ಸೆಂಟಿನೆಲ್ ದ್ವೀಪವಂತೆ. (ಅಲ್ಲಿ ಒಂದು ಆದಿವಾಸಿ ಪಂಗಡ ಇಂದೂ ಸ್ವತಂತ್ರವಾಗಿ, ಸ್ವಯಂಪೂರ್ಣವಾಗಿ ಬಾಳುತ್ತಿದೆ. ಇಂದಿನ ನಾಗರಿಕರಿಗೂ ಆಧುನಿಕ ಸವಲತ್ತುಗಳಿಗೂ ಅಲ್ಲಿ ಪ್ರವೇಶ ನಿಷಿದ್ಧ). ಐದು ಮಿನಿಟಿನ ಸುತ್ತಾಟ ಮುಗಿಸಿ, ಪೋರ್ಟ್ ಬ್ಲೇರ್ಗೆ ಮರಳಿ ಸ್ಪಷ್ಟವಾಗಿ ಕಾಣುತ್ತಿದ್ದ ರನ್ವೇಯ ಉದ್ದವನ್ನು ಬಲು ಧಾವಂತದಲ್ಲಿ ಅಳೆದು ವಿಮಾನ ತಂಗಿತು. ಇಳಿ-ಮೆಟ್ಟಿಲ ಗಾಡಿಯನ್ನು ಇಬ್ಬರು ನೂಕಿಕೊಂಡು ಬಂದು ನಿಲ್ಲಿಸಿದರು. ನಮ್ಮ ಗಂಟು ಗದಡಿಗಳನ್ನು ಇಳಿಸಿ ಹಂಚು-ಸರಪಳಿಗೊಡ್ಡಲೂ ಕೈಗಾಡಿಯೇ ವಾಹನ. ಹೊರಗೆ ಎಲ್ಲೆಡೆಗಳಂತೆ ಬಹುಸಂಖ್ಯೆಯಲ್ಲಲ್ಲದಿದ್ದರೂ ಯಾವ್ಯಾವ್ಯದೋ ಹೋಟೆಲಿನವರೋ ಆಫೀಸಿನವರೋ ಯಾರ್ಯಾರದೋ ಹೆಸರಿನ ಫಲಕ ಹಿಡಿದು ಕಾದಿದ್ದರು. ಅವರನ್ನು ಸರಿಸಿಕೊಂಡು ಬಾಡಿಗೆ ಕಾರು ಹಿಡಿದೆವು. ಅಂಕು ಡೊಂಕಿನ ವಿಪರೀತ ಏರಿಳಿತಗಳ ದಾರಿ, ಡಬ್ಬೆ ಮಾಡಿನ ಅನಾಕರ್ಷಕ ಕಟ್ಟಡಗಳ ನಡುನಡುವೆ ದೃಷ್ಟಿ ನಿವಾಳಿಸುವಂತ ಹೊಸ ಕಟ್ಟಡಗಳು. ಒಟ್ಟಾರೆ ನನ್ನ ಬಾಲ್ಯದ ಮಡಿಕೇರಿಯನ್ನೇ ನೆನಪಿಸುತ್ತಿತ್ತು. ಆದರೆ ಸೆಕೆ ಅಪ್ಪಟ ದಕ್ಷಿಣ ಕನ್ನಡದ್ದೇ ಅಥವಾ ಒಂದು ಕೈ ಮಿಗಿಲು!



ಅರಣ್ಯಾಧಿಕಾರಿ, ಪ್ರವಾಸೋದ್ಯಮ ಇಲಾಖೆಗಳೊಡನೆ ಸಂವಾದ, ಅನುಮತಿ ಇತ್ಯಾದಿಗಳನ್ನು ನಿರೇನ್ ಅಭಯರು ನಡೆಸಿದ್ದರು. ಉಳಿದವರು ಅಪರಾಹ್ನದ ಹಾವ್ಲಾಕ್ ದ್ವೀಪಯಾನಕ್ಕೆ ದೋಣಿ ಟಿಕೆಟ್ ಖರೀದಿಸಲು ದಕ್ಕೆಗೆ ಹೋದೆವು. ಅರಣ್ಯಾಧಿಕಾರಿ ಪ್ರವಾಸೀ ಇಲಾಖೆಗೆ ಎಲ್ಲಾ ಬಿಟ್ಟು ಕೊಟ್ಟಂತಿತ್ತು. ಅಲ್ಲಿನವರು ವಿಕೇಂದ್ರೀಕರಣ, ಅಂದರೆ ಆಯಾ ಜಾಗದ ಸಮೀಪದಲ್ಲೇ ಸ್ಥಳೀಯವಾಗಿ ಅನುಮತಿ ಇತ್ಯಾದಿ ಕೊಡುವವರಿದ್ದರೂ ಸಿಕ್ಕಿದ ಮೇಲುಗೈಯನ್ನು ಕಳೆದುಕೊಳ್ಳಬಾರದೆಂಬಂತೆ ಏನೇನೋ ಪತ್ರಗಳನ್ನು ಕೊಟ್ಟರು. ಒಬ್ಬನಿಂದ ದಿನವೊಂದರಲ್ಲಾಗುವ ಕೆಲಸಕ್ಕೆ ನಾಲ್ಕು ಜನರಿಟ್ಟರೆ ಅದು ಕಾಲು ದಿನದಲ್ಲಾಗುವುದಿಲ್ಲ. ಬದಲಿಗೆ ಅಷ್ಟೇ ಕೆಲಸ ಇರುವಷ್ಟೂ ಜನ ಮತ್ತು ಸಮಯಕ್ಕೆ ಪಸರಿಸಿಕೊಳ್ಳುತ್ತದೆ ಎಂಬ ಅರ್ಥದಲ್ಲಿ ಪಾರ್ಕಿನ್ಸನ್ ನಿಯಮವನ್ನು ನಮ್ಮಪ್ಪ ಉದ್ಧರಿಸಿ ಹೇಳುತ್ತಿದ್ದದ್ದು ನೆನಪಿಗೆ ಬಂತು!

ಇತ್ತ ದಕ್ಕೆಯಲ್ಲಿ ಮೂರ್ನಾಲ್ಕು ಪುಟ್ಟ ಹಡಗು, ದೋಣಿಗಳು ಪ್ರತ್ಯೇಕ ಅಂಕಣಗಳಲ್ಲಿ ನಿರ್ಲಿಪ್ತವಾಗಿ ತೇಲಿಬಿದ್ದಿದ್ದವು. ಸ್ಫಟಿಕ ನಿರ್ಮಲ ನೀರು ನಿತ್ಯ ಕರ್ಮದಂತೆ ದಡ ನೆಕ್ಕುತ್ತಿತ್ತು. ಮುಖ್ಯ ಅಂಕಣವೊಂದರಲ್ಲಿ ಪ್ರವಾಸೋದ್ಯಮದ ಪುಣ್ಯಫಲವೋ ಅಂಡಮಾನದಲ್ಲಿ ತೀವ್ರವಾಗಿ ವಿಕಸಿಸುತ್ತಿರುವ ನಾಗರಿಕತೆಯ ಸಲ್ಲಕ್ಷಣವೋ ಎಂಬಂತೆ ರಾಶಿಗಟ್ಟಳೆ ಪ್ಲ್ಯಾಸ್ಟಿಕ್ ಕಸ ತೇಲಿಬಿದ್ದಿತ್ತು. ನೀರು, ಲಘುಪೇಯಗಳ ಖಾಲಿ ಬಾಟಲುಗಳಿಂದ ತೊಡಗಿ ಅಸಂಖ್ಯ ಪ್ಲ್ಯಾಸ್ಟಿಕ್ ಸಂಬಂಧೀ ತೇಲು ಕಸವನ್ನು ಒಂದು ಜಾಡಮಾಲೀ ದೋಣಿ ಬಲೆಬೀಸಿ ಒಟ್ಟು ಮಾಡಿ ತೆಗೆಯುತ್ತಿತ್ತು! ಹಾಗಾದರೆ ಕರಗಿದ, ಮುಳುಗಿದ ಕಸ ಇನ್ನೆಷ್ಟಿರಬಹುದೋ ಎಂದು ಗಾಬರಿಪಡುವುದಷ್ಟೇ ನಮಗೆ ಉಳಿಯಿತು. ವಾಸ್ತವದಲ್ಲಿ ಆ ಬಂದರು ನಮ್ಮ ಪ್ರಾದೇಶಿಕ ಸಾರಿಗೆ ಬಸ್ ನಿಲ್ದಾಣದ ಹಾಗೇ ಇತ್ತು. ಅಲ್ಲಿಂದ ಅಂಡಮಾನಿನ ವಿವಿಧ ದ್ವೀಪ ನೆಲೆಗಳಿಗೆ (ನಿರ್ಜನ ದ್ವೀಪಗಳು ಅಸಂಖ್ಯವಿವೆ ಮತ್ತಲ್ಲಿಗೆ ಖಾಯಂ ಸಾರಿಗೆ ಸಂಚಾರ ಇಲ್ಲ) ಪುಟ್ಟ ಹಡಗುಗಳ ಸಾರಿಗೆ ಜಾಲವಿತ್ತು. ಆದರೆ ಸಮುದ್ರದ ಭರತ ಇಳಿತಗಳು ಮತ್ತು ಎಂದೂ ಬದಲಾಗಬಹುದಾದ ಹವಾಮಾನದ ವೈಪರೀತ್ಯಗಳಿಂದಾಗಿ ಕಾಲದ ನಿಯತಿ ಖಾಯಂ ಇದ್ದಂತಿರಲಿಲ್ಲ. ಪ್ರವಾಸಿ ಮತ್ತು ಸ್ಥಳಿಯರಿಗೆ ಟಿಕೆಟ್ ದರದಲ್ಲಿ ವ್ಯತ್ಯಾಸವಿತ್ತು. ಆದರೆ ಪ್ರಯಾಣಾವಕಾಶ ಶಕ್ತರಿಗೆ ಮಾತ್ರ ಎಂಬಂತಿತ್ತು ಅಲ್ಲಿನ ನೂಕು ನುಗ್ಗಲು; ಅಕ್ಷರಶಃ ದೊಂಬಿ. ಮೂರೂ ದಿಕ್ಕುಗಳಲ್ಲಿ ಟಿಕೆಟ್ ಕೌಂಟರ್ ಮಾತ್ರವಿರುವಂತಿದ್ದ ಒಂದು ಕೋಳಿಗೂಡಿಗೆ ಸುತ್ತಲಿಂದ ಜನ ಮುತ್ತಿಗೆ ಹಾಕಿದ್ದರು. ಅಲ್ಲಿ ಟಿಕೆಟ್-ಕಂಡಿಗಳಿಲ್ಲದ ಎಡೆಗಳಲ್ಲಿನ ಗೋಡೆಗಳಲ್ಲಿ ಏನೋ ಅಸ್ಪಷ್ಟ ಪ್ರಕಟಣೆಗಳನ್ನು ಹಚ್ಚಿದ್ದರು. ಸಮೀಪಿಸಿ ಓದೋಣವೆಂದರೆ ಅದರ ಬುಡದಲ್ಲೇ ಸಿಗುವ ತುಂಡು ನೆರಳಿಗೆ (ಸೂರ್ಯ ಹೆಚ್ಚು ಕಡಿಮೆ ನಡುನೆತ್ತಿಯಲ್ಲಿದ್ದ) ದೋಣಿ ಕಾಯುವ ಮಂದಿ ಗಂಟು ಗದಡಿ ಸಮೇತ ಮುತ್ತಿಕೊಂಡಿದ್ದರು. 'ಯಾವ ಕಿಟಕಿ ಯಾವುದಕ್ಕೆ' ಎಂಬ ನಾಮನಿರ್ದೇಶನಗಳೂ ಇರಲಿಲ್ಲ. ಜನಸಾಗರದಲ್ಲಿ ಈಜಿ ಉಪಾಧ್ಯ ಒಂದು ಅರ್ಜಿಫಾರಂ ಗಿಟ್ಟಿಸಿದರು. ಅದನ್ನು ಭರ್ತಿ ಮಾಡಿ ರಣಗುಟ್ಟುವ ಬಿಸಿಲಿನಲ್ಲಿದ್ದ ಯಾವುದೋ ಅಪರಿಪೂರ್ಣ (ಜನ ಅದನ್ನು ಲೆಕ್ಕಿಸದೆ ನುಗ್ಗುವುದೂ ನಡೆದಿತ್ತು) ಸರತಿ ಸಾಲಿನಲ್ಲಿ ಭವ್ಯ ಭವಿಷ್ಯದ ಕನಸು ಕಳೆದುಹೋದವರಂತೆ ನಿಂತೆವು. ಅದೃಷ್ಟವಶಾತ್ ಪೋಲಿಸಪ್ಪನಂತವನೊಬ್ಬ ಒಂದು ಕಿಟಕಿಯೆದುರು ಮುಕುರಿದ್ದ ಹುಡುಗರನ್ನು, ಗಂಡಸರನ್ನು ನೂಕುತ್ತಾ ಗಟ್ಟಿ ಧ್ವನಿಯಲ್ಲಿ 'ಮಹಿಳಾ ಸರದಿ ಸಾಲು' ರಿಪೇರಿ ಮಾಡಿದ. ಅಲ್ಲಿವರೆಗೆ ಸೋತಂತಿದ್ದ ನಾವು ಕೂಡಲೆ ಮೇಲಾಟವಿಲ್ಲದ ಆ ಸಾಲಿನಲ್ಲಿ ದೇವಕಿಯನ್ನು 'ಪಣಕ್ಕಿಟ್ಟು' ಗೆದ್ದೆವು!

ಅನಂತರ ಪೂರ್ವನಿಶ್ಚಯದಂತೆ ವಟವೃಕ್ಷ (ಆಟೋರಿಕ್ಷಾ) ಹಿಡಿದು ಆ ಊರಿನ, ಬಹುಶಃ ಅತ್ಯುತ್ತಮ ದಕ್ಷಿಣ ಭಾರತೀ ಊಟ ತಿಂಡಿಗಳ ಹೋಟೆಲ್ ಅನ್ನಪೂರ್ಣದಲ್ಲಿ ನಿರೇನ್ ಅಭಯರೊಡನೆ ಸೇರಿಕೊಂಡೆವು. ಅದು ಯಾವುದೋ ಸಾಮಾನ್ಯ ಮನೆಯನ್ನು ಸಣ್ಣಪುಟ್ಟ ತಿದ್ದುಪಡಿಗಳೊಂದಿಗೆ ಹೋಟೆಲ್ ವ್ಯವಸ್ಥೆಗೆ ಹೊಂದಿಸಿದಂತಿತ್ತು. ಅದೊಂದು ಉಡುಪಿ ಹೋಟೆಲ್ಲೇ ಇರಬೇಕೆಂಬ ಗುಮಾನಿ ನಮ್ಮದು! [ನಿನಗ್ಗೊತ್ತಿರಬಹುದು ಚಂದ್ರನ ಮೇಲೆ ಆರ್ಮ್‌ಸ್ಟ್ರಾಂಗ್ ಇಳಿಯುವಾಗ ಮೊದಲು ಕಂಡದ್ದೇ 'ಉಡುಪಿ ಶ್ರೀಕೃಷ್ಣ ಭಾ(ಭ)ವನನ್ನಂತೆ.' ಈ ವಿಚಾರದಲ್ಲಿ ಮಲಯಾಳಿಗಳ ಹೇಳಿಕೆ ಬೇರೇ "ಅದ್ ಇಞ್ಞಮ್ಮಳ ಕಾಕಂಡ ಚೋಯ್ ಶೋಪ್."] ಆದರೆ ಪ್ರಾದೇಶಿಕತೆಯನ್ನು ಕನ್ನಡ ಹೋಟೆಲ್ಲುಗಳು ಊರಿನಲ್ಲೇ ಮೀರಿ ಬಾಯಿಲ್ಡ್ ರೈಸು, ವೈಟ್ ರೈಸು, ರಸಂ, ಗೋಬಿ, ಸಾಂಬಾರ್, ಮೊಸಳೆ ದೋಸೆ ಇತ್ಯಾದಿ ಜೀರ್ಣಿಸಿಕೊಂಡಿರುವುದರಿಂದ ತಲೆಕೆಡಿಸಿಕೊಳ್ಳದೆ ಮೊದಲು ಊಟ ಚೆನ್ನಾಗಿಯೇ ಮುಗಿಸಿದೆವು. ಗಲ್ಲಾದಲ್ಲಿದ್ದ ಯಜಮಾನರನ್ನು ಹರಗಟ್ಟಿ ಕನ್ನಡದಲ್ಲಿ ಮಾತಾಡಿಸಿದಾಗ ತಿಳಿಯಿತು ಅವರು ಪಾಲ್ಘಾಟ್ ಮೂಲದ ಹದಿನಾರಾಣೆ ತಮಿಳ!

ಆಟೋರಾಕ್ಷಸ ಏರಿ ಮತ್ತೆ ಬಂದರಕ್ಕೆ ಬಂದಾಗ ಕಟ್ಟೆಯಂಚಿನಲ್ಲಿ ನಮ್ಮ ಹಡಗು ಸಿದ್ಧವಾಗೇನೋ ಇತ್ತು. ಜನ ಸಾಕಷ್ಟು ಸೇರಿದ್ದರು, ಸ್ಥಳೀಯರದ್ದೋ ಕೇವಲ ಸಾಗಣೆಯದ್ದೋ ಸಾಮಾನು ಬಂದು ಬಂದು ರಾಶಿ ಬೀಳುತ್ತಲೇ ಇತ್ತು. ಆದರೆ ಹಡಗಿಗೆ ಪ್ರವೇಶ ಕೊಡುವ 'ಮಹರಾಯ' ಇನ್ನೂ ಎಲ್ಲೋ ಆರಾಮದಲ್ಲಿದ್ದ. ನಮಗೆ ರಣಗುಡುವ ಸೂರ್ಯಸ್ನಾನ ಕಡ್ಡಾಯ! ಕಟ್ಟೆಯ ಆ ಕೊನೆಯಲ್ಲಿ ತಗಡಿನದ್ದೇ ಮಾಡು ಮತ್ತೆರಡು ಗೋಡೆಗಳಿದ್ದ ಪುಟ್ಟ ಶೆಡ್ಡಿತ್ತು. ಬಹುಶಃ ಬಂದರದ ನೌಕರರ ವಾಹನ ತಂಗುದಾಣ. ಒಳಗೆ ಅಡ್ಡಾದಿಡ್ಡಿ ತುಂಬಿಕೊಂಡಿದ್ದ ಬೈಕು ಸ್ಕೂಟರುಗಳ ಎಡೆ ಎಡೆಯಲ್ಲಿ ನೆರಳರಸಿ ನಾವು ನುಗ್ಗಿಕೊಂಡರೂ ದಕ್ಕಿದ್ದು ಬೆಂಕಿಯಿಂದ ಬಾಣಲೆಗೆ ಬಿದ್ದಷ್ಟೇ ಸುಖ! ಅಂತೂ ಟಿಕೆಟ್ ಚಕ್ಕರ್ ಮಹಾಶಯ ಬಂದ. ಸಮುದ್ರದಲ್ಲಿ ಭರತವಿದ್ದುದರಿಂದ ನೇರ ಹಡಗಿನ ಹೊಟ್ಟೆಗೇ ಪ್ರವೇಶದ್ವಾರ ತೆರೆಸಿದ. (ಇಳಿತವಿದ್ದಿದ್ದರೆ ನಾವು ಹಡಗಿನ ಡೆಕ್ಕಿಗೇ (ಮೇಲ್ಛಪ್ಪರ) ನುಗ್ಗಿ, ಹಡಗಿನ ಹೊಟ್ಟೆಗೆ ಇಳಿಮೆಟ್ಟಿಲು ಹಿಡಿಯಬೇಕಾಗುತ್ತಿತ್ತು.) ಕೂಡಲೇ ಮತ್ತೆ ಗ್ರಾಮಾಂತರ ಬಸ್ಸು ನಿಲ್ದಾಣಗಳದ್ದೇ ನೆನಪು. ದೌರ್ಭಾಗ್ಯವಶಾತ್ ಇಲ್ಲಿ ತೆರೆದ ಕಿಟಕಿಗಳಿರಲಿಲ್ಲವಾಗಿ ನಾವು ಕರಚೀಪು, ಚೀಲ, ಏನೂ ಇಲ್ಲದಿದ್ದರೆ ಒಂದು ಚಪ್ಪಲಿಯನ್ನಾದರೂ ಒಳಗೆ ತೂರಿ ಸೀಟು ಕಾದಿರಿಸಲಾಗಲಿಲ್ಲ. ತಹತಹದಲ್ಲಿ ಸಂಪರ್ಕ ಹಲಿಗೆ ನಡೆಯುವಾಗ ಎಡವಿ, ತಗ್ಗು ಬಾಗಿಲಿನಲ್ಲಿ ತಲೆ ಹೆಟ್ಟಿ, ಕಿರು ಓಣಿಯಲ್ಲಿ (ನಮ್ಮರಿವಿಗೆ ಬಾರದಂತೆ ಹಡಗು ಓಲಾಡುತ್ತಿದ್ದುದಕ್ಕೆ) ಅಂಚುಗಳಿಗೆ ಮೈ ಒರೆಸಿ ಐದು ಸೀಟು ಗೆದ್ದೇಬಿಟ್ಟೆವು! ಆದರೆ ಸ್ವಲ್ಪ ಹೊತ್ತಿನಲ್ಲೇ ನಮ್ಮ ಧಾವಂತ ಅನಾವಶ್ಯಕವಿತ್ತು ಎಂದು ಕಂಡು ನಗೆ ಬಂತು. ಅಲ್ಲಿ ಸೀಮಿತ ಹವಾನಿಯಂತ್ರಕ ಇದ್ದರೂ ದೃಶ್ಯ ಸೌಕರ್ಯ ಏನೂ ಇರಲಿಲ್ಲ. ಸಹಜವಾಗಿ ಒಂದಷ್ಟು ಮಂದಿ ಸ್ಥಳೀಯರನ್ನು ಬಿಟ್ಟು ಹೆಚ್ಚಿನೆಲ್ಲ ಪ್ರಯಾಣಿಕರು ನಿರಂತರ ಡೆಕ್ಕಿನ ಮೇಲೆ ಹೋಗಿ ಬರುವುದು ನಡೆದೇ ಇತ್ತು. ಹೆಚ್ಚಿನೆಲ್ಲಾ ಸೀಟುಗಳು ಖಾಲಿ ಅಥವಾ ಚೀಲ 'ಕೂರುವ' ಸೌಕರ್ಯಗಳಾಗಿದ್ದವು!

ಕ್ರೂಸಿಂಗ್ (ಹ್ಯಾವ್ಲಾಕ್)

ನಮಗೆ ಈ ದ್ವೀಪಸ್ತೋಮಗಳ ಪರಿಚಯದ ಕೊರತೆಯಲ್ಲಿ ಅಥವಾ ಊರಿನ ಸವಿನೆನಪಿನಲ್ಲಿ ಚೀಲಗಳ್ಳರ, ಸೀಟುಗಳ್ಳರ ಭಯ ಸಹಜವಾಗಿತ್ತು. ಸರದಿಯಲ್ಲಿ ಒಬ್ಬರನ್ನಾದರೂ ಕೆಳಗುಳಿಸಿ ನಾವೂ ಸಾಕಷ್ಟು ಡೆಕ್ಕಿನ ಓಡಾಟ ನಡೆಸಿದೆವು. ಮತ್ತೆ ಅರಿವಿಗೆ ಬಂದಂತೆ ಈ 'ಹಿಂದುಳಿದ' ಪ್ರದೇಶದಲ್ಲಿ ಕಳ್ಳತನ, ಸುಲಿಗೆ, ವಂಚನೆಗಳೂ ಬಹಳ ಹಿಂದುಳಿದಿವೆಯಂತೆ! ಚಿಂತಿಸಬೇಡಿ, ಸರಕಾರಿ ಅಭಿವೃದ್ಧಿ ಕಾರ್ಯಕ್ರಮಗಳು ಮುಂದುವರಿದಂತೆ ಇಲ್ಲಿನ ಸಮಾಜವೂ ಅವನ್ನು ಕಲಿತುಕೊಳ್ಳುತ್ತದೆ. ನಮ್ಮ ಹಡಗು ಎಡಕ್ಕೆ ಸ್ಪಷ್ಟವಾಗಿ ಬ್ಲೇರ್ ದ್ವೀಪಕ್ಕೆ ಸಮಾನಾಂತರದಲ್ಲಿ ಓಡುವಂತೆ ಕಾಣುತ್ತಿತ್ತು. ನಮ್ಮ ಬಲಕ್ಕೂ ಚಾಚಿದಂತೆ ಕಾಣುವ ದ್ವೀಪ ಸರಣಿ ಮಧ್ಯ ನಿಧಾನಕ್ಕೆ ಮುಳುಗಿ ವಿಶಾಲ ಸಾಗರಕ್ಕೊಂದು ಹೆಬ್ಬಾಗಿಲು ತೆರೆದ ಹಾಗಿತ್ತು. ಆ ತೋರಿಕೆಯ ಅಳಿವೆಯಿಂದ ನುಗ್ಗುವ ಅಲೆಗಳು ಅತ್ತವೇ ಇಳಿಯುತ್ತಿದ್ದ ಸೂರ್ಯರಶ್ಮಿಗಳೊಡನೆ ಹುರಿಗೊಂಡು ವಿವಿಧ ನೀಲಛಾಯೆಗಳಲ್ಲಿ ನಮ್ಮೆದುರು ಬಿಡಿಸಿಕೊಳ್ಳುತ್ತಿತ್ತು. ಹಡಗು ನಿರ್ಲಿಪ್ತವಾಗಿ ಎಲ್ಲವನ್ನು ಕತ್ತರಿಸಿ ತನ್ನದೇ ರಾಟೆಯಲ್ಲಿ ಹೊಸ ಛಾಯೆ ಹೊಸೆದು ಹಿಂದೆ ಬಿಡುತ್ತಾ ಸಾಗಿತ್ತು. ಎದುರು ಎರಡೂ ಪಕ್ಕಕ್ಕೆ ನೊರೆಯುಕ್ಕುವಂತೆ ನೀರ ಹಾಸನ್ನು ಸೀಳುತ್ತ ಹಿಂದೆ ಸದಾ ವಿಸ್ತರಿಸುವ ಅಲೆಯ ಜಾಡನ್ನುಳಿಸುತ್ತಾ ಮೋಟಾರು ಏಕಶ್ರುತಿಯಲ್ಲಿ ಭೋರ್ಗರೆದಿತ್ತು. ಆಗೀಗ ಹಾರುವ ಮೀನು ಕಾಣಿಸಿ ನಮ್ಮ ವೀಕ್ಷಣೆಗೆ ಹೊಸ ನಿರೀಕ್ಷೆಗಳ ಗರಿ ಕಟ್ಟುತ್ತಿತ್ತು. ಬಾಲ್ಯದಲ್ಲಿ ತೋಡು, ಹೊಳೆಗಳ ಅಂಚಿನಲ್ಲಿ ನಿಂತು, ಚಪ್ಪಟೆ ಕಲ್ಲು ಹಿಡಿದು 'ಕಪ್ಪೆಹಾರಿಸಿದ್ದು' ಈ ಹಾರುಮೀನುಗಳ ಜಾಡಿನಲ್ಲಿ ಜೀವತಳೆದಂತಿತ್ತು.

ಜನಸಾಮಾನ್ಯರ ಭಾವಕ್ಕೊದಗುವ ಈ ನೀರು, ನೆಲಗಳೆಲ್ಲಾ ಆಕಾಶದ ಎತ್ತರದಲ್ಲಿ ಅಂದರೆ ವೈಮಾನಿಕ ಅಥವಾ ಗೂಗಲ್ ಅರ್ತ್ ಕೊಡುವ ಚಿತ್ರಗಳಲ್ಲಿ ಬೇರೆಯೇ ಇರುವುದನ್ನು ಯಾರೂ ಕಾಣಬಹುದು. ಗಂಟೆಗಟ್ಟಳೆ ನಾವು ಓಡುತ್ತಿದ್ದ 'ಮಹಾಸಮುದ್ರ' ವಾಸ್ತವದಲ್ಲಿ ನಿಜಮಹಾಸಮುದ್ರದ ಆಳದಿಂದೆದ್ದ ಶಿಖರ ಸಮೂಹದ ಸಣ್ಣಪುಟ್ಟ ಕಣಿವೆಗಳು. ಅಲ್ಲಿನ ಔನ್ನತ್ಯಗಳಲ್ಲೆಲ್ಲಾ ಹವಳದ ಜಾಲ ಬೆಳೆದು ಮತ್ತಷ್ಟು ಇಕ್ಕಟ್ಟಾಗಿದ್ದಿರಬೇಕು. ದೊಡ್ಡ ಹಡಗುಗಳು ಇಲ್ಲಿ ಬರುವುದು ಬಿಡಿ, ನಮ್ಮ ಸಣ್ಣ ಹಡಗೂ ಕೆಲವೊಂದು ಪ್ರದೇಶಗಳಲ್ಲಿ ಹಾದುಹೋಗುವಾಗ, ದ್ವೀಪ ಸಮೀಪಿಸುವಾಗ ಆಳಸಾಲದೆ ನೆಲತಾಗುವ ಅಪಾಯವಿರುತ್ತಿತ್ತು. ಸಹಜವಾಗಿ ಅಂತಲ್ಲೆಲ್ಲಾ ತೇಲುಬೆಂಡುಗಳ ಮಾರ್ಗಸೂಚನೆ ಇರುತ್ತಿತ್ತು. ಸುಮಾರು ಎರಡೂವರೆ ಗಂಟೆಯ ಪ್ರಯಾಣದಲ್ಲಿ ನಾವು ಹ್ಯಾವ್ಲಾಕ್ ದ್ವೀಪವನ್ನು ಸಮೀಪಿಸಿದ್ದೆವು. ಮೊದಮೊದಲು ನಮ್ಮೆದುರು ಬಲು ದೂರದಲ್ಲಿ ಅಸ್ಪಷ್ಟ ಹಸುರಿನಂತೆ ತೋರುತ್ತಿದ್ದ ನೆಲದಲ್ಲಿ ಎಲ್ಲೋ ಬಿಳಿ ಚುಕ್ಕಿಬಿದ್ದಂತಾಗಿ ಬರಬರುತ್ತಾ ಯಾವ್ಯಾವುದೋ ಕಟ್ಟಡವಾಗಿ ಹ್ಯಾವ್ಲಾಕಿನ ಪುಟ್ಟ ಹಡಗು ಕಟ್ಟೆಯೇ ಅರಳಿ ನಿಂತಿತ್ತು. ಮರಳಂಚಿಗೆ ಭದ್ರ ಕಾಂಕ್ರೀಟು ಕಟ್ಟೆ ಕಟ್ಟಿ ನೀರೊಳಕ್ಕೆ ಅಸಂಖ್ಯ ಪಿಲ್ಲರುಗಳ ಕಾಲುಚಾಚಿ ಎರಡು ಮೂರು ಅಂತಸ್ತುಗಳ ದಕ್ಕೆ ಕಾದಿತ್ತು. ಆದರೆ ಸಮುದ್ರದಲ್ಲಿ ಇಳಿತ ಶುರುವಾಗಿದ್ದರಿಂದ ಹಡಗು ಬಲು ನಿಧಾನ ಮತ್ತು ಎಚ್ಚರದಿಂದ ಜಾಡು ಆಯುತ್ತಾ ಕಟ್ಟೆ ಸಮೀಪಿಸಿತು. ಹಡಗಿನ ಜನ, ಸಾಮಾನುಗಳೆಲ್ಲವನ್ನು ಡೆಕ್ಕಿಗೆ ಏರಿಸುವವರ ಪ್ರವಾಹದಲ್ಲಿ ಸೇರಿಕೊಂಡು ನಾವೂ ಕಟ್ಟೆಯ ಮೇಲಕ್ಕೆ ಇಳಿದೆವು.



ಹ್ಯಾವ್ಲಾಕ್ ಸ್ಥಳಪುರಾಣದ ಬಗ್ಗೆ ಕೆಟಿ ಗಟ್ಟಿಯವರ 'ನಿಸರ್ಗ ಕನ್ಯೆ ಅಂಡಮಾನ್'ನಲ್ಲಿ ಓದಿದ್ದ ನೆನಪು ಒತ್ತರಿಸಿ ಬಂತು. ಬ್ರಿಟಿಷ್ ಆಡಳಿತದ ಕೊನೆಯ ಪಾದ, ಅಂದರೆ ಸುಮಾರು ಅರುವತ್ತು ವರ್ಷಗಳ ಹಿಂದೆ, ಈ ದ್ವೀಪ ಸಮೂಹಗಳು ಇನ್ನೂ ಶಿಕ್ಷೆಗೆ ಪರ್ಯಾಯನಾಮಗಳೇ ಆಗಿದ್ದ ಕಾಲ. ಇವು ಜಗತ್ತನ್ನೇ ಆಳುವ ಕನಸಿಗ ಜಪಾನೀಯರ ವಶದಲ್ಲಿದ್ದವು. ಆಳರಸರಲ್ಲಿ ಬ್ರಿಟಿಷರನ್ನು ನಾಚಿಸುವಷ್ಟು ಕ್ರೂರಿಗಳಂತೆ ಜಪಾನಿಗಳು! ಬ್ರಿಟಿಷರು ಸ್ವಾರ್ಥಕ್ಕೇ ಆದರೂ ವರ್ಷಾನುಗಟ್ಟಳೆ ವ್ಯವಸ್ಥಿತವಾಗಿ ನಾಗರಿಕಗೊಳಿಸಿದ್ದ ಪೋರ್ಟ್ ಬ್ಲೇರನ್ನು ಸುಲಭ ತುತ್ತಿನಂತೆ ಪಡೆದ ಜಪಾನಿಗಳ ಆಡಳಿತವಿದ್ದದ್ದು ಕೇವಲ ಮೂರೇ ವರ್ಷ. ಅಷ್ಟರೊಳಗೆ ಇವರು ಅಲ್ಲಿನ ಕುಖ್ಯಾತ ಸೆರೆಮನೆಯಲ್ಲಿದ್ದ, ಅವರ ಲೆಕ್ಕಕ್ಕೆ ಕೇವಲ ಕೂಳುಬಾಕರಾದ ರಾಜಕೀಯ ಮತ್ತು ಇತರ ಕೈದಿಗಳು ಮಾತ್ರವಲ್ಲದೆ ಊರಿನ ಹಲವರನ್ನು ಗೂಢಚರ್ಯದ ಸಂಶಯದ ಮೇಲೆ ಒಟ್ಟು ಮಾಡಿದರಂತೆ. ಈ ಸುಮಾರು ಆರುನೂರರನ್ನು ಸಾಕುವ, ವಧಿಸುವ ಮತ್ತು ಮುಖ್ಯವಾಗಿ ಹೆಣ–ನಿರ್ವಹಣಾವೆಚ್ಚವನ್ನು ಉಳಿಸಲೊಂದು ಉಪಾಯ ಮಾಡಿದರಂತೆ. ಕರಾಳ ರಾತ್ರಿಯಲ್ಲಿ ಎಲ್ಲರನ್ನೂ ಹಡಗೊಂದರಲ್ಲಿ ತುಂಬಿ ಸುಮಾರು ಮೂರುಗಂಟೆಯ ನಿಗೂಢ ಯಾನದಲ್ಲಿ ಇದೇ ಹ್ಯಾವ್ಲಾಕ್ ದ್ವೀಪದ ಬಳಿ ತಂದು ಸಮುದ್ರಕ್ಕೆ ನೂಕಿಯೇ ಬಿಟ್ಟರು. ಹಲವರಿಗೆ ಖಾಯಂ 'ಆಭರಣಗಳೇ' ಆಗಿದ್ದ ಬೇಡಿ ಸರಪಣಿಗಳನ್ನೂ ಕಳಚದೇ ನೂಕುವಲ್ಲಿ ಶೀಘ್ರ ಮರಣವೊಂದೇ ಅವರ ಲಕ್ಷ್ಯದಲ್ಲಿತ್ತು. ಈಜು ಬಾರದವರು, ಈಜು ಬಂದರೂ ಸಮ್ಮರ್ದದಲ್ಲಿ ಉಸಿರು ಉಳಿಸಿಕೊಳ್ಳಲಾಗದವರು, ಬೇಡಿಸರಪಳಿಗಳ ಭಾರ ಬಂಧನದಲ್ಲಿ ನೇರ ಸಾಗರತಳ ಕಚ್ಚಿದವರು, ಜಲಚರಗಳ ಆಹಾರವಾದವರು, ದಿಕ್ಕು ಸಿಕ್ಕದೆ ಕಳೆದುಹೋದವರು ಲೆಕ್ಕಕ್ಕಿಲ್ಲದೆ ಹೋದರು. ಅಲ್ಪಾಂಶ ಸಾಹಸ, ಬಹ್ವಂಶ ಅದೃಷ್ಟದಲ್ಲಿ ಸುಮಾರು ಒಂದು ನೂರು ಮಂದಿ ಆಗ ಮೊದಲ ಮಾನವರಾಗಿ ಹ್ಯಾವ್ಲಾಕ್ ದ್ವೀಪದ ಮೇಲೆ ಕಾಲಿರಿಸಿದರಂತೆ! ಆದರೇನು ನಾಗರಿಕತೆ ಕಾಣಿಸುವ ನೀರು ಆಹಾರಗಳಿಲ್ಲದ ಕಗ್ಗಾಡಿನಲ್ಲಿ ನರಳುವುದೊಂದೇ ಅವರಿಗಿದ್ದ ಅವಕಾಶ. ನೆಲಕಾಣುವ ಮತ್ತೆ ಬಂಧಮುಕ್ತವಾಗುವ ಹೋರಾಟದಲ್ಲಿ ಪಡೆದ ಗಾಯಗಳು ಉಲ್ಬಣಿಸಿ, ವಿಷಕಾರಿ ಜಂತುಗಳಿಗೆ ಸಿಕ್ಕಿ, ದಿನಗಳೆಯುತ್ತಾ ನೀರು ಆಹಾರಗಳಿಲ್ಲದೆ ಸಾಯುತ್ತಾ ಹೋದವರ ಕತೆಯೊಡನೆ ಬದುಕುಳಿದವರು ನರಮಾಂಸ ಭಕ್ಷಣೆಯ ಅನಿವಾರ್ಯತೆಗಿಳಿದ ದಾರುಣತೆ ಅದೋ ಇಲ್ಲಿ, ಇದೇ ದ್ವೀಪದಲ್ಲಿ ನಡೆಯಿತು ಎಂಬ ಗಂಭೀರ ಚಿತ್ರ ನೋಡಹೊರಟವರಿಗೆ ಅರ್ಥಹೀನ ಅಬ್ಬರದ ಜಾಹೀರಾತಿನಂತೆ ಕಾಣಿಸಿತು ಹ್ಯಾವ್ಲಾಕ್!

ಜನಪದೀಯ ತೋರಿಕೆಗೆ

ಜೀಪು ಕಾರುಗಳು ಬಿಡಿ, ಬಸ್ಸಿನ ಸಾರಿಗೆ ಸೌಲಭ್ಯವೂ ಇಂದು ದ್ವೀಪದೊಳಗಿದೆ. ಯಾವ್ಯಾವುದೋ ರಿಸಾರ್ಟ್‌ಗಳ ಎರೆಗಳು, ಈಗಾಗಲೇ ಎರೆ ಕಚ್ಚಿದ್ದವುಗಳನ್ನು ಗುರುತಿಸಿ ಎಳೆಯುವ ದಾರಗಳು ಅಲ್ಲಿದ್ದವು. ಇಲ್ಲಿನ ವಾಸ್ತವ್ಯದ ಬಗ್ಗೆ ನಾವು ಯಾವುದೇ ಮಾನಸಿಕ ಸಿದ್ಧತೆ ಇಲ್ಲದೆ ಬಂದಿದ್ದೆವು. ಕೇವಲ ಸ್ನಾರ್ಕೆಲ್ಲಿಂಗ್ ಮತ್ತು ಸ್ಕ್ಯೂಬಾ ಡೈವಿಂಗ್ ಅವಕಾಶಗಳು ಇಲ್ಲಿ ಹೆಚ್ಚಿರುವ ಮಾಹಿತಿ ಮಾತ್ರ ನಮ್ಮಲ್ಲಿತ್ತು. ಡೈವಿಂಗ್ ಇಂಡಿಯಾ ಎಂಬ ಖಾಸಗಿ ಸಂಸ್ಥೆ ಸಹಾಯದಲ್ಲಿ ದ್ವೀಪದ ಸುತ್ತಿನ ಹವಳ, ಜಲಜೀವಿಗಳ ವೀಕ್ಷಣೆಯಷ್ಟೇ ನಮ್ಮ ಲಕ್ಷ್ಯ. ಅದಕ್ಕನುಕೂಲವಾಗುವ ಸರಳ ವಾಸ ವ್ಯವಸ್ಥೆ ತೋರುವುದಾಗಿ ಹೇಳಿದ ಟ್ಯಾಕ್ಸಿ ಒಂದನ್ನು ಹಿಡಿದೆವು. ಜೋಪಡ ಪಟ್ಟಿಯಂತೆ ತೋರುವ ಮನೆ, ಅಂಗಡಿಗಳು, ಸಣ್ಣ ಸಂತೆ ಕಟ್ಟೆ ಮತ್ತಲ್ಲಿನ ತರಕಾರಿ ವ್ಯಾಪಾರ ಭರಾಟೆ, ಗದ್ದೆ ತೋಟಗಳನ್ನು ಹಾಯುತ್ತಾ ಏಕಮುಖ ಸಂಚಾರಕ್ಕಷ್ಟೆ ಯೋಗ್ಯವಾದ ದಾರಿಯಲ್ಲೂ ಎದುರಾಗುತ್ತಿದ್ದ ವಾಹನಗಳಿಗೆ ದಾರಿಕೊಡಲು ಹೆಣಗುತ್ತಾ ಸಾಗಿ ಒಂದು ತೆಂಗಿನ ತೋಪಿನ ಬಳಿ ಇಳಿಸಿದ. ಓಟೆ ಹೆಣಿಗೆಯ ಗೋಡೆ, ಜಿಂಕ್ ಶೀಟಿನ ಮಹಡು ಹೊತ್ತ ಹೊಗೆ ಹಿಡುಕಲು ಜೋಪಡಿಯೇ ಅಲ್ಲಿನ 'ರಿಸೆಪ್ಷನ್ ಅಂಡ್ ಡೈನಿಂಗ್ ಹಾಲ್' ಅಂದಾಗ ಇದು ಹೋಟೆಲ್ಲೇ ಎನ್ನುವ ಮೂಲ ಪ್ರಶ್ನೆ ಹುಟ್ಟಿಡಗಿತ್ತು! ಒಂದು ಕಾಲು ಮಡಚಿದ ಪ್ಯಾಂಟು, ಚಾ ಸಬ್ಜಿಗಳ ರುಚಿ ನೋಡಿದ್ದ ಮಾಸಲು ಅಂಗಿ ಧರಿಸಿದ್ದ ಬಂಗಾಳಿ ಮೂಲದ ಇಬ್ಬರು ತರುಣರು ಅದರ 'ವಾನರುಗಳು' (Owners). ಭಾರೀ ಮರದ ಬೊಡ್ಡೆಗಳನ್ನು ಉದ್ದಕ್ಕೆ ಸಿಗಿದು ಅಡಿ ಬದಿ ಕಚ್ಚಾವಾಗಿಯೇ ಉಳಿಸಿಕೊಂಡಂತ ಹಲಿಗೆಗಳಿಗೆ ಅಷ್ಟೇ ಒರಟು ಕಂಬಗಳನ್ನು ಕಾಲುಕೊಟ್ಟು ನಿಲ್ಲಿಸಿದ್ದ ನಾಲ್ಕೆಂಟು ಟೇಬಲ್, ಬೆಂಚ್, ಎಡೆಯಿದ್ದಲ್ಲಿ ಪ್ಲ್ಯಾಸ್ಟಿಕ್ ಕುರ್ಚಿಗಳು. ನೆಲ ಹೊರಗಿನದೇ ಸಹಜ ಮರಳಾದ್ದರಿಂದ ಗುಡಿಸುವ, ಒರಸುವ (ತೊಳೆಯುವ) ಕಷ್ಟವೇ ಇರಲಿಲ್ಲ. ಎಡ ಮೂಲೆಯಲ್ಲಿ ಹೊಗೆಹಿಡುಕಲು ನಾಲ್ಕಡಿ ಎತ್ತರದಲ್ಲೊಂದು ಸಣ್ಣ ಅಟ್ಟ ಮಾಡಿ ಅದಕ್ಕೊಂದು ಒರಟು ಏಣಿಯೂ ಕೊಟ್ಟಿದ್ದರು. ಅಲ್ಲಿ ಒರಗು ದಿಂಬುಗಳೊಡನೆ

ನೆಲದಲ್ಲೇ ಕುಳಿತು 'ಅಪ್ಪಟ ಭಾರತೀಯ' ಕೂಟವನ್ನೂ ನಡೆಸಬಹುದಿತ್ತು. ಇವುಗಳ ಹಿತ್ತಲಿನ ಇಳಿಸಿದ ಮಾಡಿನಡಿಯಲ್ಲಿ, ಮಾಸಲು ತಟ್ಟಿಯ ಮರೆಯಲ್ಲಿ ಅಡಿಗೆಮನೆ. ಇದರ ಒಡ್ಡುತನವೂ (ಕೊಳಕುತನ?) ನಮ್ಮ ಅನುಭವದ ಅಂಗ ಎಂದು ನಿರ್ಧರಿಸಿ ಅಡಿಗೆಮನೆಗೆ ಇಣುಕಿ ವಿಚಲಿತನಾಗಬಹುದಾದ ಅಪಾಯವನ್ನು ನಾನು ತಪ್ಪಿಸಿಕೊಂಡೆ!

ನಾಲ್ಕೆಂಟು ವಿದೇಶಿಯರು ಹರಡಿ ಕುಳಿತು, ವಿರಾಮದಲ್ಲಿ ಹರಟುತ್ತಾ 'ಪಾನಕ' ಸೇವೆ ನಡೆಸಿದ್ದರು. ಓರ್ವ 'ವಾನರ' ಹರಕು ಹಿಂದಿ, ಮುರುಕು ಇಂಗ್ಲಿಷ್ಗಳೊಡನೆ ಡಾರ್ಮಿಟರಿ ದರ್ಶನಕ್ಕೆ ನಮ್ಮನ್ನು ಹೊರನಡೆಸಿದ. ಅದೊಂದು ತೆಂಗಿನ ತೋಪು. ಎಡೆಯಲ್ಲಿ ಖಾಲೀ (ಮದ್ಯದ) ಶೀಷೆಗಳನ್ನೇ ಅಂಚುಗಟ್ಟಿದ ನಡೆಮಡಿ. ಅಲ್ಲಲ್ಲಿ ತುಂಡು ಪೀವೀಸಿ ಪೈಪ್ ನಿಲ್ಲಿಸಿ ಮೇಲೊಂದು ಮಿಣುಕು ವಿದ್ಯುತ್ ಬಲ್ಬ್ ಸಿಕ್ಕಿಸಿದ್ದರು? ರಾತ್ರಿಯ ಅನುಕೂಲಕ್ಕೆ. ಈ ಅಸಡ್ಡಾಳ ಕಾಲು ದಾರಿಯ ಅಂಚಿನಲ್ಲಿ ಅಷ್ಟೇ ಅವ್ಯವಸ್ಥಿತವಾಗಿ ಆದರೆ ಹಂಚಿಹಾಕಿದಂತೆ ಸ್ವತಂತ್ರವಾದ ವಿಚಿತ್ರ ಕೋಣೆಯೋ ಮನೆಯೋ (ನಿಜದಲ್ಲಿ ಜೋಪಡಿಗಳು) ನಿಂತಿದ್ದವು. ಅವುಗಳಲ್ಲಿ ಮೊದಲು ನಮ್ಮನ್ನು ಆರ್ಕಸಿದ್ದು 'ಪರ್ಲ್‌ಪೆಟ್ ಹೌಸ್'. ಇದು ಅಕ್ಷರಶಃ ಖಾಲೀ ಪ್ಲಾಸ್ಟಿಕ್ ಬಾಟಲಿಗಳನ್ನು ಅರ್ಧಕ್ಕೆ ಸಿಗಿದು ಬಿದಿರು ಸಲಿಕೆಗಳಿಗೆ ಹೆಣೆದು ಮಾಡಿದ ಗೋಡೆ, ಬಾಗಿಲುಗಳ ಮನೆ. ಒಳಗಿನ ವಾಸ ಎಂಥಾ ನರಕವೇ ಇರಲಿ ಒಮ್ಮೆಗೆ ಇದರ ತಮಾಶೆ ನೋಡೋಣ ಎಂಬ ಭಾವ ಯಾರಿಗೂ ಬರುವಂಥಾ ರಚನೆ. (ಆನಂದಾ ನಿನಗೆ ನೆನಪಿರಲಾರದು, ನಾನಿನ್ನೂ ಎರಡೋ ಮೂರನೆಯದೋ ಕ್ಲಾಸಿನಲ್ಲಿದ್ದೆ. ಮಡಿಕೇರಿಯ ರೊಚ್ಚು ಹಿಡಿದ ಮಳೆಗಾಲದ ಒಂದು ರಾತ್ರಿ. ಅಪ್ಪ ಎಂದಿನಂತೆ ಅಂದೂ ತಡವಾಗಿದ್ದದ್ದಕ್ಕೆ ಅಮ್ಮನಲ್ಲಿ ಮೂಡಿರಬಹುದಾದ ಆದರೆ ನಮ್ಮ ಯಾರಲ್ಲೂ ಹೇಳಿಕೊಳ್ಳಲಾಗದ ಆತಂಕಕ್ಕೆ ಅಭಿವ್ಯಕ್ತಿ ಪಡೆದಂಥ ಆಟ ನನ್ನದು. ಸಣ್ಣ ಮೇಜನ್ನು ಕವುಚಿಹಾಕಿ ಅದರ ಕಾಲುಗಳ ಮೇಲೆ ಎರಡೋ ಮೂರೋ ಕೊಡೆ ಬಿಡಿಸಿಟ್ಟು ಒಳ ಸೇರುತ್ತಿದ್ದೆ. ನೆಲಗಡಲೆ, ಬಾಳೆಹಣ್ಣು ಅಮ್ಮನ ಕಣ್ಣು ತಪ್ಪಿಸಿ ಒಳಗಿಟ್ಟುಕೊಳ್ಳುತ್ತಿದ್ದೆ ಎಂದು ನೆನಪು. ಭೀಕರ ಜಲಪ್ರಳಯ ಇಂದೇ ಸಂಭವಿಸಿದರೆ ನನ್ನ ಮರದ ಮೇಜಿನ ಮನೆ ಮುಳುಗಲರಿಯದು. ಹಸಿವೆಗೆ ಬಂದೋಬಸ್ತು ಕಡ್ಲೆ, ಹಣ್ಣು. ಅಂಥದ್ದೇ ಮೋಜಿನ ಕಲ್ಪನೆಗಿಲ್ಲಿ ವ್ಯಾವಸಾಯಿಕ ಸ್ಪರ್ಷ!) ನಮ್ಮ ಅದೃಷ್ಟಕ್ಕೆ ಅದನ್ನಾ್ಯವನೋ ಬಿಳಿದೊಗಲಿನವನು ಹಿಡಿದಿದ್ದ. ಯಾರಿಗ್ಗೊತ್ತು, ಇಲ್ಲವಾದರೆ ನಾವು ಅದನ್ನೇ ಹಿಡಿದುಬಿಡುತ್ತಿದ್ದೆವೋ ಏನೋ.

ನಮ್ಮನ್ನೊಂದು 'ಮಹಡಿಮನೆ'ಗೆ ಒಯ್ದ. ಸಮುದ್ರದ ಅಂಚಿನಿಂದ ಮೂವತ್ತೇ ಅಡಿ ದೂರದಲ್ಲಿ ತೆರೆದ ಬಾಲ್ಕನಿ ಹೊತ್ತ ಮಹಡಿ ಮನೆ ಪೂರ್ತಿ ಬಿದಿರು ಬೆತ್ತಗಳ ರಚನೆಯಂತಿತ್ತು. ಎರಡು ಪಡಿಗಳ ತಡಿಕೆ ಬಾಗಿಲನ್ನು ಶಾಸ್ತ್ರಕ್ಕೊಂದು ಸಣ್ಣ ಬೀಗ ಜಡಿದು ಮುಚ್ಚಿದ್ದರು. ಬಾಗಿಲು ತೆರೆದರೆ ಅದೊಂದು ಸಣ್ಣ ಕೋಣೆ. ಅದರ ಬಲ ಅರ್ಧಾಂಶದಲ್ಲಿ ಭಾರೀ ಮರವೊಂದರ ಸುಮಾರು ನಾಲ್ಕಡಿ ಎತ್ತರದ ಗುತ್ತಿ ಅಲ್ಲೇ ಮರವಾಗಿ ಮೆರೆದ ನೆನಪು ಹುಟ್ಟಿಸುವಂತೆ ಆವರಿಸಿಕೊಂಡಿತ್ತು. ಅದರ ಮೇಲೇರುವಂತೆ ನಾಲ್ಕು ಹಲಗೆಯ ಸೋಪಾನ. ಮತ್ತಲ್ಲಿಂದ ಬಲಕ್ಕೆ ತಿರುಗಿ ನೇರ ಮೇಲೇರುವಂತೆ ವಿಶೇಷ ಪರಿಷ್ಕರಣೆಗೊಳಪಡದ ಮರದ ಏಣಿ, ಎರಡೂ ಬದಿಗೆ ಕೈತಾಂಗು. ಮೇಲೆ ಬಲಕ್ಕೆ ದೊಡ್ಡ ಮಂಚ (ಬಿದಿರಿನ ಚಾರ್ಪಾಯ್). ಅದಕ್ಕೆ ತಾಗಿದಂತೆ ಬೆತ್ತದ ಕಪಾಟು, ಹೆಚ್ಚಿನ ಸಾಮಾನಿಡಲು ಬಿದಿರ ಸೀಳುಗಳ ಪುಟ್ಟ ಅಟ್ಟ. ಎಡಕ್ಕೆ ಸಮುದ್ರಕ್ಕೆ ಚಾಚಿಕೊಂಡಂತೆ ಸಣ್ಣ ಬಾಲ್ಕನಿ. ಬಾಲ್ಕನಿಯ ಮೂರೂ ದಿಕ್ಕಿಗೆ ಪುಟ್ಟ ಕಟಕಟೆ ಮತ್ತು ಮೇಲಿನಿಂದ ವಾಟೆ ಸಲಿಕೆಗಳನ್ನು ಹೆಣೆದ ತೆರೆ ಇಳಿಬಿಟ್ಟಿದ್ದರು. ಆ ವಠಾರದ (ಮಾತ್ರವಲ್ಲ ಒಟ್ಟಾರೆ ಈ ದ್ವೀಪಸ್ತೋಮದ ಎಂದರೂ ತಪ್ಪಾಗಲಾರದು) ಎಲ್ಲಾ ಕುಟೀರಗಳಿಗೂ ಇರುವ ಹೊರಗಿನ ಮೇಲ್-ಮುಚ್ಚಿಗೆ ಶೀಟಿನದ್ದೇ ಇದ್ದರೂ ಒಳಗಿನಿಂದ ಮರೆ ಮಾಡಿದ್ದರು. ಕೆಳಗಿನ ಪ್ರವೇಶ ಕೋಣೆಗೊಂದು ಬಟ್ಟೆಯ ತೆರೆ ಇದ್ದ ಹಿಂಬಾಗಿಲಿತ್ತು. ಅಲ್ಲೊಂದು ಪುಟ್ಟ ಆವರಣ. ಬಲಬದಿಗೆ ಕಚ್ಚಾ ಸಿಮೆಂಟು ಸಾರಿಸಿ ಒಂದು ಕಮೋಡು ಕೂರಿಸಿದ್ದರು. ಎಡ ಬದಿಗೆ ಸಹಜವಾಗಿದ್ದ ಒಂದು ದೊಡ್ಡ ಗಿಡದ ಕಾಂಡಕ್ಕೆ ತಾಗಿದಂತೆ ಶವರ್ ಸ್ನಾನಕ್ಕೆ ವ್ಯವಸ್ಥೆಯೂ ಮಾಡಿದ್ದರು. ಸ್ನಾನದ ಅಂಕಣದಲ್ಲಿ ಕಾಲಿಗೆ ಮರಳು ಹತ್ತದಂತೆ ಸಣ್ಣ ಕಟ್ಟೆ ಕಟ್ಟಿ ಒಳಗೆ ಕಚ್ಚಾ ಹವಳದ ಕಲ್ಲುಗಳನ್ನು ಹರಡಿಬಿಟ್ಟಿದ್ದರು. ಮಹಡಿಯ ಕೋಣೆಗೊಂದು ಪಂಕಾ ಸೇರಿದಂತೆ ಎಲ್ಲಾ ಕಡೆಯೂ ವಿದ್ಯುತ್ ದೀಪದ ಸೌಕರ್ಯವೂ ಇತ್ತು. ಈ 'ಜನಪದೀಯ ತೋರಿಕೆಯ ವೈಭವಕ್ಕೆ' ವಾಸ್ತವದಲ್ಲಿ ಒಮ್ಮೆ ತಮಾಷೆಗಷ್ಟೇ ವಾಸ ಮಾಡಬಹುದಾದ ಜೋಪಡಿಗೆ ಒಂದು ರಾತ್ರಿಯ ಬಾಡಿಗೆ, ಎದೆ ಗಟ್ಟಿಮಾಡಿಕೊಳ್ಳಿ, ಒಂದೂವರೆ ಸಾವಿರ ರೂಪಾಯಿ!

ಭರ್ಜರಿ ಏರೋಪ್ಲೇನ್ನಲ್ಲಿ ಹಾರಿ ಬಂದು, ಮತ್ತೂ ಸಮೀಪಕ್ಕೆ ಹೆಲಿಕಾಪ್ಟರಿನಲ್ಲಿ ಕುಪ್ಪಳಿಸಿ ಕಾಲಿನ ತೊಡವಿಗೂ ದೂಳು ಸೋಂಕದಂತೆ ಜಮಖಾನೆಯ ಮೇಲೆ ವೇದಿಕೆಗೆ ನಡೆಯುವ ಆಧುನಿಕ ಮಹಾರಾಜರುಗಳು ಒಂದು ತೋರಿಕೆಗೆ ಸ್ಥಳೀಯ ದಟ್ಟ ದರಿದ್ರರ ಒಂದು ತೊಡವನ್ನು (ಮುಟ್ಟಾಳೆ, ಯಾವುದೋ ಕಾಡು ಮಣಿಗಳ ಸರ ಇತ್ಯಾದಿ) ಧರಿಸಿ ಮಾಧ್ಯಮಗಳಲ್ಲಿ ಮೆರೆಯುವುದು ನೋಡಿದ್ದೇವೆ. ಇದು ಅಂಥದ್ದೇ ಸ್ಥಿತಿ, ಆದರೆ ನಮಗನಿವಾರ್ಯ. ನಾವು ಮರದ ಮನೆಯನ್ನೇ ಒಪ್ಪಿಕೊಂಡೆವು. ಬಾಲ್ಕನಿಯ ಮೂರೂ ದಿಕ್ಕಿನ ಪರದೆಯನ್ನು ಮೇಲೆತ್ತಿ ಕಟ್ಟಿ ಸುದೂರದ ಸಮುದ್ರ ದೃಶ್ಯಕ್ಕೆ ತೆರೆದುಕೊಂಡೆವು. ನಮ್ಮ ಅರಮನೆಯ ಅಂಗಳದಲ್ಲೇ ಬೀಚ್ ವಾಲಿಬಾಲಾಡುವವರ ಅನುಕೂಲಕ್ಕೆಂಬಂತೆ ನೆಟ್ ಕಟ್ಟಿ ಸಣ್ಣ ಕೋರ್ಟ್ ಗುರುತಿಸಿದ್ದರು. ಅದರಾಚೆಗೆ ಗೊಸರು (?) ನೆಲದ ದೊಡ್ಡ ಹರವು. ಅದರ ದೂರದ ಕೊನೆಯಲ್ಲಿ ಯಾರೋ ಒಂದು

ದೋಣಿಯನ್ನು ಯಾವುದೋ ಒಂದು ಕೊರಡಿಗೆ ಕಟ್ಟಿಹೋಗಿದ್ದರು. ಅದರಾಚಿನ ನೀರ ನೀಲಿಮೆ (?) ಸಮುದ್ರ. ನಮ್ಮೂರ ಗಂಟೆ ಅಂದಾಜಿನಲ್ಲಿ ನಾವು ಬೇಗನೆ ಹ್ಯಾವ್ಲಾಕ್ ತಲಪಿದ್ದರೂ ಪೂರ್ವ ಸಾಗರದಲ್ಲಿರುವ ಅಂಡಮಾನ್ ಲೆಕ್ಕದಲ್ಲಿ ತಡವಾದ್ದು ತಿಳಿಸಲು ಐದೂವರೆಗೇ ಕತ್ತಲಾವರಿಸತೊಡಗಿತು.

ಕತ್ತಲರಾಜ್ಯದಲ್ಲಿರುವ ಆನಂದಾ (ಹಾರಾಡಬೇಡ, ನಮ್ಮ ಹಗಲಿನಲ್ಲಿ ಅಮೆರಿಕಾದ ನೀವು ಕತ್ತಲಲ್ಲಿರುತ್ತೀರಿ ಎಂದಷ್ಟೇ ಅರ್ಥ) ನಿನಗಿದನ್ನು ಕುಟ್ಟಿ ಹೇಳುತ್ತಾ (ಗಾಬರಿಯಾಗಬೇಡ, ಲೇಖನಿ ಹಿಡಿದು ಬರೆಯುವುದಲ್ಲಾ, ಗಣಕದ ಕೀಲಿಮಣೆ ಬಳಸುತ್ತಿದ್ದೇನೆ ಎಂಬ ಎಚ್ಚರ ಅಷ್ಟೆ) ನಾನು ರಾತ್ರಿ ಹನ್ನೊಂದು ಗಂಟೆಯ ತಪ್ಪು ಮಗ್ಗುಲಿನಲ್ಲಿ. ಅಲ್ಲಿ, ಚೆನ್ನೈಯ ದೂರದಿಂದ ಹಲವು ಸಾಹಸ ಮಾಡಿ ಹ್ಯಾವ್ಲಾಕಿನ ಗೂಡು ಸೇರಿದಲ್ಲಿಯೂ ಕತ್ತಲು ಆವರಿಸಿತು ಎಂದ ಮೇಲೆ ಇಂದು ಇನ್ನು ವಿಸ್ತರಣೆಗೆ ಮನಸ್ಸು ಬಾರದು, ನಿದ್ರೆ ತೂಗುತ್ತಿದೆ. ಶುಭರಾತ್ರಿ ಅಲ್ಲಲ್ಲ ನಿನಗೆ ಶುಭ ಪ್ರಾತಃಕಾಲ!
ಇಂತು ನಿನ್ನಗ್ರಜ

ಪತ್ರ ಮೂರು

ಅರಮನೆಯಾದ ಜೋಪಡಿ



‘ಛಲಬಿಡದ ರಾಜಾ ತ್ರಿವಿಕ್ರಮನು ಮತ್ತೆ ಮರದ ಬಳಿಗೆ ಹೋಗಿ, ಬೇತಾಳನನ್ನು ಇಳಿಸಿ, ಹೆಗಲ ಮೇಲೆ ಹಾಕಿಕೊಂಡು ಮೌನವಾಗಿ ನಡೆಯತೊಡಗಿದ’ ಎಂಬ ಮಾತುಗಳು ನಿನಗೇನು, ಚಂದಮಾಮದ ಓದುಗರಿಗೆಲ್ಲಾ ಸುಪರಿಚಿತವೇ. ಹಾಗೇ ನಾನೂ ಮರದ ಮನೆಯಿಂದ ನೆನಪಿನ ಬೇತಾಳವನ್ನು ಹೊತ್ತು ಮೌನವಾಗಿ ಹೊರಟಿದ್ದೇನೆ. ಬೇತಾಳ ನಗುತ್ತದೆ “ಅಯ್ಯಾ ರಾಜಾ ಕತ್ತಲು ಬೇಗಾಯ್ತೆಂದ ಮಾತ್ರಕ್ಕೆ ನೀನು ನಿದ್ದೆಗೆ ಶರಣಾಗಬೇಕೆಂಬ ಭ್ರಮೆ ಬಿಡು. ನಿನ್ನ ಮಾರ್ಗಾಯಾಸಕ್ಕೆ ಹ್ಯಾವ್ಲಾಕ್ ದ್ವೀಪದ ಮರದ ಮನೆ ಸೇರಿದವರ ಮುಂದಿನ ಕಥೆ ಹೇಳುತ್ತೇನೆ.” ಮರುದಿನದ ಕಾರ್ಯಕ್ರಮ ಗಟ್ಟಿಮಾಡುವ ಅವಸರದಲ್ಲಿ ಅಲ್ಲೇ ನಮ್ಮ ಚೀಲಗಳನ್ನು ಎಸೆದು (ಅಮೂಲ್ಯವಾದ್ದನ್ನು ನಾವೇ ಹೊತ್ತು) ಮತ್ತೆ ದಾರಿಗೆ ಬಂದೆವು. ಕಾರೇರಿ ದಕ್ಕೆಯಿಂದ ಬಂದ ದಾರಿಯಲ್ಲೇ ಸ್ವಲ್ಪ ಮುಂದೆಲ್ಲೋ ಡೈವ್ ಇಂಡಿಯಾದ ಕಛೇರಿಯಿದೆಯೆಂದು ತಿಳಿದು ನಡೆದಿದ್ದೆವು. ಸೂರ್ಯಾಸ್ತವಾಗಿ ಮಂದ ಬೆಳಕಷ್ಟೇ ಉಳಿದಿತ್ತು. ಅಪರಿಚಿತ ನೆಲದಲ್ಲಿ ನಮ್ಮ ಎಚ್ಚರಕ್ಕೆ ಟಾರ್ಚೇನೋ ಹಿಡಿದಿದ್ದೆವು ಆದರೆ ‘ಬರಬಹುದಾದದ್ದರ’ (ಹಾವೋ ಹುಲಿಯೋ) ಕಲ್ಪನೆ ಏನೂ ಇರಲಿಲ್ಲ. ಆಗ ಬಡಿಯಿತು ಕಿವಿಗೆ ಭೀಕರ ಆರ್ತನಾದ! ನಮ್ಮ ಹಿಂದೆ ದಾರಿಯ ಬಲಬದಿಯ ಕುರುಚಲು ಕಾಡಿನಾಚೆಯಿಂದೆಲ್ಲೋ ಅಲೆಯಲೆಯಾಗಿ ದೀರ್ಘ ಕೀರಲು ಕೂಗು. ಏಕಚಕ್ರಾನಗರಿಯಲ್ಲಿ ಭಿಕ್ಷಾಟನೆ ಮಾಡಿ ಊಟಕ್ಕೆ ಕೂತ ಪಂಚ–ಪಾಂಡವರಿಗೆ ಬಡಬ್ರಾಹ್ಮಣನ ಮನೆಯಿಂದ ಇಂಥದ್ದೇ ಕೇಳಿರಬೇಕು. ನಾವು ಪಾಂಡವರಲ್ಲದಿದ್ದರೂ ಪಂಚರು ಹೌದಷ್ಟೇ? ಮೊದಲು ಗಾಬರಿಯಾದರೂ ಬಿಗಡಾಯಿಸಿರಬಹುದಾದ ಪರಿಸ್ಥಿತಿಯನ್ನು ಸ್ವಲ್ಪವಾದರೂ ತಣಿಸಲು ಇನ್ನೇನು ಅತ್ತ ಧಾವಿಸಬೇಕಿತ್ತು! ಅಷ್ಟರಲ್ಲಿ ಇಲ್ಲೇ ಎದುರಿನ ಕಾಲ್ದಾರಿಯ ಆಚಿನಿಂದಲೂ ಇನ್ನೊಂದು ಅಂಥದೇ ಕಳಕು ಕೇಳಿಸಿತು. ಮತ್ತೆ ಎಲ್ಲೆಲ್ಲಿಂದಲೋ ವಿವಿಧ ಶ್ರುತಿಗಳಲ್ಲಿ ಮತ್ತಷ್ಟು ಮಗುದಷ್ಟು ಕಳಕುಗಳು ಅನುರಣಿಸತೊಡಗಿದಾಗ ಇಲ್ಲ, ಇದೇನೋ ಸಾಂಪ್ರದಾಯಿಕ ಆಚರಣೆ ಎಂದು ನಿಂತಲ್ಲೇ ತಣಿದೆವು. ನಮ್ಮ ಮೊಂಟೆಪದವಿನಲ್ಲಿ ದಿನದ ವಿವಿಧ ವೇಳೆಯಲ್ಲಿ ಒಮ್ಮೆಗೆ ಯಾವುದೋ ಪಳ್ಳಿಯಿಂದ ತೊಡಗಿ ಸುತ್ತಣ ಏಳೆಂಟು ಪಳ್ಳಿಗಳಿಂದ ಪ್ರತಿಧ್ವನಿಸಿದಂತೆ ಕೇಳುವ ಧಾರ್ಮಿಕ ಕರೆಯದ್ದೇ (ಭಾಂಗ್?) ಮೈಕ್ ರಹಿತ ಅನುರಣನೆ ಕೇಳಿದಂತಾಯ್ತು. ಮರಿಕೆ ಮನೆಯಲ್ಲಿ (ನಮ್ಮ ಅಜ್ಜನ ಮನೆ) ಅತ್ತಿಗೆ (ವಾಸ್ತವದಲ್ಲಿ ಸೋದರಮಾವನ ಹೆಂಡತಿ ಅತ್ತೆ) ಸೂರ್ಯಾಸ್ತದ ವೇಳೆ ಮನೆ ದೇವರ ದೀಪ ಹಚ್ಚಿ, ಮೂರು ಬಾರಿ ಶಂಖವಾದನ ಮಾಡುತ್ತಿದ್ದದ್ದೂ ಸಂವಾದಿಯಾಗಿ ಮನೆಯ ನಾಯಿ ಅಷ್ಟೇ ತಾದಾತ್ಮ್ಯದಿಂದ ಊಳಿಡುತ್ತಿದ್ದದ್ದೂ ನೆನಪಿಗೆ ಬಂತು. ಅಭಯನಿಗೆ ತ್ರಿಪುರದಲ್ಲಿ ಚಿತ್ರ ತೆಗೆಯಲು ಹೋಗಿದ್ದಾಗಿನ ಅನುಭವವಂತೂ ನಮಗೆ ಸ್ಪಷ್ಟ ಧೈರ್ಯವನ್ನು ಕೊಟ್ಟಿತು. ಬಂಗಾಳಿಗಳಿಗೆ ಪ್ರತಿ ಸಂಜೆಯ ಈ ಕಳಕು ಒಂದು ಕಳಚಿಕೊಳ್ಳಲಾಗದ ಸಂಪ್ರದಾಯವಂತೆ! ಎಲ್ಲಾದರು ಇರು... ಹ್ಯಾವ್ಲಾಕಿನಲ್ಲಿದ್ದರೂ ನೀ ಬಂಗಾಳಿಯಾಗಿರು! ಬಕಾಸುರನನ್ನು ಬಡೀತಿದ್ರೋ ಇಲ್ವೋ ಬಂಡಿ ಅನ್ನವಂತೂ ಹೊಡೀತಿದ್ರೂ; ತಪ್ಪಿಹೋಯ್ತು!

ಅರ್ಧ–ಮುಕ್ಕಾಲು ಕಿಮೀ ನಡೆದಾಗುವಾಗ ಒಂದೆರಡು ರಿಸಾರ್ಟುಗಳ ಬೋರ್ಡು ಕಳೆದು ಡೈವ್ ಇಂಡಿಯಾ ತಲಪಿದೆವು. ಇದೂ ಮೂಲತಃ ಎರಡು ಸಾಲಿನಲ್ಲಿ ಸುವ್ಯವಸ್ಥಿತಗೊಂಡ ದೊಡ್ಡ ಗುಡಾರಗಳ ವಸತಿ ವ್ಯವಸ್ಥೆ. ಇವುಗಳ ಎಡ ಸಾಲಿನ ಕೊನೆಯ ಒಂದು ಗುಡಾರದಲ್ಲಿ ಕ್ಯಾಂಟೀನಿನ ವ್ಯವಸ್ಥೆ ಇದ್ದರೆ ಬಲಸಾಲಿನ ಕೊನೆಯದ್ದು ಕಡಲ ಶೋಧದ ಕ್ರೀಡಾಪ್ರಿಯರಿಗೆ ಅವಶ್ಯವಾದ ಡೈವ್ ಇಂಡಿಯಾದ ಉಗ್ರಾಣ/ಕಛೇರಿ. ಔಪಚಾರಿಕತೆಗಳನ್ನೆಲ್ಲ ಕಳಚಿಕೊಂಡ, ಪಕ್ಕಾ 'ಕೆಲಸ'ವನ್ನಷ್ಟೇ ನಡೆಸುವಂತಿದ್ದ ಅದರ ವರಿಷ್ಠೆ ಒಬ್ಬ ಮಹಿಳಾಮಣಿ! ಪ್ರತಿ ಬೆಳಿಗ್ಗೆ ಇವರು ಆಸಕ್ತ 'ಅತಿಥಿ'ಗಳಿಗೆ (ಹೊರಗಿನವರಿಗೂ) ಸ್ನಾರ್ಕೆಲಿಂಗ್ ಮತ್ತು ಸ್ಕೂಬಾ ಡೈವಿಂಗ್‌ಗಳ ಸಲಕರಣೆ ಸಹಿತ ಯೋಗ್ಯ ತಾಣಗಳಿಗೊಯ್ದು ಅಗತ್ಯವಿದ್ದರೆ ತರಬೇತಿ ಸಹಿತ ಅವಕಾಶ ಕಲ್ಪಿಸುತ್ತಾರೆ. ಒಂದು ಮುಳುಗಿಗೆ ರೂಪಾಯಿ ಸಾವಿರ ಮಿಕ್ಕುವ ಸ್ಕೂಬಾಕ್ಕೆ ನಿರೇನ್, ರೂಪಾಯಿ ನೂರು ಮೀರುವ ಸ್ನಾರ್ಕೆಲಿಂಗಿಗೆ ಉಳಿದ ನಾಲ್ವರು ಹೆಸರು ನೋಂದಾಯಿಸಿ ಮರಳಿದೆವು.



ನಾಲ್ಕೈದೇ ಕಿಮೀ ಉದ್ದವಿರಬಹುದಾದ ಆ ದ್ವೀಪ–ದಾರಿಯಲ್ಲೂ ಒಂದು ಪುಟ್ಟ ಬಸ್ಸು ಓಡಿದಾಗ ನಾವು ಮೂಗಿಗೆ ಬೆರಳೇರಿಸಿದೆವು. ದಾರಿಗೆ ಉಜ್ವಲ ಬೀದಿದೀಪದ ವೈಭವವಿರಲಿಲ್ಲ ಆದರೆ ಎಲ್ಲಾ ವಸತಿ ಕೇಂದ್ರಗಳನ್ನೂ ಗುರುತಿಸುವಷ್ಟು ಮಿನುಗು ದೀಪಗಳಿಗೆ ಕೊರತೆಯಿರಲಿಲ್ಲ. ಸುತ್ತ ಒತ್ತಿ ನಿಂತಿರುವುದು ಉಪ್ಪುನೀರಿನ ಮೊತ್ತ, ನೆಲವೋ ಹವಳಾವಶೇಷಗಳ ಮೇಲಿನ ತೋರಿಕೆಯ ಮಣ್ಣು. ಆದರೂ ಸಿಹಿನೀರಿನ ಕೊಳಾಯಿ ನಿರಂತರ ಎನ್ನುವ ಭಾವ ನಮಗೆ ಮೂಡಿಸಿತ್ತು! ಇವನ್ನೆಲ್ಲ ಒಂದು ಪುಟ್ಟ ನೆಲದ ತುಣುಕು (ದ್ವೀಪ) ಸ್ವತಂತ್ರವಾಗಿ ರೂಢಿಸಿಕೊಂಡಿದೆ ಎಂದು ಹೊಳೆದಾಗ ಮುಖ್ಯಭೂಮಿಂದ ಬಂದ ನಮಗೆ ಊರೆಲ್ಲಾ ಬೂದಿ ತುಂಬುವ, ಘಟ್ಟವೆಲ್ಲಾ ಮಟ್ಟಮಾಡಿ ಚತುಷ್ಪಥದ ಗೀಟೆಳೆಯುವ, ಸಹಜ ಪಾತ್ರೆ ಕೆಡಿಸಿ ಇನ್ನೆಲ್ಲಿಗೋ ನದಿತಿರುಗಿಸುವ ಕೆಟ್ಟ ಯೋಜನೆಗಳ ನೆನಪುಗಳು ಕಾಡದಿರಲಿಲ್ಲ.

ನಮ್ಮ ವಸತಿ ವ್ಯವಸ್ಥೆಗೆ ಮರಳಿದವರೇ ಊಟದ ಮನೆ ಹೊಕ್ಕೆವು. ಒಂದು ಬದಿಯಲ್ಲಿ ವಿಶೇಷ ಅನ್ಯೋನ್ಯವೇನೂ ಇಲ್ಲದಂತೆ ನಾಲ್ಕೆಂಟು ವಿದೇಶೀಯರು ಮೆಲುಧ್ವನಿಯಲ್ಲಿ ಬೇಕೋ ಬೇಡವೋ ಎಂಬಂತೆ ಮಾತನ್ನೂ ಏನೂ ಅವಸರವಿಲ್ಲದಂತೆ ಚಷಕವನ್ನೂ ಬಳಸುತ್ತಿದ್ದರು. ನಾವು ನಮ್ಮ ಸಹಜ ಸ್ಥಿತಿಯಲ್ಲಿ (ಗದ್ದಲವೆಬ್ಬಿಸದಿದ್ದರೂ ಮಾತು ಹಾಸ್ಯಕ್ಕೇನೂ ಕೊರತೆಮಾಡಿಕೊಳ್ಳದೆ) ಒಂದಷ್ಟು ರೊಟ್ಟಿ (ರೋಟಿ), ಅನ್ನ (ಚಾವಲ್), ತೊವ್ವೆ (ದಾಲ್), ಪಲ್ಯಗಳಿಗೆ (ಸಬ್ಜಿ) ಆದೇಶಿಸಿ ಪಟ್ಟಾಂಗ ಮುಂದುವರಿಸಿದೆವು. ಹೊತ್ತು ಕಳೆದು, ಒಂದೂವರೆ ಕಾಲಿನ (ಇಜಾರದ) 'ವಾನರು'ಗಳು ಕೊಟ್ಟ ಏನೋ ಒಂದಷ್ಟು ಹೊಟ್ಟೆಗೆ ಹಾಕಿ ನಮ್ಮ 'ಅರೆಮನೆ' (ಈಗ ಅಮೆರಿಕಾದಲ್ಲೇ ಇರುವ ಶರತ್ ನಿನಗ್ಗೊತ್ತಿದೆ. ಆತ ಶಿರಾಡಿಯ ಬಳಿಯಲ್ಲಿ ತನ್ನ ಪಾಲಿಗೊದಗಿದ ಆಸ್ತಿಗೆ ಕಾಲಿಟ್ಟಾಗ ಉಳಿದುಕೊಳ್ಳಲು ಒಂದು ಜೋಪಡಿ ಮಾಡಿಸಿಕೊಂಡಿದ್ದ. ಅರೆಬರೆ ಮನೆಯಂತೇ ಇದ್ದ ಅದಕ್ಕೆ ಅವನೇ ಪಿರೀತಿಯಿಂದ ಇಟ್ಟ ಹೆಸರು ಅರೆಮನೆ) ಸೇರಿದೆವು. ಮಂದ ತಿಂಗಳ ಬೆಳಕಿನಲ್ಲಿ, ತೆಂಗಿನಕೈ ತೂಗುವ ಮೆಲುಗಾಳಿಯಲ್ಲಿ, ಮಿನುಗುವ ದಾರಿ ದೀಪಗಳ ಕೊನೆಯಲ್ಲಿ ಅರಮನೆ ನೇರ ಮಾಯಾಮಂತ್ರದ ಕಾಮಿಕ್ ಪುಟದಿಂದೆದ್ದಂತಿತ್ತು. ಮಾತ್ರವಲ್ಲ ಇನ್ನೂ ಏನೋ ಇದೆ ಎಂಬ ಲಹರಿ ವಾತವರಣದಲ್ಲಿ ಇತ್ತು! ನೋಡುವುದೇನು, ಹಾಳು ಸುರಿದಿದ್ದ ಜವುಗು ನೆಲ ಮಂಗಮಾಯ, ಅಲೆಯುಕ್ಕಿ ನಗುವ ಸಮುದ್ರ ಹಾಜರ್. ಕೊರಡಿನೊಡನೆ ಕೆಸರಿಗೊರಗಿದ್ದ ದೋಣಿಯ ಛಾಯೆಯೀಗ ಎರೆ ಕಂಡು ಸರಪಣಿ ಜಗ್ಗುವ ಬೇಟೆಗಾರ; ಕೊಟ್ಟಿಗೆಯಂಚಿನಲ್ಲಿ ಅಮ್ಮನಿಗೆ ಗುಮ್ಮಲು ಹಗ್ಗ ತುಯ್ಯುವ ಪುಂಡ. ಉಪಾಧ್ಯರ ತಲೆಯೋಡಿತು "ಅಯ್ಯೋ ಮಾರಾಯ್ರೇ. ನಾವಾವಾಗ ಕಂಡ ಸ್ಥಿತಿ ಇಳಿತ, ಈಗ ಭರತ. ರಾಜಕೀಯ ಭಾಷೆಯಲ್ಲಿ ಕರ್ನಾಟಕದ ಕರಾವಳಿಯೂ ಅಂಡಮಾನ್ ಕರಾವಳಿಯೂ ಭಾರತವೇ ಸರಿ. ಆದರೆ ಭೌಗೋಳಿಕ ಸತ್ಯದಲ್ಲಿ ಇಲ್ಲಿನ ಸೂರ್ಯಾಸ್ತ ಐದಕ್ಕೇ ಆಗುವುದಾದರೆ ರಾತ್ರಿ ಒಂಬತ್ತಕ್ಕೆ ಭರತ ನಡೆಯುವುದು ಸಂಭವವೇ?" ಅಕ್ಷಾಂಶ, ರೇಖಾಂಶ, ಶುಕ್ಲಪಕ್ಷ, ಕೃಷ್ಣಪಕ್ಷ, ಚಂದ್ರೋದಯಾಸ್ತ ಅಳೆದು ಸುರಿದು ಭಯಂಕರ ಲೆಕ್ಕವನ್ನೇ ಒಪ್ಪಿಸಿಬಿಟ್ಟರು. ನಿನ್ನ (ಈ ಬರೆಹದ ಓದುಗರ) ಸೌಭಾಗ್ಯವೋ ದುರದೃಷ್ಟವೋ ಅವಷ್ಟೂ ನನ್ನ ತಲೆಮೇಲಿನಿಂದ ಹೋಯ್ತು. (ಪ್ರವಾಸ ಕಥನದ ಮೊದಲ ಕಂತಿನ ಕೊನೆಯಲ್ಲಿ ಹೇಳಿದ ಆಗಸದೆತ್ತರದ ಉಷ್ಣಾಂಶವನ್ನೂ ಇದರೊಡನೇ ಎಂದೋ ಸೇರಿಸಿಬಿಟ್ಟಿದ್ದೇನೆ!) ಅಲ್ಲೇ ಅಡ್ಡ ಹಾಕಿದ್ದ ಒಂದು ದೊಡ್ಡ ಮರದ ಬೊಡ್ಡೆಯ ಮೇಲೆ ಕುಳಿತು ಆಗೀಗ ಕಾಲು ನೆಕ್ಕಲು ಬರುವ ತೆಳು ಅಲೆಗಳಾಟ ಅನುಭವಿಸುತ್ತಾ ತುಸು ಹೊತ್ತು ಕಳೆದು ಗುಡ್ನಾಯಿಟಿಸಿದೆವು.

ದಿನ ಮೂರು (ಏಪ್ರಿಲ್ ೨೦)

ಸಾಗರಶೋಧ



"ಬೆಳ್ಳನೇ ಬೆಳಕಾಯಿತು?" ಎಂದು ಲತಾಮಂಗೇಶ್ಕರ್ ರಾಗ ತೆಗೆಯುವ ಮನಸ್ಸು ನನ್ನದು (ಗಂಟಲು ಗೊಗ್ಗರು ಎನ್ನುವುದು ಪ್ರತ್ಯೇಕ). ಆದರೆ ಗಂಟೆ ಇನ್ನೂ ನಾಲ್ಕರ ಆಸುಪಾಸು! ಇಲ್ಲಿನ ಸೂರ್ಯನ ಮೋಸ ತಿಳಿದವರಂತೆ ಎಲ್ಲರೂ ಗಾಢನಿದ್ರೆ. ಹೇಗೋ ಸ್ವಲ್ಪ ಸಮಯ ಸುಧಾರಿಸಿ ಮತ್ತೆ ಉಳಿದವರಿಗೆ ಸಾಕಷ್ಟು ಕೀಟಲೆ ಕೊಟ್ಟು, ಎಲ್ಲರೂ ಅರಮನೆ ಬಿಡುವಾಗ ಇನ್ನೂ ಸಾಕಷ್ಟು ಸಮಯ ಉಳಿದೇ ಇತ್ತು. (ಶೌಚ ಮುಗಿಸಿಕೊಂಡಮೇಲೆ) ಹೊರಡಲು ಏನೂ ಆಗಬೇಕಿರಲಿಲ್ಲ ಎನ್ನುವುದು ಅಂದಿನ ಕಾರ್ಯಕ್ರಮದ ವಿಶೇಷ. ಕನಿಷ್ಠ ಲಗ್ಗೇಜು, ತೀರಾ ಅನೌಪಚಾರಿಕ ವೇಷ ಎಂದು ಧರಿಸಿದ್ದರೂ ಅವೂ ಹೊರೆಯಾಗುವಂತೆ ಸಮುದ್ರಮುಳುಗು ಸ್ನಾನವೇ ನಮ್ಮ ಗುರಿ. ಡೈವ್ ಇಂಡಿಯಾಕ್ಕೆ ನಾವು ಔಪಚಾರಿಕ ದಾರಿ ಹಿಡಿಯಲಿಲ್ಲ. ಮತ್ತೆ ಇಳಿತದಲ್ಲಿದ್ದ ನಮ್ಮಂಚಿನ ಕಿನಾರೆಯನ್ನು ನೋಡುತ್ತ ನಡೆದೆವು. ಹೊರನೋಟಕ್ಕೆ ನಮ್ಮೂರ ಕೆಟ್ಟ ಕೆರೆ ತೋಡುಗಳ ಕೊಳೆತ ಅಂಚಿನಂತೇ ಕಾಣುವ ಆ ನೆಲ ವಾಸ್ತವದಲ್ಲಿ ಪೂರ್ತಿ ಬೇರೇ. ನಾಡಿ ಮಿಡಿತದಂತೆ ತೆಳು ನೀರ ಅಲೆಯ ನಿಯತ ಒಲೆ ನಡೆದೇ ಇತ್ತು, ಒಟ್ಟು ಜಲರೇಖೆ ಕ್ಷಣದಿಂದ ಕ್ಷಣಕ್ಕೆ ದಂಡೆಯಿಂದ ದೂರ ಸರಿಯುತ್ತಲೂ ಇತ್ತು. ಹಿಂದಿನ ಸಂಜೆ ನಾವು ಭ್ರಮಿಸಿದಂತೆ ಎಲ್ಲೂ ಗೊಸರು, ಕೊಳೆಯಕುಪ್ಪೆ ಇರಲಿಲ್ಲ. ತೆರೆದಮೈಯಲ್ಲಿ ಹರಡಿ ಬಿದ್ದು, ಕಂಬಳಿ ಹೊದ್ದ ಬಂಡೆಗಳಂತೆ ತೋರುವ ಭಾರೀ ಆಕೃತಿಗಳಿಂದ ತೊಡಗಿ ಮರಳಂತೆ ತೋರುವ ಹುಡಿಯವರೆಗಿಲ್ಲಿ ಎಲ್ಲವೂ ಹವಳದ ಅವಶೇಷಗಳು. ಪಾದ ಹುಗಿಯುವ ಮಾತೇ ಇಲ್ಲ. ತಪ್ಪಿ ಬರಿಗಾಲಿನಲ್ಲಿ ನಡೆದಾಡಿದರೆ ಗೀರು, ಗಾಯ ಖಚಿತ.

ಏಡಿಯೇ ಮೊದಲಾಗಿ ಉಭಯಚರಿಗಳ ಸಂತೆ ಸರಕು ಪ್ರತಿ ಹೆಜ್ಜೆಯಲ್ಲೂ ನಮ್ಮನ್ನು ಸೆಳೆಯುತ್ತಿತ್ತು. ನೆನಪಿರಲಿ, ಸರಕುಗಳು ಮಾತ್ರ, ಯಜಮಾನರುಗಳು ದರ್ಶನ ಕೊಟ್ಟದ್ದು ಬಹಳ ಕಡಮೆ! ಅಥವಾ ಬಿಗ್ ಬಜಾರಿನಂತೆ ನಮ್ಮನ್ನು ಸ್ವಸಹಾಯಪದ್ಧತಿಗೆ ಬಿಟ್ಟು ಮಾಯಾಕಣ್ಣಿನ ಮೂಲಕ (ಸಿಸಿ ಟೀವಿ) 'ಸೆರೆ' ಹಿಡಿಯುವುದನ್ನೂ ಕಲಿತುಬಿಟ್ಟಿವೆಯೋ ಏನೋ. ಅವುಗಳಲ್ಲಿ ಬಹಳ ಎದ್ದು ಕಾಣುತ್ತಿದ್ದ ಒಂದನ್ನು ಕುರಿತು ನಾಲ್ಕು ನುಡಿಮಣಿ ಪೋಣಿಸದಿರಲಾರೆ. ಸುಮಾರು ಹದಿನೈದಿಪ್ಪತ್ತು ಮಿನಿಟುಗಳ ಹಿಂದೆ ನೀರು ಬಿಟ್ಟ ಪುಳಿನಕಿನಾರೆಯಲ್ಲಿ ಅಲ್ಲಲ್ಲಿ ಒಂದು ವಿಚಿತ್ರ ಮರಳಶಿಲ್ಪ; ಪ್ರಾಥಮಿಕ ಶಾಲಾ ಮಕ್ಕಳ ಚಿತ್ರಪುಸ್ತಕದ ಸೂರ್ಯನದೇ ಪ್ರತಿರೂಪ. ಅಕ್ಷತ ಮರಳಹಾಸಿನ ಮೇಲೆ ದಪ್ಪದ ದಬ್ಬಣ ಚುಚ್ಚಿ ಮಾಡಿದಂತಿದ್ದ ತೂತವೇ ಸೂರ್ಯ. ಅಲ್ಲಿಂದ ಹೊರಟು ವಿಸ್ತರಿಸುವ, ಹೆಚ್ಚು ಕಡಮೆ ಸರಳ ರೇಖೆಗಳುದ್ದಕ್ಕೆ ಪುಟ್ಟ ಮರಳ ಗೋಲಿಗಳ ಜೋಡಣೆ! ಥೇಟ್ ಕಿರಣಗಳ ಕೋಲಿನ ಕೊಲಾಜ್. ಈ ವಿಚಿತ್ರದ ಕಲಾವಿದ ಮಿನಿ ಏಡಿಗಳಂತೆ. ನಿರ್ಮೋಹಿ, ವೃತ್ತಿಪರರಂತೆ ಒಂದೂ ನಮಗೆ ದರ್ಶನ ಕೊಡಲಿಲ್ಲ.



ಹೀಗೇ ಹಲವು ತೆರನ ಕಡಲ ವೈಶಿಷ್ಟ್ಯ, ಕಡಲಿನದ್ದೇ 'ತ್ಯಾಜ್ಯ'. ನಮ್ಮೂರಲ್ಲಿ ಸಹಜವಾದ 'ನಾಗರಿಕ ಕೊಳೆ' ಒಮ್ಮೆಯೂ ಸಿಗಲಿಲ್ಲ!

ಭಾರಿ ದೂರವೇನೂ ಇರಲಿಲ್ಲ, ಹಸಿಮರಳ ಹಾಸಿನ ಮೇಲೆ ಲೆಕ್ಕ ಹಾಕಿ ನಾನೂರಾ ತೊಂಬತ್ತೇಳೂವರೆ ಹೆಜ್ಜೆ (ನೀನು ಬೇಕಾದರೆ ಹೋಗಿ ಲೆಕ್ಕ ಮಾಡಬಹುದು. ಇನ್ನೇನು ಜೆಲ್ಲಿಫಿಶ್ ಮೆಟ್ಟಿಬಿಡುತ್ತೇನೆ ಎಂದು ತಡವರಿಸಿದಲ್ಲಿ ಅರ್ಧ ಹೆಜ್ಜೆ!) ಗುರುತು ಮೂಡಿಸುವಷ್ಟರಲ್ಲಿ ಡೈವ್ ಇಂಡಿಯಾದ ಕಿನಾರೆಯಲ್ಲಿದ್ದೆವು. ಅಲ್ಲಿನ ಕ್ಯಾಂಟೀನ್ ಹೊಕ್ಕು ಒಂದೆರಡು ಎಸಳು ಬ್ರೆಡ್‌ಗೆ ತೇಗಿ, ಚಾ ನೆಕ್ಕಿ (ಆ ಪರಿಸರದಲ್ಲಿ ನಮ್ಮ ಹಣ ಅಪಮೌಲ್ಯಗೊಂಡಿತ್ತು! ನಿಜವಾಗಿ ತಿಂದು,

ಕುಡಿಯಬೇಕಿದ್ದರೆ ನಾವು ರೊಕ್ಕದಲ್ಲಿ ಸೊಕ್ಕಬೇಕಿತ್ತು.) ಕಛೇರಿಯಲ್ಲಿ ಹಾಜರೊಪ್ಪಿಸಿದೆವು. ನಮ್ಮ ಚಪ್ಪಲಿ ಅಲ್ಲಿ ಕಳಚಿಟ್ಟು ಅವರು ತೋರಿದ ಜಾಲಪಾದದ ತೊಡರುಗಳ ರಾಶಿಯಿಂದ ನಮ್ಮ ಅಳತೆಯನ್ನು ಹೆಕ್ಕಿಕೊಂಡೆವು. ನೀರ ಮೇಲ್ಪದರದಲ್ಲೇ ಚಟುವಟಿಕೆ ನಡೆಸಲಿದ್ದ ನಮ್ಮ ನಾಲ್ವರಿಗೆ ತೇಲುವ ಬೆಂಡಿನ ಕವಚ (ಲೈಫ್ ಜಾಕೆಟ್) ಮತ್ತು ಸ್ನಾರ್ಕೆಲ್, ಅಂದರೆ ಕಣ್ಣುಗಳನ್ನು ಬಿಗಿಯಾಗಿ ಆವರಿಸುವ ಕನ್ನಡಕ ಮತ್ತು ಬಾಯಲ್ಲಿ ಕಚ್ಚಿಕೊಂಡರೆ ತಲೆಯ ಹಿಂಬದಿಗೆ ಸುಮಾರು ಮೂರಿಂಚು ದೂರ ನಿಲ್ಲುವ ಒಂದು ಕೊಳವೆಯನ್ನು ಒದಗಿಸಿದರು. ನೀರಾಳಕ್ಕೇ ನುಗ್ಗಲಿದ್ದ ನಿರೇನಿನ ಸಲಕರಣೆಗಳು ನಮ್ಮದರಷ್ಟು ಸರಳವಲ್ಲವಾದ್ದರಿಂದ ಅವನ್ನು ಸಂಘಟಕರೇ ನಮಗಾಗಿದ್ದ ದೋಣಿಗೆ ಹೊತ್ತು ತುಂಬಿದ್ದರು. ನಾವು ಹಿಂದಿನ ದಿನ ನೋಡಿದ್ದ ಕೊರಡಿಗೆ ಕಟ್ಟಿದ್ದ ದೋಣಿಯಲ್ಲದೆ ಇನ್ನೊಂದೂ ಸಾಹಸಕ್ರೀಡೆಗೆ ಸಜ್ಜುಗೊಂಡಿತ್ತು. ಡೈವ್ ಇಂಡಿಯಾದ ಶಿಬಿರದಿಂದ ಮತ್ತು ಆಸುಪಾಸಿನಿಂದಲೂ ಹಲವು ಪ್ರವಾಸಿಗಳು (ಅವರೆಲ್ಲ ವಿದೇಶೀಯರೇ!) ಸೇರಿಕೊಂಡರು.

ಪರಂಗಿಗಳೋ ರೆಡಿ ಟು ಡೈವ್ ಅಂದರೆ ಕನಿಷ್ಠ ಉಡುಪಿನಲ್ಲೇ ಬಂದಿದ್ದರು. ಗಂಡಸರಿಗೆ ಆರಿಂಚಗಲದ ಒಂದು ತುಂಡು ಬಟ್ಟೆ ಸಾಕಾದರೆ ಹೆಂಗಸರು ಮೂರಿಂಚಗಲದ ಎರಡು ತುಂಡಿನ ತೊಡವಿನಲ್ಲಿ ಸುಧಾರಿಸಿಕೊಂಡಿದ್ದರು! ಆದರೆ ನಮ್ಮ ಶಿಷ್ಟಾಚಾರಗಳ ಅಡಿಕೋಲಿನಲ್ಲಿ ಪುರುಷರು ಬನಿಯನ್ನು, ದಗಳೆಚಡ್ಡಿ, ಚಪ್ಪಲಿ, ವಾಚಾಲಂಕೃತರಾಗಿದ್ದರೆ (ಏಕೈಕ) ಮಹಿಳೆ ಪೂರ್ಣ ಪಂಜಾಬೀ ಉಡುಪಿನಲ್ಲಿ ಮಾತ್ರವಲ್ಲ ಮಾರ್ಕೆಟಿಂಗಿಗೆ ಹೊರಟಂತೆ ಜಂಬದ ಚೀಲವನ್ನೂ ಹೆಗಲಿಗೇರಿಸಿದ್ದಳು! ಆನಂದಾ ನಿನ್ನ ಅಮೆರಿಕಾ ಅನುಭವದ ಮುನ್ನೆಲೆಯಲ್ಲಿ ನೀನು ಇದರ ಅವಾಸ್ತವತೆಯನ್ನು ನೆನೆಸಿಯೇ ಮನಸಾ ನಗಬಹುದು, ಆದರೆ ಒಂದು ವಿಚಾರ ಒಪ್ಪಲೇಬೇಕು, "ಚಕ್ರವನ್ನು ಪುನಃಶೋಧ ಮಾಡುವಲ್ಲೂ ಅಪಾರ ಸಂತೋಷವಿದೆ!" (ಇದು ನನ್ನ ಮಾತಲ್ಲ, ಉಪಾಧ್ಯರದ್ದು.) ನಮ್ಮ ತರ್ಕದ ಚಂದ ನೋಡು, 'ಮಿಂದ' ಮೇಲೆ ತಲೆ, ಮೈ ಒರೆಸುವುದು ಬೇಡವೇ? ಬದಲಿ ಬಟ್ಟೆ ಇಟ್ಟುಕೊಳ್ಳದಿದ್ದರೆ ಹೇಗೆ? ಐತಿಹಾಸಿಕ ಕ್ಷಣಗಳನ್ನು ಸೆರೆಹಿಡಿದಿಟ್ಟುಕೊಳ್ಳಲು ಕ್ಯಾಮರಾ? ಇಲ್ಲಿ ಕಾಲವನ್ನು ದಿನದ ಲೆಕ್ಕದಲ್ಲಿ ಕಳೆಯಲು ಬಂದರೂ ಗಂಟೆ ಮಿನಿಟುಗಳ ಕಾಳಜಿ ಉಳಿಸಿಕೊಳ್ಳಲು ವಾಚು? ಬಜಾರಿಲ್ಲದಲ್ಲೂ ಹಣಕಾಸು ಬೇಕಾಗಿಬಿಟ್ಟರೆ? ಮತ್ತಿವೆಲ್ಲವುಗಳ ನಿರ್ವಹಣಾ ಜವಾಬ್ದಾರಿ (safe keeping) ಸಂಪ್ರದಾಯದಂತೆ ಮಹಿಳೆಯದ್ದೇ ಆಗುವಾಗ ಚೀಲ ಬೇಕೇಬೇಕಲ್ವಾ?

ಸಂಘಟಕಿ ಒಂದು ಜರ್ಮನ್ ಯುವ ದಂಪತಿಯೊಡನೆ ನಮ್ಮೈವರನ್ನು ಒಂದು ದೋಣಿಗೇರಿಸಿ ತರುಣನೋರ್ವನನ್ನು ಶಿಕ್ಷಕನನ್ನಾಗಿ ಬಿಟ್ಟಳು. ನಮ್ಮ ನಾವಿಕರಿಬ್ಬರು ಪುಟ್ಟ ಔಟ್ಬೋರ್ಡ್ ಎಂಜಿನ್ ಚಾಲೂ ಮಾಡಿ ನಮ್ಮ ವಸತಿಯ ದಿಕ್ಕಿಗೇ ಘಟಪಟಾಯಿಸಿದರು. ಸಂಘಟಕಿ ಉಳಿದಷ್ಟೂ ವಿದೇಶಿಯರನ್ನು ಕಟ್ಟಿಕೊಂಡು ಇನ್ನೊಂದೇ ನಾವೆಯಲ್ಲಿ ವಿರುದ್ಧ ಕಿನಾರೆಯಲ್ಲಿ ಮರೆಯಾದಳು. ನಮ್ಮ ದೋಣಿ ಓಟದಲ್ಲಿ ಸ್ಥಿರತೆಗೆ ಬಂದಂತೆ ಶಿಕ್ಷಕ ಮಹಾಶಯ ನಮ್ಮೆದುರು ಸಿಂಹಾಸನವೇರಿದ ಗಾಂಭೀರ್ಯದಲ್ಲಿ ಬಂದು ಕುಳಿತು, "ವೆಲ್ ಜಂಟಲ್ಮೆನ್ ಅನ್ಡ್ ಲೆಡೀಸ್ ಗುಡ್ಮೋರ್ನಿಂಗ್, ಗುಡ್ಮೋರ್ನಿಂಗ್, ಗುಡ್ಮೋರ್ನಿಂಗ್" ಎಂದು ಪ್ರತಿಯೊಬ್ಬರಿಗೂ ತಲೆ ಕೊಡಹಿದ. ನಮಗೆ ಒಮ್ಮೆಗೆ ಬಾಲ್ಯಕ್ಕೆ ಮರಳಿದ ಭಾವ! ಒಕ್ಕೊರಲಿನಲ್ಲಿ ಗುಡ್ಮೋರ್ನಿಂಗ್ ಹೇಳಿ, ಪೆಚ್ಚುನಗೆ ಬೀರುವಂತಾಯ್ತು. ಆತ ಮಹಾರಾಷ್ಟ್ರದ ಇಂಜಿನಿಯರಿಂಗ್ ಪದವೀಧರನಿದ್ದೂ ಡೈವಿಂಗಿನ ಅತೀವ ಪ್ರೀತಿಯಲ್ಲಿ ಹೀಗೇ ಇಲ್ಲಿ ದುಡಿಯುವವನಂತೆ. ಆತ ಸ್ಕೂಬಾ ಮತ್ತು ಡೈವಿಂಗ್‌ಗಳ ಪ್ರಾಯೋಗಿಕ ಸೂಕ್ಷ್ಮಗಳನ್ನು ಪರಿಚಯಿಸಿದ. ನಮ್ಮ ದೋಣಿ ಹ್ಯಾವ್ಲಾಕ್ ದ್ವೀಪಕ್ಕೆ ಅಪ್ರದಕ್ಷಿಣೆ ಹಾಕುವವರಂತೆ ಸುತ್ತಿ ಮುಖ್ಯ ದೋಣಿ ಕಟ್ಟೆಗೇ (ನಾವು ಹಿಂದಿನ ಸಂಜೆ ಬಂದಿಳಿದ ಜಾಗ) ಬಂತು. ಅಲ್ಲಿ ಹೆಚ್ಚು ಸಜ್ಜುಗೊಂಡಿದ್ದ ಇನ್ನೊಂದೇ ದೋಣಿಗೆ ಬದಲಿಕೊಂಡು ನಮ್ಮ ಅಪ್ರದಕ್ಷಿಣೆ ಮುಂದುವರಿಸಿದೆವು. ಕಡಿದಾದ ಕಲ್ಲಕೊರಕಲು ಅಥವಾ ತಾನು ನಿಂತ ನೆಲ ಮರೆಮಾಡಿ ನೀರಿಗೇ ಮುತ್ತಿಗೆ ಹಾಕಿದಂತೆ ಕಾಣುವ ಮ್ಯಾಂಗ್ರೋವ್ ಹಸಿರಗೋಡೆ ನೋಡುತ್ತ ಸಾಗಿದೆವು. ಒಟ್ಟಾರೆ ಸುಮಾರು ಎರಡು ಗಂಟೆ ಪಯಣಿಸಿ ನೆಲ ಸಣ್ಣದಾಗಿ ಒಳಮುರಿದಲ್ಲಿ ತಂಗಿದೆವು. ಇದು ಪುಟ್ಟ ಮರಳತೀರ. ಸುನಾಮಿ ಹೊಡೆತದಲ್ಲಿ ಅಡ್ಡ ಮಲಗಿದ ಭಾರೀ ಮರವೊಂದು ಸಮುದ್ರದ ಮೇಲೇ ಆರ್ತ ಕೈ ಚಾಚಿಕೊಂಡು ಬಿದ್ದಿತ್ತು. ನಮ್ಮ 'ಈಜುಕೊಳಕ್ಕೆ' ಅದು ಪ್ರಾಕೃತಿಕ ಜಿಗಿಹಲಗೆ. ಆದರೆ ಬರಿಯ ಈಜು, ಜಿಗಿತದ ಮೋಜಿಗಲ್ಲಿ ಬಿಡುವಿರಲಿಲ್ಲ. ದೋಣಿಯ ಸಹಾಯಕರು ಸಲಕರಣೆಗಳ ಹೊಂದಾಣಿಕೆ ನಡೆಸುತ್ತಿದ್ದಂತೆ ಶಿಕ್ಷಕ ಮತ್ತೆ "ವೆಲ್ ಲೇಡೀಸ್ ಅಂಡ್ ಜಂಟಲ್ಮನ್..." ಸುರು ಮಾಡಿದ. ನಿರೇನ್ ಮತ್ತು ವಿದೇಶೀ ದಂಪತಿ ಸಾಗರತಳ ಪರಿಶೋಧಕರು, ಉಳಿದ ನಾವು ಮೇಲ್ವಿಚಾರಕರು (ಛೆ ಛೆ, ಯಜಮಾನಿಕೆ ಅಥವಾ ಮದುವೆ ಊಟ ಬಡಿಸುವಲ್ಲಿ ಕಡಿಮೆ ಕೆಲಸ ಮಾಡಿ ಬೊಬ್ಬೆ ಭಾರಿಹೊಡೆಯುವವರನ್ನು ಕಾಣಬೇಡ) ಅಥವಾ ತೇಲ್ಗಣ್ಣರು (ಅಯ್ಯೋ ಮತ್ತೆ ಅಮಲು ಪದಾರ್ಥ ಸೇವಿಸಿದವರೆಂದೂ ಯೋಚಿಸಬೇಡ), ಅಂದರೆ ಮೇಲ್ಮೈಯಲ್ಲೇ ಸಾಗರ ಪರಿಚಯಿಸಿಕೊಳ್ಳಲು ಹೊರಟವರು. ಸ್ನಾರ್ಕೆಲ್ ತರಬೇತಿ ಮತ್ತು ಅಭ್ಯಾಸ ಸುಲಭದ್ದು. ಹಾಗಾಗಿ ಮೊದಲ ಪಾಠ ನಮಗೆ! ಬೆಂಡು ತುಂಬಿದ ಅಂಗಿ (life jacket) ಉರುಫ್ ಜೀವರಕ್ಷಕ ಅಲಿಯಾಸ್ ತೇಲಂಗಿ ಧರಿಸಿ, ನೀರಮೇಲೆ ಮುಖಾಡೆ ಬಿದ್ದುಕೊಂಡು, ತೇಲುತ್ತಾ ನೀರಾಳವನ್ನು ಬರಿಯ ದೃಷ್ಟಿಯಲ್ಲಿ ನಿರುಕಿಸಲು ಇದ್ದವರು ನಾವು. ಉಪ್ಪುನೀರು ಕಣ್ಣು ಸೇರದಂತೆ ಕಣ್ಗಾಪು, ಉಸಿರಾಟಕ್ಕೆ ಬಾಯಿಗೊಂದು ಡೊಂಕಿನ ಕೊಳವೆ. ಚಲನೆಯ ಹೆಚ್ಚಿನ ಅನುಕೂಲಕ್ಕಷ್ಟೆ ಜಾಲಪಾದ. ಉಪಾಧ್ಯರೊಬ್ಬರಿಗೆ ಮಾತ್ರ ಧಾರಾಳ ಸಮುದ್ರ ಈಜಿನ

ಅನುಭವ ಇತ್ತು. ಅಭಯನಿಗೆ ಹೆಚ್ಚಿನ ಈಜಿನ ಪರಿಣತಿ ಇದ್ದರೂ ಅವನದೂ ಸೇರಿದಂತೆ ನನ್ನದು ಕೇವಲ ಕೆರೆಯ ಅನುಭವಗಳು. ದೇವಕಿಯದು ದೇವರೇ ಗತಿ, ಈಜು ಗೊತ್ತೇ ಇಲ್ಲವಲ್ಲಾ ಎಂದು ನಾವು ಯೋಚಿಸಿದ್ದೆವು (ಮನಸ್ಸಿನಾಳದಲ್ಲಿ ನಮ್ಮ ಮೇಲುಗೈ ಬಗ್ಗೆ ಹೆಮ್ಮೆಯೂ ಅವಳ ಸೋಲಿನ ಕುರಿತು ಕನಿಕರವೂ ಇತ್ತು!). ಆದರೆ ಹಾಗಿಲ್ಲ; ತೇಲಂಗಿ ಇರುವವರೆಗೆ ಎಲ್ಲರ ಸ್ಥಾನ ಸಮಾನ. ಮೊದಲಸುತ್ತಿನಲ್ಲಿ ನಾವಿಕನೊಬ್ಬ ತಾನೂ ಸ್ನಾರ್ಕೆಲ್ ಸಿಕ್ಕಿಸಿಕೊಂಡು ನಮ್ಮಲ್ಲೊಬ್ಬೊಬ್ಬರನ್ನೇ ನಮ್ಮ ತೇಲಂಗಿಯ ಅಂಚು ಜಗ್ಗಿಕೊಂಡು ದಂಡೆಯಿಂದ ದೂರ ಒಯ್ದ. ಲೆಕ್ಕಕ್ಕೆ ನಾವು ಕಾಲಿನಲ್ಲಿ ನೂಕುಬಲ ಕೊಟ್ಟುಕೊಂಡು ಕೈಯಲ್ಲಿ ದಿಕ್ಕುದೆಸೆ ಸಂಭಾಳಿಸಿಕೊಂಡು ಹೋಗಬೇಕಿತ್ತು. ಆದರೆ ಮೂಗಿನ ಶ್ವಾಸೋಚ್ಛ್ವಾಸ ಬಂದ್ ಮಾಡಿ, ಎದುರು ಹಲ್ಲುಗಳಲ್ಲಿ ಕೊಳವೆಯ ಬಾಯನ್ನು ಕಚ್ಚಿ, ತುಟಿ ಬಿಗಿದು, ಕೊಳವೆ ಮೂಲಕ ಉಸಿರಾಟ ನಡೆಸುವ ಏಕಧ್ಯಾನದಲ್ಲಿ ಲೋಕಮರೆತಿದ್ದೆವು! ಒಮ್ಮೊಮ್ಮೆ ತಪ್ಪಿ ಮೂಗಿನಲ್ಲಿ ನಿಶ್ವಾಸಿಸುತ್ತಿದ್ದೆವು; ಬುಡುಬುಡು ಗುಳ್ಳೆ ಕಣ್ಗಾಪಿನೊಳಗೆದ್ದು, ಹಬೆ ಕಟ್ಟಿ ದೃಷ್ಟಿ ಮಸುಕಾಗುತ್ತಿತ್ತು. ತೋಬಾ ತೋಬಾ ಹೇಳಿ ತಲೆ ಎತ್ತಿ ಕಣ್ಗಾಪು ಶುದ್ಧ ಮಾಡಿಕೊಂಡರೆ ಮುಗಿಯುತ್ತಿತ್ತು. ಆದರೆ ಹೆಚ್ಚು ತಪ್ಪಿ ಮೂಗಿನಲ್ಲೇ ಶ್ವಾಸ ಎಳೆದುಕೊಂಡಾಗ, ಉಪ್ಪು ನೀರು ಬ್ರಹ್ಮರಂಧ್ರಕ್ಕೇರಿ ರಂಪವಾದ್ದೂ ಇತ್ತು! ಹಾಗೇಂತ ಭಾರೀ ಬ್ರಹ್ಮವಿದ್ಯೆಯೇನೂ ಅಲ್ಲ, ಒಂದೆರಡು ತಪ್ಪಿನಲ್ಲೇ ಎಲ್ಲರೂ ಸುಧಾರಿಸಿಕೊಂಡು, ಆಳ ನೋಡುವುದು ಕಲಿತೆವು.

ಸರದಿಯಲ್ಲಿ ನಾವಿಕ ನನ್ನಂಗಿ ಅಂಚು ಹಿಡಿದು ಜಗ್ಗುತ್ತ ಒಯ್ದ. ನೆನಪಿರಲಿ, ನಾನೀಗ ನೀರಮೇಲೆ ಮುಖಾಡೆ ಮಲಗಿ ಆಳ ನೋಡುತ್ತಿದ್ದೇನೆ. ಮರಳ ಪಾತ್ರೆ ಕೆಳಕೆಳಗೆ ಇಳಿಯುತ್ತಿದ್ದಂತೆ ವಿವಿಧ ಹವಳಗಳ ರಚನೆಗಳು, ಜಲಸಸ್ಯಗಳ ಬಳುಕುಗಳು, ಅಪರಿಚಿತ ಜೀವಸಂದೋಹದ ಪಲುಕುಗಳು ತೆರೆದುಕೊಳ್ಳುತ್ತಿದ್ದವು. ಹೂದೋಟದಲ್ಲಿ ವಿಹರಿಸುವ ಮೋಹಿನಿಯರಂತೆ ಒಂಟಿಯಾಗಿ, ಹಿಂಡಾಗಿ ಸಂಚರಿಸುವ ಮತ್ಸ್ಯ ವೈವಿಧ್ಯ ಬೆರಗುಗೊಳಿಸಿತು. ಹವಳದ ರಚನೆಗಳು ಕಲ್ಲು, ಕೋಲು, ಹೂವಿನಂತೆಲ್ಲಾ ಇದ್ದರೂ ಅವು ಅಸಂಖ್ಯ ಕೀಟಗಳ ವಸತಿ ಸಂಕೀರ್ಣ. ಫ್ಯಾಶನ್ ರಮಣಿಯಂತೆ ಪಂಚರಂಗೀ ಸೆರಗು ಬೀಸಿಕೊಂಡು ಹೋದ 'ಅಪ್ಸರೆ' ಒಂದು ಮೀನು. ನೀರಡಿಯಲ್ಲೂ ಚಾಮರ ಸೇವೆಯೇ? ಅಲ್ಲಲ್ಲ, ಅವು ಜಲಸಸ್ಯರಾಜಿ. ಹೀಗೆ ಮುಳುಗು ಮೋರೆ ಹಾಕಿ, ಮುಳುಗಿದ್ದ ಬೆಟ್ಟದ ಕೊಡಿಯ ಸಮಾನಾಂತರದಲ್ಲಿ ಹೋಗುತ್ತಿದ್ದವನಿಗೆ ಒಮ್ಮೆಗೆ ಪ್ರಪಾತದಂಚಿನಿಂದ ಧುಮುಕಿದ ಅನುಭವ. ವಾಸ್ತವದಲ್ಲಿ ನಾನು ನಾವಿಕನ ನಿಯಂತ್ರಣದಲ್ಲೇ ನೀರ ಮೇಲೆಯೇ ಇದ್ದೆ. ಕ್ರಮವಾಗಿ ಇಳಿದಿಳಿದು ಸಾಗಿದ್ದ ದೃಷ್ಟಿಗೆ ಮಾತ್ರ ಪಾತಾಳದ ಬೀಳು ಒದಗಿತ್ತು. ಬೆಳ್ತಂಗಡಿಯ ಸಮೀಪದ ಬಲ್ಲಾಳರಾಯನದುರ್ಗದ (ಸಮುದ್ರ ಮಟ್ಟದಿಂದ ಸುಮಾರು ಐದು ಸಾವಿರ ಅಡಿ ಎತ್ತರ) ಅಂಚಿಗೆ ನಡೆದು ಒಮ್ಮೆಗೆ ಬಂಗಾಡಿ ಕೊಳ್ಳ ಇಣುಕಿದ ಅನುಭವ. ಬೆಟ್ಟದಲ್ಲಾದರೋ ಪರಿಸರ ನಮ್ಮನ್ನು ಸಜ್ಜುಗೊಳಿಸಿರುತ್ತದೆ. ಮತ್ತೂ ಒಮ್ಮೆಗೆ ಬೆರಗು ಹುಟ್ಟಿಸಿದ ದೃಶ್ಯಗಳು (ಹಗಲಿನ ಬೆಳಕಿನಲ್ಲಿ) ಸ್ಫುಟವಾಗುತ್ತಿದ್ದಂತೆ ಪರಿಚಿತ ಮನೆ, ತೋಟಗಳ ಗುರುತು ಹತ್ತಿ, ಭಯ ನೀಗಿ ಸಂಭ್ರಮವನ್ನಷ್ಟೆ ಉಳಿಸುತ್ತದೆ. ಆದರಿಲ್ಲಿ ಸೂರ್ಯರಶ್ಮಿಯೂ ಸಾಗದ ಆಳ, ಮನಸ್ಸನ್ನು ಎಷ್ಟು ಸ್ತಿಮಿತದಲ್ಲಿಟ್ಟುಕೊಂಡರೂ ಎವರೆಸ್ಟ್ ಶಿಖರವನ್ನೇ ನುಂಗಬಲ್ಲ ಆಳವೂ ಇರಬಹುದು ಎನ್ನುವುದನ್ನು ಮರೆಯಲಾಗುವುದಿಲ್ಲ. ಅರೆಪಾರದರ್ಶಕ ಬಳುಕು ಬಳ್ಳಿಯಂತ ಅತಿ–ವಿಷದ ಜಂತುವಿನಿಂದ ತೊಡಗಿ ನೂರಾನೆಗಳಿಗೂ ಜಗ್ಗದ ತಿಮಿಂಗಿಲದವರೆಗಿನ ಸಕಲವೂ 'ಮಾಹಿತಿ' ಹೊರೆಯಾಗಿದ್ದದ್ದಕ್ಕೋ ಏನೋ ದಂಡೆಗೆ ಹೆಚ್ಚು ದೂರಾಗದಂತೆ ಬಹಳ ಹೊತ್ತು ಕೈಕಾಲು ಬಡಿದೆವು! ನಾನು, ದೇವಕಿ ನಾವಿಕ ಕೊಟ್ಟ ಸುತ್ತನ್ನು ಅನುಭವಿಸಿದ ಮೇಲೆ ಲಂಗರು ಹಾಕಿದ್ದ ನಮ್ಮ ದೋಣಿಯ ಆಸುಪಾಸಿನಲ್ಲೇ ನಮ್ಮ ಪ್ರಯತ್ನಕ್ಕಿಂತ ಹೆಚ್ಚಾಗಿ ನೀರ ತುಯ್ತದಲ್ಲೇ ಹೊರಳಾಡಿಕೊಂಡಿದ್ದೆವು. ಸ–ಪ–ಸಾದಲ್ಲೇ ನಮ್ಮ ಸಂಗೀತ ಮುಗಿದಿತ್ತು! ಉಪಾಧ್ಯ, ಅಭಯ ಕಡಲತರಂಗದ ಭಾವ, ಮಿಡಿತಗಳ ಹದವರಿತು ತುಸು ಹೆಚ್ಚೇ ಅನುಭವಿಸಿದರು ಎನ್ನುವುದನ್ನು ಅಭಯನ ಮಾತುಗಳಲ್ಲೇ ಕೇಳು.



"ಅದೋ ಅಲ್ಲೊಂದು ಮೀನು. ಅದನ್ನು ಹಿಂಬಾಲಿಸೋಣ ಎಂದರೆ ನೆಲದ ಮೇಲೇ ನಡೆದಷ್ಟೆ ಸುಲಭ ನಮಗೆ ಆಗ. ಮೀನಿನ ಹೆಜ್ಜೆ ಹಿಂಬಾಲಿಸುತ್ತಾ ಹೋಗುತ್ತಿರಬೇಕಾದರೆ, ಅದು ಇನ್ನೊಂದು ಮೀನಿನ ಬಳಿ ನಿಂತು ಅದೇನೋ ಮಾತನಾಡುತ್ತಿತ್ತು. ದಡದಲ್ಲಿಯ ಅಕ್ವೇರಿಯಂನಲ್ಲಿದ್ದ ಸೋದರ ಸಂಬಂಧಿಯ ಕುಶಲೋಪರಿ ತಿಳಿಸುತ್ತಿತ್ತೇ ಅದು. ಸರಿ ಈ ಮೀನಿಗಿಂತ ಆಚೆಯದೇ ಚಂದ ಎಂದು ಅದನ್ನು ಹಿಂಬಾಲಿಸತೊಡಗಿದೆ. ಅದು ಚಿತ್ರ ವಿಚಿತ್ರ ಕೊಳವೆಯಾಕಾರದ ಕೋರಲ್ ಸರಣಿಯನ್ನು ಶೋಧಿಸುತ್ತಾ ಅದರಲ್ಲೇನೋ ತಿನ್ನುತ್ತಿತ್ತು. ಏನು ತಿನ್ನುತ್ತಿದೆ ಎಂದು ನಾನು ಯೋಚಿಸುತ್ತಿರಬೇಕಾದರೆ, ಅಲ್ಲಿ ಒಂದು ಹಾವೂ ಅಲ್ಲದ ಮೀನೂ ಅಲ್ಲದ ಉದ್ದದ ಜಲಚರ ಒಂದು ಕೋರಲ್ ಕೊಳವೆಯೊಳಗಿನಿಂದ ಚಿಮ್ಮಿ, ನನ್ನ ಮೀನನ್ನು ಗಾಬರಿಬೀಳಿಸಿ ಇನ್ನೊಂದು ದಿಕ್ಕಿಗೆ ಹೊರಟಿತು. ಇದನ್ನು ಹಿಂಬಾಲಿಸಲೇ ಅದನ್ನೇ ಎಂಬ ಪ್ರಶ್ನೆ ಒಂದು ಕ್ಷಣ ಬಂದರೂ, ಈ ಹೊಸ

ಮೀನಿನ ಆಕರ್ಷಣೆ ಹೆಚ್ಚಿ ಅದನ್ನೇ ಹಿಂಬಾಲಿಸಿದೆ. ಅದು ಈಜುತ್ತಾ ಹೋಗುತ್ತಿರಬೇಕಾದರೆ, ಕೋರಲ್ ಸರಣಿ ಮುಕ್ತಾಯವಾಯಿತು! ಸಾಗರ ತಳ ಒಮ್ಮೆಗೆ ಕುಸಿದಂತೆ ಗವ್ವನೆ ಕತ್ತಲಮೊತ್ತವಷ್ಟೇ ಉಳಿಯಿತು. ಅರೆ! ಇದೇನಾಯಿತು ಎಂದು ಯೋಚಿಸಬೇಕಾದರೆ, ನಾನು ನೆಲದ ಮೇಲಿಲ್ಲ ಎನ್ನುವ ಪ್ರಜ್ಞೆ ಮರುಕಳಿಸಿ ಕೊಂಚ ಅಧೀರನಾದೆ. ತಲೆ ಎತ್ತಿ ಸಮುದ್ರದ ಮೇಲ್ಮೈ ನೋಡಲು ಆಗಲೇ ದಡದಿಂದ ತುಂಬಾ ದೂರ ಬಂದುಬಿಟ್ಟಿದ್ದೆ. ಅನೇಕ ಹಾಲಿವುಡ್ ಚಿತ್ರಗಳಲ್ಲಿ ನೋಡಿದ್ದ ಶಾರ್ಕುಗಳು, ತಿಮಿಂಗಿಲಗಳು ನೆನಪಾಗಿ ಗಾಬರಿಯಾದೆ. ದಡದಿಂದ ಇಷ್ಟು ದೂರ ಬಂದು ಬಿಟ್ಟು, ಈಗ ಮರಳಿ ಹೋಗುವ ಸಾಮರ್ಥ್ಯ ಇದೆಯೋ ಇಲ್ಲವೋ ಎಂದು ಅನುಮಾನ ಸುಳಿದರೂ ತೇಲಂಗಿ ಧೈರ್ಯಕೊಟ್ಟಿತು. ಸರಿ ಇನ್ನು ಹಿಂದೆ ಹೋಗೋಣ ಎಂದು ತಲೆ ನೀರಿನೊಳಗೆ ಹಾಕಿ ಈಜಲಾರಂಭಿಸಿದರೆ, ಮತ್ತೆ ಕೋರಲ್ ಸರಣಿಯ ದರ್ಶನ. ಮತ್ತಷ್ಟು ಹೊಸ ಹೊಸಾ ಮೀನುಗಳ ಹಿಡಿವಾಟ, ಕತ್ತಲಕೂಪದ ದರ್ಶನ ಮತ್ತೆ ದಡದ ಯೋಚನೆ ಹೀಗೆ ಸಾಗಿತ್ತು ನಮ್ಮ ಅನುಭವ."

ನಿರೇನ್ ಬಳಗದ ಕಥೆ ಉಲ್ಟಾ. ನಮಗೇನೋ ಸಾಕು ಬೇಕಾಗುವಷ್ಟು ಸಮಯ ಕೊಟ್ಟಿದ್ದರು. ಮುಳುಗುಗಾರರಿಗೆ ಪ್ರತಿ ಮುಳುಗೂ ಸಾವಿರಕ್ಕೂ ಮಿಕ್ಕ ರೂಪಾಯಿ ಮೌಲ್ಯದ್ದು. ಅಂದರೆ ಒಮ್ಮೆ ಮುಳುಗಿದವ ಅವನ ಅನುಭವ ಮತ್ತು ದೈಹಿಕ ಸಾಮರ್ಥ್ಯದ ಮೇಲೆ ಒಂದು ಆಳದ ಮಿತಿ, ಸಮಯದ ಮಿತಿಯನ್ನು ಪ್ರಾಕೃತಿಕವಾಗಿಯೇ ಒಪ್ಪಿಕೊಳ್ಳಬೇಕಾಗುತ್ತಿತ್ತು. ಜಲ ಮಾಧ್ಯಮದ ನಾವೀನ್ಯ, ಜಲಚರಗಳ ಭಯ, ಆಳ ಆಳಕ್ಕೆ ಇಳಿದಷ್ಟು ಹೆಚ್ಚುವ ನೀರ ಒತ್ತಡ ನಮ್ಮ ನೆಲದ ಮೇಲಿನ ವೀರಾವೇಶಗಳನ್ನು ಇಳಿಸುತ್ತಿತ್ತು. ನಿರೇನ್ಗೆ ಅದು ಮೊದಲ ಅನುಭವವಾದ್ದರಿಂದ ಹದಿನೈದು ಮೀಟರಿಗಿಂತಲೂ ಹೆಚ್ಚು ಆಳದಲ್ಲಿ, ಮೂವತ್ತು ನಲ್ವತ್ತು ಮಿನಿಟಿಗಿಂತಲೂ ಹೆಚ್ಚು ಅವಧಿ ವಿಹರಿಸುವುದು ಅಸಾಧ್ಯವಾಯ್ತು. ನಮ್ಮದು ತೇಲಂಗಿಯಾದರೆ ಅವರದು ಮುಳುಗಂಗಿ; ಕೆಳ ಅಂಚಿನಲ್ಲಿ ಸೀಸದ ಗುಂಡುಗಳಿದ್ದ, ಮೈ ಬಿಗಿದು ಕೂರುವ ಅಂಗಿ. ಮುಳುಗುಗಾರನ ಉಸಿರಾಟ, ಅವಶ್ಯಬಿದ್ದಾಗ ತೇಲಿಸಲೂ ಸಹಕರಿಸುವ ಪ್ರಾಣವಾಯುವಿನ ಅಂಡೆ ಮತ್ತು ತತ್ಸಂಬಂಧಿ ಸಲಕರಣೆಗಳು ಭರ್ಜರಿಯಾಗಿಯೇ ಬೆನ್ನೇರುತ್ತಿದ್ದವು. ನಮಗೂ ಅವರಿಗೂ ಒಂದೇ ಸಮಾನಾಂಶ – ಒಳ್ಳೆಯ ನೂಕುಬಲಕೊಡುವ ಜಾಲಪಾದ. ಒಟ್ಟಾರೆ ಮುಳುಗು ಶೋಧಕ್ಕೆ ತಾಂತ್ರಿಕತೆ, ತರಬೇತಿ ತುಸು ದೀರ್ಘ. ಹಾಗಾಗಿ ಅನುಭವರಹಿತ ಸ್ವಾತಂತ್ರ್ಯ ಇಲ್ಲಿ ಅಪಾಯಕಾರಿಯೂ ಹೌದು. ನಿರೇನ್ ಒಳ್ಳೆ ಈಜುಗಾರ. ಆದರೆ ತಮಾಶೆ ಎಂದರೆ ನಮ್ಮೆರಡೂ ಜಲಕ್ರೀಡೆಗಳಿಗೆ ಈಜುಗಾರಿಕೆ ಕನಿಷ್ಠ ಅವಶ್ಯಕತೆ ಅಲ್ಲ. ನಿರೇನ್ ಸುಮಾರು ಸೊಂಟಮಟ್ಟದ ನೀರಿನಲ್ಲಿ ನಿಂತೇ ಅರ್ಧ, ಒಂದು ಗಂಟೆಯ ತರಬೇತಿ ಪಡೆದರು. ಮುಂದೆ ಸುಮಾರು ನಲ್ವತ್ತು ಮಿನಿಟಿನ ಒಂದು ಮುಳುಗು ಹಾಕಿದರೂ ಹೊಸ ಮಾಧ್ಯಮಕ್ಕೆ ಪಳಗುವುದರಲ್ಲೇ ಸಮಯ ಕಳೆದದ್ದು ಹೆಚ್ಚಂತೆ. ಜೊತೆಗೆ ಅಲ್ಲಿ ತೊಡಗಿದ ಸಣ್ಣ ಕಿವಿನೋವು ಮುಂದಿನೆರಡು ದಿನ ಸ್ವಲ್ಪ ಕಾಡಿದ್ದೂ ಪರಿಚಯದ ಸುತ್ತಿನಲ್ಲಿ ಅಸ್ವಾಭಾವಿಕವೂ ಅಲ್ಲವಂತೆ. ನಿರೇನ್ ತನ್ನ ಮುಂದಿನ ಜಲ–ಸಾಹಸಗಳಿಗೆ ಇದು ಒಳ್ಳೆಯ ಪ್ರವೇಶಿಕೆ ಎಂಬ ತೃಪ್ತಿ ಉಳಿಸಿಕೊಂಡೇ ಅಂದು ಹೆಚ್ಚಿನ ಮುಳುಗಿಗೆ ಮುಂದಾಗಲಿಲ್ಲ.



ಅಂತಿಮವಾಗಿ ಎಲ್ಲ ಮರಳ ದಂಡೆಯಲ್ಲಿ ಕುಳಿತು ಡೈವ್ ಇಂಡಿಯಾದವರ ಕೊಡುಗೆಯಾಗಿ ದೋಣಿಯ ಬಿಸಿಪೆಟ್ಟಿಗೆಯಲ್ಲಿದ್ದ ಬ್ರೆಡ್ ಸ್ಯಾಂಡ್ವಿಚ್, ಸಮೋಸಾ, ಬಿಸಿ ಚಾ ಸೇವಿಸಿ "ದೋಣಿ ಸಾಗಲಿ, ನಮ್ಮ ಗೂಡನು ಸೇರಲಿ" ಪಲ್ಲವಿ ಹಾಡಿದೆವು. ದಾರಿಯಲ್ಲಿ ಒಂದು ಕಲ್ಲ ಮುಂಚಾಚಿನ ದಂಡೆಯ ಬಳಿ ನಮ್ಮ ಬಳಗದ ಇನ್ನೊಂದು ದೋಣಿ ಲಂಗರು ಹಾಕಿತ್ತು. ಬಹುಶಃ ಅದರ ನಾವಿಕರೂ ಸೇರಿದಂತೆ ಹೆಚ್ಚಿನವರು ಮುಳುಗುಲೋಕದಲ್ಲೆಲ್ಲೋ ವಿಹರಿಸುತ್ತಿದ್ದಿರಬೇಕು. ತುಂಡು ಬಟ್ಟೆಯ (ವಿದೇಶೀ) ತರುಣಿಯೊಬ್ಬಳು ದೋಣಿಯ ಮೂಕಿಯ ಮೇಲೆ ಲೋಕದ ಪರಿವೆಯಿಲ್ಲದಂತೆ ಸೂರ್ಯ ಸ್ನಾನಪಡೆಯುವುದರಲ್ಲಿ ತೃಪ್ತಳಾಗಿದ್ದಳು. ಪ್ರವಾಸದ ಪ್ರತಿ ಹಂತದಲ್ಲಿ 'ನಮ್ಮ ಹಣದ' ಮೌಲ್ಯ ದಕ್ಕಿತೇ ಇಲ್ಲವೇ ಎಂದು ತಹತಹಿಸುವ ನಮ್ಮ ಮನೋಸ್ಥಿತಿಗೆ ಆಕೆಯ ಧ್ಯಾನ ಈಗಲೂ ತಮಾಷೆಯಾಗಿಯೇ ಕಾಣುತ್ತದೆ. (ಮುಳುಗು–ಶೋಧಕ್ಕೆ ಹಣಕೊಟ್ಟು ಬರಿದೇ ಸೂರ್ಯಸ್ನಾನ ಮಾಡುವುದೇ?) ಸಾಹಿತ್ಯ ಸಮ್ಮೇಳನಕ್ಕೆ ಹೋಗಿ ಚೀಲ, ಬಾಲಕ್ಕೆ ಹೋರಾಡಿ, ಉಪಸ್ಥಿತಿಯ ಪ್ರಮಾಣಪತ್ರವನ್ನಂತೂ ಬೆಂಬತ್ತಿ ಸಂಗ್ರಹಿಸಿ ತಂದವರನ್ನು ಅಲ್ಲಿನ ಸಮ್ಮೇಳನಾಧ್ಯಕ್ಷರು ಯಾರು ಎಂದಾಗ ಉತ್ತರಿಸಲು ಸೋತ ಹಾಗೇ ಅಲ್ಲವೇ ಈ ಸೂರ್ಯಸ್ನಾತೆಯ ಸಾಧನೆ?

ನಮ್ಮ ಪ್ರವಾಸದ ಕಲ್ಪನೆಯಲ್ಲಿ ಉಣ್ಣುವ, ವಿಹರಿಸುವ, ವಿಶ್ರಾಂತಿಸುವ ಆವಶ್ಯಕತೆಗಳೆಲ್ಲ ಕನಿಷ್ಠ ಪ್ರಾಮುಖ್ಯತೆಯವು. ಹಾಗಾಗಿಯೇ ಮುಂದೊಂದು ದಿನ ಅಭಯನ ಗೋವಾ ಚಿತ್ರೋತ್ಸವಕ್ಕೆ ನಾನು ಹೋಗಿದ್ದಾಗ ನಮ್ಮ ಮಟ್ಟಿಗೆ ಉಚಿತವಾಗಿಯೇ ಪಂಚತಾರಾ ಸೌಕರ್ಯ ಒದಗಿದರೂ ಬಳಸುವಲ್ಲಿ ನಾನು ವಿಪರೀತ ಸಂಕೋಚವನ್ನು ಅನುಭವಿಸಿದೆ. ಆದರೆ ಅದನ್ನು ಅಭಯ ತಲೆಮಾರಿನಂತರ ಎಂದು ತಪ್ಪು ತಿಳಿದು ಎಲ್ಲೋ ಲೇಖನದಲ್ಲಿ ಬೇರೆ ತೋಡಿಕೊಂಡ! ಅಲ್ಲ, ಅದು ನಮ್ಮ ಜೀವನಶೈಲಿಯ ಅಭಿವ್ಯಕ್ತಿ ಎಂದು ಅವನಿಗೇನೋ ನಾನು ವಿವರಿಸಿದೆ. ಆದರೆ ಅಂಥ ವಿವರಣೆ ಪಥ್ಯವಾಗದವರು ದಿನೇ ದಿನೇ ಹೆಚ್ಚುತ್ತಿರುವುದು ನಿಜಕ್ಕೂ ಪರಿಸರ ಸಮಸ್ಯೆಯದ್ದೇ ಇನ್ನೊಂದು ಮುಖವೆನ್ನಬೇಕು. ಇನ್ನೆಲ್ಲೂ ಸಿಗದ ಪುಸ್ತಕ ನನ್ನಂಗಡಿಯಲ್ಲಿ ಸಿಕ್ಕರೂ ನಾನು ಪ್ಲ್ಯಾಸ್ಟಿಕ್ ಕವರಿನಲ್ಲಿ ಕೊಡುತ್ತಿಲ್ಲವೆಂದು ಕೋಪಿಸಿ, ಪುಸ್ತಕ ಬಿಟ್ಟುಹೋದವರಿದ್ದಾರೆ. ಅದಕ್ಕೂ ಮುನ್ನ ತಾನು ಬೈಕಿನಲ್ಲಿ ಹೇಗೆ ಒಯ್ಯಲೀ ಎಂದು ಸಮಸ್ಯೆ ಹೇಳಿಕೊಳ್ಳುವುದು, ಕಸ್ಟಮರ್ ಸರ್ವೀಸ್‌ನ ಬಗ್ಗೆ ಪಾಠ ಮಾಡುವುದು, ಬಯೋಡಿಗ್ರೇಡಬಲ್ ಪ್ಲ್ಯಾಸ್ಟಿಕ್ ಕವರ್, ಬಯೋ ಫ್ರೆಂಡ್ಲೀ ಪೇಪರ್ ಬ್ಯಾಗ್ಸ್, ರೀಯೂಸಬಲ್ (ಕ್ರಯಕ್ಕೇ ಆದರೂ ಸರಿ) ಕಾಟನ್ ಪೌಚಸ್‌ಗಳೆಲ್ಲವನ್ನು, ಎಲ್ಲವನ್ನೂ ನನಗೆ ಒಪ್ಪಿಸಲು ಒದ್ದಾಡುವ ಬುದ್ಧಿವಂತರು ಸ್ವಂತದ ಚೀಲ ತರುವುದಿರಲಿ "ಒಂದು ಪುಸ್ತಕ ಅಲ್ವಾ" ಎಂದು ಸೀದಾ ಕೈಯಲ್ಲಿ ಹಿಡಿದು ನಡೆಯುವುದನ್ನಾದರೂ ಯಾಕೆ ಅಭ್ಯಾಸ ಮಾಡಬಾರದು? (ಅಯ್ಯಾ ರಾಜನೇ ಈ ಪ್ರಶ್ನೆಗೆ ಉತ್ತರ ತಿಳಿದೂ ಹೇಳದಿದ್ದರೆ ಸಾಂಪ್ರದಾಯಿಕ ಶ್ರದ್ಧೆಯನ್ನು ಮತೀಯ ಮಠಗಳ ಮೇಲಾಟದಲ್ಲಿ ಕಳೆದುಕೊಂಡವನ ದುರ್ಗತಿ ನಿನಗೆ ತಪ್ಪಿದ್ದಲ್ಲ ಎನ್ನುವುದರೊಡನೆ?)

ಇಂತು ನಿನ್ನ ಹಿರಿಯ

ಆಕ್ರೋಶ ವರ್ಜನ

ಪತ್ರ ನಾಲ್ಕು

ಅಭಿವೃದ್ಧಿ ಎಂಬ ರೋಗ

ಇಕೋ ಇದು ಉಡುಪಿ ಕುಂದಾಪುರಗಳಿಂದಲೂ ಉತ್ತರಕ್ಕೆ ರಾಷ್ಟ್ರೀಯ ಹೆದ್ದಾರಿಯ ಅಂಚಿಗೇ ಇರುವ, ಸಾಕ್ಷಾತ್ ಅರಬ್ಬೀ ಸಮುದ್ರದಿಂದಲೇ ಅಕ್ಷರಶಃ ಪಾದ ತೊಳೆಸಿಕೊಳ್ಳುತ್ತಿರುವ ಒತ್ತಿನೆಣೆ. ಇಲ್ಲೇ ಈಚೆಗೆ ಕನ್ನಡದ ಒಬ್ಬ ಸಿನಿ–ನಿರ್ಮಾಪಕನಿಗೆ ತನ್ನೊಂದು ಸಿನಿಮಾಕ್ಕೆ ಬೃಹತ್ ಚಾರ್ಲೀ ಚಾಪ್ಲಿನ್ ವಿಗ್ರಹ ನಿಲ್ಲಿಸಬೇಕೆಂದು ಮನಸ್ಸಾಯ್ತು. ಅದನ್ನು ಖಾಯಂ ನೆಲೆಯಲ್ಲಿ ರಚಿಸಿ, ನಿಲ್ಲಿಸಿ, ತನ್ನ ಕೆಲಸ ಮುಗಿದಮೇಲೆ ಪ್ರವಾಸೋದ್ಯಮದ ಹೆಚ್ಚಳಕ್ಕೆ ಉಚಿತವಾಗಿ ಸಾರ್ವಜನಿಕಕ್ಕೆ ಬಿಟ್ಟುಕೊಡುವುದಾಗಿಯೂ ಹೇಳಿಕೊಂಡ. ಆದರೆ ದುರುದ್ದೇಶಪೂರಿತವಾಗಿಯೋ (ಪೋಲಿಸ್ ಪೆಟ್ಟು ತಿಂದಾದರೂ ಪತ್ರಿಕೆಯ ಪ್ರಥಮಪುಟದ ಪ್ರಚಾರಗಿಟ್ಟಿಸುವವರಂತೆ?) ಅಪ್ಪಟ ಮೌಢ್ಯವೋ ಈ ಯೋಜನೆ ೧. ಕರಾವಳಿಯಲ್ಲಿ ಜಲರೇಖೆಯಿಂದಿಷ್ಟು ದೂರದವರೆಗೆ ಯಾವುದೇ ಖಾಯಂ ಮನುಷ್ಯ ರಚನೆಗಳು ಕೂಡದು ಎಂಬ ನಿಯಮವನ್ನು ಉಲ್ಲಂಘಿಸುತ್ತಿತ್ತು. ೨. ಅರಣ್ಯ ಇಲಾಖೆಗೆ ಸೇರಿದ ಜಾಗಕ್ಕೆ ಅನಧಿಕಾರಿಯಾದ ಗ್ರಾಮಪಂಚಾಯ್ತಿನ ಅನುಮತಿ ಪತ್ರ ಪಡೆದು ಕೆಲಸ ಶುರುಮಾಡಿತ್ತು. ೩. ಇರುವ ನೂರೆಂಟು ಗಣ್ಯರ (ಗಾಂಧಿ, ಅಂಬೇಡ್ಕರ್ ಮುಂತಾದವು) ಸಾವಿರಾರು ದೇವಾನುದೇವತೆಗಳ ವಿಗ್ರಹ, ಪ್ರಾತಿನಿಧಿಕ ರಚನೆಗಳನ್ನು (ಪ್ರಾಕೃತಿಕಕ್ಕಿಂತ ಗಂಭೀರವಾಗಿ ಮನುಷ್ಯ ವಿಕೃತಿಗಳಿಂದ) ಕಾಪಾಡುವುದೇ ಎಂದೂ ಮುಗಿಯದ ತಲೆನೋವಾಗಿರುವಾಗ ಹೊಸದೊಂದು ವಿಗ್ರಹ ಬೇಕೇ ಎಂಬ ವಿವೇಚನೆಯಂತೂ ಕೆಲಸ ಮಾಡಲೇ ಇಲ್ಲ. ಇವೆಲ್ಲಕ್ಕೆ ಕಲಶಪ್ರಾಯವಾಗಿ ಮತೀಯವಾದಿಗಳು, ಭಾಸಾ ಹಭಿಮಾನಿಗಳು ಚಾಪ್ಲಿನ್ ಕ್ರಿಶ್ಚಿಯನ್ ಮತ್ತು ಅಕನ್ನಡಿಗ ಎಂದೂ ಗುರುತಿಸಿಬಿಟ್ಟರು. (ಕೊನೆಯ ವಿಭಾಗದವರ ಮಾತು, ಅದಕ್ಕೂ ಮಿಗಿಲಾಗಿ ಅವರ ರಟ್ಟೇ ಬಲವೂ ಪರಿಣಾಮಕಾರಿಯಾದ್ದರಿಂದ ಅಂತಿಮವಾಗಿ ಮೂರ್ತಿಸ್ಥಾಪನೆಯಾಗುತ್ತಿಲ್ಲ.)

ಚಾಪ್ಲಿನ್ ವಿಗ್ರಹದಂಥ ಯಾವ ಆವುಟಗಳಿಲ್ಲದೇ ಹ್ಯಾವ್ಲಾಕಿನಲ್ಲಿ ಹೆಚ್ಚು ಜನಪ್ರಿಯವಾದ ಬೇರೊಂದೇ ಕಡಲ–ಕಿನಾರೆ, ರಾಧಾಬೀಚ್ ಇತ್ತು. ಆದರೆ ಎಲ್ಲ ಒಳ್ಳೆಯದನ್ನೂ ಒಂದೇ ಮುಷ್ಟಿಯಲ್ಲಿ ತೆಗೆಯಹೊರಟ ಕಪಿಯ ಕಥೆ ನಮಗೆ ಗೊತ್ತಿಲ್ಲದ್ದೇನೂ ಅಲ್ಲ. ಮತ್ತೆ ನಮ್ಮ ಕಾರ್ಯಕ್ರಮ ಪಟ್ಟಿಯಂತೆ ನಾವು ಅಂದೇ ಬ್ಲೇರ್ ದ್ವೀಪಕ್ಕೆ ಮರಳುವ ತುರ್ತೂ ಇತ್ತು. ಹಾಗಾಗಿ ಒಂದು ಕಣ್ಣನ್ನು ಬ್ಲೇರ್ ದ್ವೀಪಕ್ಕೆ ಹೋಗುವ ದಿನದ ಕೊನೆಯ ನಾವೆಯ ಸಮಯಕ್ಕೆ ಕೀಲಿಸಿ ನಮ್ಮ ಅರಮನೆಗೆ (ಮರೀಲಿಲ್ಲವಲ್ಲಾ ತೆಂಗಿನತೋಪಿನೊಳಗಿನ ಮರದಬೊಡ್ಡೆಯ ಮೇಲಿನ ವಸತಿಗೃಹ?) ಸೇರಿದೆವು. ನಮಗೆ ವಿದಾಯ ಹೇಳಲು ಸಾಗರ ಅರಮನೆಯ ಅಂಚಿನವರೆಗೆ ತುಂಬಿ ಬಂದಿತ್ತು. ಮೈಗೆ ಹತ್ತಿದ ಸಮುದ್ರದ ಉಪ್ಪನ್ನು ಒಬ್ಬೊಬ್ಬರೆ ಅರಮನೆಯ ಶವರಿನಡಿಯಲ್ಲಿ ತೊಳೆದುಕೊಳ್ಳುವಷ್ಟು ಹೊತ್ತು ಇತರರು ಅಕ್ಷರಶಃ ಹೊಸ್ತಿಲಲ್ಲೇ ಸಮುದ್ರ ಸ್ನಾನ ಮಾಡುತ್ತಿದ್ದದ್ದು ಅವಿಸ್ಮರಣೀಯ. ಶುದ್ಧ ಅಕಡೆಮಿಕ್ ಇಂಟರೆಸ್ಟಿನಲ್ಲಿ 'ಬಂಗಾಳಿ ಸೋದರರ ಅಂಗಿ, ಪ್ಯಾಂಟು ಇಂದಿಗಿಂತ ನಿನ್ನೆ ಚೊಕ್ಕಟವಿತ್ತು' ಎಂಬೊಂದು ಚರ್ಚೆ ನಮ್ಮೊಳಗೆ ತೊಡಗಿತ್ತು. ಆದರೂ ಅವರಿಂದೇನೋ ಒಂದಷ್ಟು ಮಾಡಿಸಿಕೊಂಡು ಹೊಟ್ಟೆಗೆ ಹಾಕುವುದನ್ನು ಮರೆಯಲಿಲ್ಲ. ಮಹಾಬ್ರಾಹ್ಮಣ ವಿಶ್ವಾಮಿತ್ರನೇ ಆಪದ್ಧರ್ಮವೆಂದು ನಾಯಿ ಮಾಂಸ ತಿಂದಷ್ಟು ಖಂಡಿತಾ ಇದು ಕೆಟ್ಟದ್ದಿರಲಿಲ್ಲ.

ಮನೆ ಖಾಲಿ ಮಾಡಿ ಹಡಗುಕಟ್ಟೆಗೆ ಧಾವಿಸಿದೆವು. ಹಡಗು ಇನ್ನೂ ಬಂದಿರಲಿಲ್ಲ. ನಮ್ಮ ಎಲ್ಲಾ ಬಸ್ಸು ನಿಲ್ದಾಣಗಳ ಕೊಳಕೂ ಹಡಗುಕಟ್ಟೆಯ ಹೊರಗೆ ಒಮ್ಮೆಗೆ ಬಂದು ರಾಶಿ ಬಿದ್ದಂತಿತ್ತು. ನಮ್ಮ ಅಭಿವೃದ್ಧಿಯ ದೈತ್ಯನಿಗೆ ಸದಾ ಒಕ್ಕಣ್ಣು. ಕೆಲವೇ ದಶಕಗಳ ಹಿಂದೆ ಮನುಷ್ಯರನ್ನೇ ಕಂಡರಿಯದ ನೆಲವಿದು. ಅದರ ಶುದ್ಧ ಪ್ರಾಕೃತಿಕ ಸ್ಥಿತಿಯ (ಮಾಲಿನ್ಯರಹಿತ) ನೆಲವನ್ನು ಕುರಿದೊಡ್ಡಿ ಮಾಡಿದ್ದರು. ತಂಗುದಾಣ, ದಾರಿ, ಕಟ್ಟಡಗಳು, ಚರಂಡಿ ವ್ಯವಸ್ಥೆ, ಆಶ್ಚರ್ಯಕರವಾಗಿ ಬೀಡಾಡಿ ದನ, ಆಡು, ನಾಯಿ ಐದು ಮಿನಿಟಿನ ವಿರಾಮಕ್ಕೂ ನಾಲಾಯಕ್ಕು! ಹತ್ತು ಮಿನಿಟು ಆಚೆ ಈಚೆ ಹಡಗು ಬಂತು, ಸೇರಿಕೊಂಡೆವು, ಅದೃಷ್ಟಕ್ಕೆ ಪೇಟೆಯ ಕೊಳಕು ಇನ್ನೂ ಅಲ್ಲಿನ ಸಮುದ್ರಕ್ಕೆ ವಿಸ್ತರಿಸಿಲ್ಲ. ಒಂದು ಹೆಜ್ಜೆಯಾಚಿನ ಕೊಳಚೆ, ವಿಷದ ಯಾವ ಸೋಂಕೂ ಇಲ್ಲದೆ ನೀಲಮಣಿಯಂತೆ ಕಂಗೊಳಿಸುತ್ತಿದ್ದ ಆ ನೀರಿನಲ್ಲಿ ಅದ್ಯಾವುದೋ ನೂರಾರು ಕಿರುಮೀನುಗಳ ಬಟಾಲಿಯನ್ ಕವಾಯತು ನಡೆಸಿತ್ತು. ಬೆಂಗಳೂರಿನ ಆಕಾಶದಲ್ಲಿ ನಾಲ್ಕೋ ಎಂಟೋ ಯುದ್ಧ ವಿಮಾನಗಳು ಕಿವಿಗಡಚಿಕ್ಕುವ ಸದ್ದಿನಲ್ಲಿ ಕಸರತ್ತು ನಡೆಸುವಾಗ, ಅರ್ಧ ಜೀವಭಯದಲ್ಲೇ ಮರವಟ್ಟು ಕಂಡದ್ದುಂಟು. ಆದರಿದು, ನೋಡುವ ಕಣ್ಣು, ಗ್ರಹಿಸುವ ಮನಸ್ಸು ಇರುವವರಿಗೆ ಎಂದೂ ಮರೆಯಲಾಗದ ಪ್ರಕೃತಿಯ ಮೌನಪಾಠ, ಅವಿಸ್ಮರಣೀಯ ನೋಟ.

ದೋಣಿಸಾಗಲಿ ದೂರ ಹೋಗಲಿ ಪಲ್ಲವಿಸಿತು. ಅಖಂಡ ನೀಲಿಮೆಯಲ್ಲೊಂದು ಜಿಪ್ಪಿನ ರನ್ನರ್ ಓಡಿ ಎರಡು ಎಳೆಗಳನ್ನು ಬಿಡಿಸಿಟ್ಟಂತೆ ಸಾಗಿತು ನೌಕೆ. ನೊರೆಯಾಗಿ, ನಿರಂತರ ವಿಸ್ತರಿಸುವ ಹುರಿಯಾಗಿ 'ನೀರ ಮೇಲಣಗುಳ್ಳೆ ಸ್ಥಿರವಲ್ಲಾ ಹರಿಯೇ' ಎಂಬುದನ್ನು ಚಿತ್ರವತ್ತಾಗಿಸುತ್ತಿದ್ದಂತೆ ಹ್ಯಾವ್ಲಾಕ್ ಮಸಕಾಯಿತು, ಬ್ಲೇರ್ ಬೆಳಗತೊಡಗಿತು. ಮೂರು ಗಂಟೆಯುದ್ದಕ್ಕೆ ನಾವು ನೀರಳೆದು ಮುಗಿಸುವಾಗ ಇಳೆ ಕತ್ತಲ ಸೆರಗು ಹೊದ್ದು ಕುಳಿತಿತ್ತು. ಆದರೇನು ಸಣ್ಣಪುಟ್ಟ ದೀಪಸ್ತಂಭಗಳು, ಮಾರ್ಗಸೂಚಕ ದೀಪ ಮಾಲಾಲಂಕೃತ ಬ್ಲೇರ್ ಬಂದರು ನಾವು ಊಹಿಸದ ಹಬ್ಬದ ವಾತಾವರಣವನ್ನೇ ಕಲ್ಪಿಸಿತ್ತು! ವಾಸ್ತವದಲ್ಲಿ ಅಲ್ಲಿನ ನೀರತಳದ ಪ್ರಾಕೃತಿಕ ಉಬ್ಬು, ಕೊರಕಲು ರಚನೆಗಳನ್ನು ಸ್ಪಷ್ಟವಾಗಿ ತಪ್ಪಿಸಲು ಮತ್ತು ಎಂದೂ ಮುಸುಕಬಹುದಾದ ಮೋಡ ಮಳೆಯ ವಾತಾವರಣದಲ್ಲಿ (ಇಲ್ಲಿ ಮಳೆ ಎಂದೂ ಅಕಾಲಿಕವಲ್ಲ!) ನಾವಿಕರಿಗೆ ದಿಕ್ಕು ತಪ್ಪದಂತೆ ಮಾಡಲು ದೀಪ ಸಾಲು ಅವಶ್ಯವೇ ಇರಬೇಕು. ಪರೋಕ್ಷವಾಗಿ ಆ ಅಪಾಯವನ್ನು ಸೂಚಿಸುವಂತೆ ನಮ್ಮ ಹಡಗು ಮಾರ್ಗಕ್ರಮಣದ ವೇಗವನ್ನು ಪೂರ್ತಿ ಇಳಿಸಿ ಬಲು ನಿಧಾನವಾಗಿ ನಾವು ಹಿಂದಿನ ದಿನ ಹೊರಟ ಹಡಗುಕಟ್ಟೆಯಲ್ಲೇ ಇಳಿಸಿತು.

ವಂಡೂರ್ ಚಲೋ



ಪೂರ್ವ ನಿಶ್ಚಯದಂತೆ ಬೈಕ್ ಬಾಡಿಗೆ ಕೊಡುವ ಅಂಗಡಿಗೆ ಧಾವಿಸಿದೆವು. ಹಿಂದೆಲ್ಲ ನಮ್ಮಲ್ಲಿದ್ದ ಬಾಡಿಗೆ ಸೈಕಲ್ಲಂಗಡಿಗಳನ್ನು ನೆನಪಿಸುವಂತೆ ನಾಲ್ಕೈದು ಗುಜರಿ ಬೈಕುಗಳದ್ದೇ ದುಕಾನು ಅದು. ಆದರೆ ದುಕಾನುದಾರ ಮಾತ್ರ ಸ್ವಲ್ಪ ವಿಶೇಷ. ಈತ ಅಂಡಮಾನದ ನಾಗರಿಕ, ನಾಯಕತ್ವ ವಹಿಸುವ ಪೈಕಿ; ನಾಳೆ ಇಲ್ಲಿ ಸ್ವತಂತ್ರ ಚುನಾಯಿತ ಸರಕಾರ ಬರುವುದನ್ನು ಕಾದೇ ಇರುವ ಒಂದು ಗಟ್ಟಿ ಅಭ್ಯರ್ಥಿ. ಚರಿತ್ರೆಯನ್ನು ಅರೆಗುರುಡಿನಲ್ಲಿ ನೋಡುವವರಿಗೆ ಈ ದ್ವೀಪ ಸಮೂಹ ಪಾತಕಿಗಳದ್ದೇ ನೆಲ. ವಾಸ್ತವದಲ್ಲಿ ದ್ವೀಪಸಮೂಹ ಪಾತ್ರ ಪಾಪನಾಶಿನಿ ಗಂಗೆಗೆ ಸಮ! ಸಹಜವಾಗಿ ಈ ರಾಜಕಾರಣಿಯ ಕಾಳಜಿಗಳು ಕಳವು, ಸುಳ್ಳು, ಪಾತಕಗಳಿಲ್ಲದ ಅಭಿವೃದ್ಧಿಯ ಪಥದಲ್ಲಿತ್ತು. ದ್ವೀಪ ಸಮೂಹಗಳಲ್ಲೆಲ್ಲೂ ಭಿಕ್ಷುಕರು ಇರದಂತೆ ಮತ್ತು ಬಾರದಂತೆ ಅವರು ಮಾಡಿದ ಕೆಲಸಗಳು ಅಭಿಮಾನ ಮೂಡಿಸಿತು. ಆಮೇಲೇ ನಾವು ಗುರುತಿಸಿದ್ದು, ನಾವು ಅಲ್ಲಿದ್ದ ಅಷ್ಟೂ ದಿನ ಭಿಕ್ಷುಕರನ್ನು ಕಾಣಲೇ ಇಲ್ಲ! ಅಸ್ಥಿರವಾದ ಭದ್ರತಾ ವ್ಯವಸ್ಥೆಗಳು ಈ ದ್ವೀಪಗಳಲ್ಲಿ ಧಾರಾಳ ಕಾಣಸಿಗುತ್ತವೆ. ಉದಾಹರಣೆಗೆ ಹ್ಯಾವ್ಲಾಕಿನಲ್ಲಿ ನಾವಿದ್ದ ಮತ್ತು ನಾವು ಕಂಡ ಡೈವ್ ಇಂಡಿಯಾ ವಸತಿ ವ್ಯವಸ್ಥೆಗಳಂತೂ ತೀರಾ ದುರ್ಬಲ ರಚನೆಗಳು. ಅಂಥವುಗಳಿಗೆ ಒಂದು ಆವರಣ, ಕನಿಷ್ಠ ಒಂದು ಸೆಕ್ಯೂರಿಟಿ ಗಾರ್ಡಾದರೂ ನಮ್ಮ ಪುಣ್ಯಭೂಮಿಯಲ್ಲಾದರೆ ಇರಲೇಬೇಕಾಗುತ್ತಿತ್ತು; ಆದರೆ ಇಲ್ಲಿ (ಪಾಪಿಗಳ ನೆಲದಲ್ಲಿ?) ಇಲ್ಲ! ಹ್ಯಾವ್ಲಾಕ್ ಹಡಗು ಯಾನದಲ್ಲಿ ನಮ್ಮ ಚೀಲಗಳ ಕಥೆ ಈಗಾಗಲೇ ಹೇಳಿದ್ದೇನೆ. ಅಂದರೆ ವಂಚನೆ, ಕಳ್ಳತನ ಬಹುಶಃ ಇಲ್ಲ ಅಥವಾ ತುಂಬಾ ಕಡಿಮೆ!

ತೀರಾ ಸಣ್ಣ ಔಪಚಾರಿಕತೆಯೊಡನೆ ದಿನಕ್ಕೆ (ಬೈಕ್ ಪಡೆದಲ್ಲಿಂದ ಇಪ್ಪತ್ತನಾಲ್ಕು ಗಂಟೆ) ಮುನ್ನೂರು ರೂಪಾಯಿ ಬಾಡಿಗೆಯಲ್ಲಿ ಮೂರು ಬೈಕ್ ಪಡೆದೆವು. ಅವುಗಳಲ್ಲಿದ್ದ ಕನಿಷ್ಠ ಪೆಟ್ರೋಲಿನೊಡನೆ ಸಮೀಪದ ಬಂಕಿಗೆ ಧಾವಿಸಿ ಟ್ಯಾಂಕ್ ಭರ್ತಿ ಮಾಡಿ, ನಮ್ಮ ಹೊಟ್ಟೆಪಾಡೂ ಮುಗಿಸಿ, ರಾತ್ರಿಯ ನೆಲೆಯಾಗಿ ಆಯ್ದುಕೊಂಡಿದ್ದ ವಂಡೂರ್ ಎಂಬ ಗ್ರಾಮಾಂತರ ಪ್ರದೇಶದ ದಾರಿ ಹಿಡಿದೆವು. ಹಾಂ ತಡಿ, ತಡೀ! ವಾಸ್ತವ ಅಷ್ಟು ಸರಳವಿರಲಿಲ್ಲ. ನಮಗೆ ಈ ದ್ವೀಪ ಸಮೂಹ ಅಪರಿಚಿತ ನೆಲ. ಇಲ್ಲಿರುವ ದಾರಿ ಜಾಲವೂ ಊರುಗಳ ಕಲ್ಪನೆಯೂ ಅಮೂರ್ತ. ಸಾಲದ್ದಕ್ಕೆ ಇದ್ದದ್ದರಲ್ಲೂ ಜನ, ವಾಹನ ಸಂಚಾರ ವಿರಳವಾಗುವ ರಾತ್ರಿಯ ವೇಳೆ ಮತ್ತು ಹೆಚ್ಚಿನ ಊರುಗಳಲ್ಲಿ ಬೀದಿ ದೀಪದ ವೈಭವವೂ ಇಲ್ಲದ ಗಾಢಾಂಧಕಾರ. ಈ ದ್ವೀಪ ಸಮೂಹದ ಏಕೈಕ ಘೋಷಿತ ಹೆದ್ದಾರಿ ಅಂದರೆ ನಾವು ಅಲ್ಲಿ ಕಂಡ ವಿಮಾನ ನಿಲ್ದಾಣದ ದಾರಿಯದ್ದೇ ಮುಂದುವರಿಕೆ. ಅದು ಬ್ಲೇರ್ ಪೇಟೆಯಿಂದಾಚೆಗೆ ನಮ್ಮ ಯಾವುದೇ ಹಳ್ಳಿ ದಾರಿಗಿಂತ ಉತ್ತಮವಿರಲಿಲ್ಲ. ಗೊಂದಲಿಸುವ ಕವಲು, ಹೊಂಡ, ಅನಿಯತ ಮತ್ತು ಸೂಚನೆ, ಬಣ್ಣಗಳಿಲ್ಲದ ವೇಗತಡೆ ಉಬ್ಬುಗಳಲ್ಲಿ ತಡಬಡಾಯಿಸುತ್ತಾ ಸಾಗಿದೆವು. ವಂಡೂರ್ ಸುಮಾರು ಮೂವತ್ತು ಕಿಮೀ ದೂರದ ತೀರಾ ಹಳ್ಳಿಮೂಲೆ. ನಮ್ಮ ಬೈಕ್‌ಗಳಾದರೋ ಹಾರನ್ ಬಿಟ್ಟು ಬೇರೆಲ್ಲಾ ಸದ್ದುಮಾಡುವ ಗುಜರಿ ಗಾಡಿಗಳು. ಆದರೂ ಸಣ್ಣ ಕಿರಿಕ್ಕುಗಳನ್ನು ಬಿಟ್ಟರೆ ಸಾಮಾನ್ಯ ಓಟಕ್ಕೆ ಮೋಸವಿರಲಿಲ್ಲ. ನಮ್ಮ ಅದೃಷ್ಟಕ್ಕೋ ದ್ವೀಪಸ್ತೋಮದ ತಾಕತ್ತೇ ಅಷ್ಟೋ ಒಟ್ಟಾರೆ ವಾಹನ (ಸಂಖ್ಯೆಯೂ) ಸಂಚಾರ ಕಡಿಮೆಯಿತ್ತು. ಮತ್ತೆ ಆಯಕಟ್ಟಿನ ಜಾಗಗಳಲ್ಲಿ ಸರಿದಾರಿ ತೋರಲು ಜನಗಳು ಸಿಕ್ಕಿದ್ದರಿಂದಲೂ ಸುಮಾರು ಒಂದೂವರೆ ಗಂಟೆಯ ಅವಧಿಯಲ್ಲಿ ನಾವು ಉದ್ದೇಶಿಸಿದ್ದ ಬೋರ್ಡು ಕಾಣಿಸಿತು.

'ನಿಕೋಬಾರ್ ಸಂಶೋಧನಾ ಸಂಸ್ಥೆ'

ಬ್ರಿಟಿಷ್ ಮೂಲದ ರೋಮುಲಸ್ ವ್ಹಿಟೇಕರ್ ಅಂದರೆ ಆಸಕ್ತಿ, ಅಧ್ಯಯನ ಮತ್ತು ಛಲಗಳ ಮುಪ್ಪುರಿಗೊಂಡ ವ್ಯಕ್ತಿತ್ವ. ಈತ ಭಾರತದಲ್ಲಿ ಹಾವು, ಮೊಸಳೆ, ಕಡಲಾಮೆಗಳ ರಕ್ಷಣೆಯ ಬಗ್ಗೆ ಮಾಡಿದ ಕೆಲಸ ಅಸಂಖ್ಯ, ಅನನ್ಯ. ಅದರ ಒಂದು ಗಟ್ಟಿ ಸಾಕ್ಷಿ ಈ ಸಂಸ್ಥೆಯೂ ಹೌದು. ಇದು ದ್ವೀಪಸ್ತೋಮದ ಆದಿವಾಸಿ ಜನರೂ ಸೇರಿದಂತೆ ಜೀವಿಗಳ (ಹಕ್ಕಿ, ಹಾವು, ಮೊಸಳೆ, ಕಡಲಾಮೆ ಇತ್ಯಾದಿ) ಅಧ್ಯಯನಕ್ಕೆ ಮೀಸಲಾದ ಸ್ವಯಂಸೇವಾ ಸಂಸ್ಥೆ. ವಂಡೂರಿನ ಕರಾವಳಿ ಸೇರಿದಂತೆ ಬರುವ ವಿಸ್ತಾರ ಜವುಗು ಪ್ರದೇಶ, ಕಾಂಡ್ಲವನವನ್ನು ಸರಕಾರ ಮೊಸಳೆಧಾಮವಾಗಿ ಮೀಸಲಿಟ್ಟಿದೆ. (ತಮಾಷೆ ಎಂದರೆ ಮೊಸಳೆಗಳು ಇಲ್ಲಿ ಅಳಿದಮೇಲೆ ಸರಕಾರದ ಘೋಷಣೆ ಹೊರಟಿತಂತೆ; ಕೋಟೆ ಸೂರೆಹೋದಮೇಲೆ ದಿಡ್ಡೀಬಾಗಿಲು ಹಾಕಿದ್ದರು! ಕನ್ನಡ ಶಾಲೆಗಳೆಲ್ಲಾ ನ್ಯೂನಪೋಷಣೆಯಿಂದ ಸಾಯುತ್ತಿರುವ ಕಾಲಕ್ಕೆ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಕ್ಕೆ ಬಾಯಿ ಬಡಿದ ಹಾಗೆ!) ಮೊಸಳೆಧಾಮದ ಹೊರ ಅಂಚಿನ ಸುಮಾರು ಒಂದೆಕರೆ ಪುಟ್ಟ ಗುಡ್ಡದ ಇಳುಕಲು ನೆಲ ಈ ಸರಕಾರೇತರ ಸ್ವಯಂಸೇವಾ ಸಂಸ್ಥೆಯದು. ವೇಣು – ಸುಮಾರು ನಲ್ವತ್ತರ ಪ್ರಾಯದ, ಸಂಸ್ಥೆಯ ಇಂದಿನ ಕಾರ್ಯದರ್ಶಿ (ಈಗ ವ್ಹಿಟೇಕರ್ ಇದರಿಂದ ದೂರ ಸರಿದಿದ್ದಾರಂತೆ), ನಮ್ಮನ್ನು ಸ್ವಾಗತಿಸಿದರು. (ಅವರಿಗೊಬ್ಬ 'ಭಯ್ಯಾ' ಅಡುಗೆಯಿಂದ ಎಲ್ಲಕ್ಕೂ ಅವನು 'ಸೈ'ಯ್ಯಾ.) ನಮ್ಮ ಪ್ರವಾಸದ ತಯಾರಿಯ ದಿನಗಳಲ್ಲಿ ಸಮಾನ ಗೆಳೆಯರಿಂದ ನಿರೇನ್‌ಗೆ ವೇಣು ಪರಿಚಯ ಬೆಳೆದಿತ್ತು. ಅದು ಕೇವಲ ದೂರವಾಣಿ ಪರಿಚಯವಾದರೂ ಪರಸ್ಪರ ಆಸಕ್ತಿಯ ನೆಲೆಯಲ್ಲಿ ಔಪಚಾರಿಕತೆಗಳಿಗಿಂತ ಆತ್ಮೀಯತೆಯೇ ಹೆಚ್ಚಿತ್ತು. ಸಹಜವಾಗಿ ಸ್ವಾಗತ ಕಛೇರಿಯ ಬಾಗಿಲು ತೆರೆಯದೆ, ಊಟದ ಜಗುಲಿಯಲ್ಲಿ ಕುಳಿತೇ ಮಾತುಕತೆ ನಡೆಸಿದೆವು. ಬೈಕುಗಳನ್ನು ಕಚೇರಿ ಬಳಿಯ ಮಾವಿನಮರದ ನೆರಳಿನಲ್ಲೇ ಬಿಟ್ಟು ಅವರು ಒದಗಿಸಿದ ಎರಡು ಕುಟೀರಗಳನ್ನು ಸೇರಿಕೊಂಡೆವು.



ವಂಡೂರ್ ನೆಲ ಬ್ರಿಟಿಷ್ ಆಡಳಿತದ ಕಾಲದಲ್ಲಿ ನಾಗರಿಕತೆ ಮಲಿನಗೊಳಿಸಿದ, ಅಂದರೆ ಮೂಲ ಹಸುರುಹೊದಿಕೆಯನ್ನು ಕಳಚಿಕೊಂಡಿದ್ದ ಪ್ರದೇಶ. ಅದರಲ್ಲಿಂದು ಸಹಜಾರಣ್ಯವನ್ನು ಪೋಷಿಸಿಕೊಂಡು, ಸ್ಥಳೀಯ 'ವಾಸ್ತು'ವನ್ನು ನೆನಪಿಸುವಂತೆ ಪ್ರಸ್ತುತ ಸಂಸ್ಥೆ ಬೀಡುಬಿಟ್ಟಿದೆ. ಎಲ್ಲೂ ನೆಲ ಸಮತಟ್ಟು ಮಾಡಿಲ್ಲ. ಗುಡ್ಡದ ಓರೆಯಲ್ಲಿ ನಾಲ್ಕೆಂಟು ಅಸಮ ಪುಟ್ಟ ಕಲ್ಲ ಕುಂದಗಳನ್ನು ಕಟ್ಟಿ ಸಮತಳ ಸಾಧಿಸಿದ್ದರು. ಮತ್ತೆಲ್ಲ ಮರದ (ನಯಗಾರಿಕೆ, ಪಾಲಿಶ್ ಇಲ್ಲದ) ತೊಲೆ, ಕಂಬ, ಹಲಿಗೆಗಳೇ ಆಧಾರ ಮತ್ತು ಹೊದಿಕೆ. ಮೇಲೆ ಹೆಚ್ಚಿನ ಮುಚ್ಚಿಗೆ ಮಾತ್ರ ದ್ವೀಪಸ್ತೋಮಕ್ಕೆ ಸಾಮಾನ್ಯ ಮತ್ತು ಅನಿವಾರ್ಯವಾದ ತಗಡು (ಗೊತ್ತಲ್ಲಾ ಮಳೆ ಇಲ್ಲಿ ಋತುಮಾನಗಳ ಔಪಚಾರಿಕತೆಯನ್ನು ಹೆಚ್ಚು ಅನುಸರಿಸುವುದಿಲ್ಲ!). ಧ್ರುವಪ್ರದೇಶದ ಸಮೀಪ ಅಂದರೆ ಅತಿ ಚಳಿನಾಡಿನಲ್ಲೇ ಇರುವ ಓದುಗ ಮಹಾಶಯಾ – ಆನಂದಾ ಕೇಳಿದ್ದೇನೆ, ನಿನ್ನದೂ

ಬಹ್ವಂಶ ಅಟ್ಟಳಿಗೆಯ ಮೇಲಿನ ಮರದ ಮನೇಂತ. ಅಮೆರಿಕಾದ ಕಥೆ ಬೇರೇ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತದ ಸಹಜಾರಣ್ಯಗಳು ಶೇಕಡಾ ಎರಡಕ್ಕೆ ಇಳಿದ ಕಟು ವಾಸ್ತವ ಬೇರೇ. ಈಗ ಇದು ವೈಭವವಲ್ಲವೇ ಎಂದು ಉದ್ಗರಿಸುವವರಿರಬಹುದು. ಹಾಗಿಲ್ಲ, ದ್ವೀಪಸ್ತೋಮಕ್ಕೆ ಇದು ಸಹಜನ್ಯಾಯ. ಇಲ್ಲಿನ ಬಲುದೊಡ್ಡ ಮತ್ತು ಮರು–ಭರಿಸಬಲ್ಲ ಪ್ರಾಕೃತಿಕ ಸಂಪತ್ತು ಮರ. ಏಷ್ಯಾದ ಅತಿ ದೊಡ್ಡ ಮರದ ಮಿಲ್ಲು ಇರುವುದೂ ಅಂಡಮಾನಿನಲ್ಲೇ (ಚಥಾಂ ಎಂಬೊಂದು ದ್ವೀಪದಲ್ಲಿ). ಇನ್ನೂ ಮುಖ್ಯವಾಗಿ ಗಮನಿಸಬೇಕಾದ ಸಂಗತಿ, ದ್ವೀಪಸ್ತೋಮಕ್ಕೆ ಸಿಮೆಂಟು, ಕಲ್ಲು, ಕಬ್ಬಿಣ ಅಷ್ಟೇ ಯಾಕೆ ಸರಿಯಾಗಿ ಹೇಳುವುದಾದರೆ ಮಣ್ಣೂ ವಿದೇಶೀಯ. ಎಲ್ಲ ಮರೆತರೂ ಸಿಮೆಂಟು ಹದಬರಿಸುವ ಸಿಹಿನೀರಿಗೂ ಇಲ್ಲಿ ತತ್ವಾರ ಎನ್ನುವುದನ್ನು ಮರೆತೀರಿ ಜೋಕೆ!

ಅಟ್ಟಳಿಗೆಯ ಕುಟೀರಗಳಿಗೆ ಹೆಚ್ಚು ಕಡಿಮೆ ನಾಲ್ಕೂ ದಿಕ್ಕಿಗೆ ವಿಸ್ತಾರ ಕಂಡಿಗಳಿವೆ. ಅವಕ್ಕೆಲ್ಲ ಗಾಳಿಮಳೆಗೆ ಮರೆ – ಪರದೆಯಂತೆ ಮೇಲೆ ಸುತ್ತಿಟ್ಟ ಬಿದಿರಕಡ್ಡಿಗಳ ಚಾಪೆ. ಬಂದೋಬಸ್ತಿನ ಹೆಸರಿನಲ್ಲಿ ಕಾಂಕ್ರೀಟ್ ಗೋರಿಗಳಂಥ ಮನೆಗಳಲ್ಲಿದ್ದು ಬಂದ ನಮಗೆ ಮೊದಲು ಹೊಳೆಯುವುದು "ಕಳ್ಳ ಬಂದರೇನು ಮಾಡುವೆ?" ಗಾಬರಿ ಬೇಡ, ಮೊದಲೇ ಹೇಳಿದ್ದೇನೆ, ದ್ವೀಪಸ್ತೋಮದಲ್ಲೇ (ಕನ್ನಡದ ಕಳ್ಳರು ಇದನ್ನು ಓದಲ್ಲಾಂತ ಭಾವಿಸುತ್ತೇನೆ) ಕಳ್ಳರಿಲ್ಲ! ಮತ್ತೆ ಮನುಷ್ಯನ ಮೇಲೆ ಎರಗಬಹುದಾದ ಯಾವ ದೊಡ್ಡ ಮೃಗಗಳೂ ಇಡಿಯ ದ್ವೀಪಸ್ತೋಮದಲ್ಲಿಲ್ಲ. ಕುಟೀರಗಳಿಗೆ ಸುತ್ತೂ ವಿಸ್ತಾರ ಜಗುಲಿಯೂ ಇದೆ. ಅನತಿ ದೂರದಲ್ಲಿ, ಆದರೆ ಸ್ವತಂತ್ರವಾಗಿ ನೆಲ ಮಟ್ಟದ್ದೇ ರಚನೆ ಸ್ನಾನ ಶೌಚಗೃಹಗಳು. ಇಡೀ ವಠಾರದೊಳಗೆ ಓಡಾಟಕ್ಕೆ ಸಣ್ಣ ಒರಟು ಕಾಲುದಾರಿ ಬಿಟ್ಟರೆ ಉಳಿದೆಲ್ಲೆಡೆಯಲ್ಲೂ ಭಾರೀ ಮರಗಳೂ ಸೇರಿದಂತೆ ಬಳ್ಳಿ ಪೊದರುಗಳ ಜಾಲ ರಮ್ಯವಾಗಿದೆ. ಪ್ರಕೃತಿಯೊಂದಿಗಿದ್ದೂ ಬೆಚ್ಚನ್ನ ಅನುಭವ ಕೊಟ್ಟ ಆ ವಠಾರ ಸಂಶೋಧನೆಗೂ ವಿರಾಮಕ್ಕೂ ಆದರ್ಶ ತಾವು.

ದಿನ ನಾಲ್ಕು (ಏಪ್ರಿಲ್ ೨೧)

'ಬೆಳಗ್ಗೆ ಬೇಗ ಎದ್ದು' ಎಂಬ ಪ್ರಯೋಗಕ್ಕೆ ಅವಕಾಶವೇ ಇಲ್ಲದ 'ಲೋಕ' ಇದು. ನಾಲ್ಕಕ್ಕೇ ಹಕ್ಕಿ ಕೂಗಿ ಐದಕ್ಕೆ ಬೆಳ್ಳಂಬೆಳಕಾಗುವಲ್ಲಿ ಎಂಟೂವರೆಗಷ್ಟೇ ಕಾರ್ಯಭಾರವಿದ್ದ ನಾವೇನು ಮಾಡಬಹುದು. ವಠಾರ ಸುತ್ತಿದೆವು. ಸಮುದ್ರದತ್ತ ಚೂಪುಗೊಳ್ಳುವ ಬಲ ಕೊನೆಯಲ್ಲಿ ಮಣ್ಣು ಕಲ್ಲು ತುಂಬಿ ಒಂದು ಸಣ್ಣ ದೋಣಿ ಕಟ್ಟೆ ಮಾಡಿಕೊಂಡಿದ್ದರು. ಸಮುದ್ರದ ಭರತದ ವೇಳೆಯಲ್ಲಿ ಇಂದು ಅಲ್ಲಿ ಹಾಳಾಗಿ ಬಿದ್ದಿರುವ ಯಾಂತ್ರಿಕ ದೋಣಿ ಹಗ್ಗ ಜಗ್ಗುತ್ತದೆ ಮತ್ತೆ ನೆಲಕಚ್ಚುತ್ತದೆ. ಅದೇ ಕೊನೆಯ ಎಡ ಅಂಚಿನಲ್ಲಿ ನೊಜೆ ಹುಲ್ಲಿನ ನೇಯ್ಗೆಯೇ ದಂಡೆಯಂತಿರುವ ಒಂದು ಪುಟ್ಟ ಕೆರೆ ಈ ವಠಾರದ ಏಕೈಕ ಸಿಹಿ ನೀರ ಸಂಗ್ರಹ. ಇದು ಒಟ್ಟಾರೆ ದ್ವೀಪಸ್ತೋಮದ ಕುಡಿ ನೀರ ವ್ಯವಸ್ಥೆಯನ್ನೇ ಕುರಿತು ಯೋಚಿಸಲು ನಮಗೆ ಪ್ರೇರೇಪಿಸಿತು ಎಂದರೆ ತಪ್ಪಿಲ್ಲ. ಕೆರೆಯಲ್ಲಿ ಎಂದೂ ನೀರು ಖಾಲಿಯಾಗುವುದೆಂದಿಲ್ಲವಂತೆ. ಅದು ಒಂದು ಮಿತಿಯಲ್ಲಿ ಸಿಹಿ ನೀರು ಕೊಟ್ಟರೂ ಅತಿಯಲ್ಲಿ ಅಥವಾ ಕೊರತೆಯಾದಲ್ಲಿ ಸಮುದ್ರದ ಉಪ್ಪುನೀರನ್ನೇ ಸೆಳೆದುಕೊಂಡು 'ಶಿಕ್ಷಿಸುತ್ತದೆ'. ಕೆರೆಯಿಂದ ಸ್ವಲ್ಪ ಮೇಲೆ ಕೇಂದ್ರೀಕೃತ ಅಡುಗೆಮನೆ, ಮತ್ತದಕ್ಕೆ ತಗುಲಿದಂತೆ ತೆರೆದ ಊಟದ ಜಗುಲಿ. ಮತ್ತೂ ಮೇಲೆ ಮೇಲೆ ಹೋದಂತೆ ದಾರಿ ಬದಿಯಲ್ಲಿ ಮೊದಲು ಸಿಗುವಂತೆ ಇರುವ ದೊಡ್ಡ ರಚನೆಯಲ್ಲಿ ತನ್ನ ಕಛೇರಿ, ಅಧ್ಯಯನ ಕಮ್ಮಟ/ಶಿಬಿರ ನಡೆಸಲು ಅನುಕೂಲವಾಗುವ ಗ್ರಂಥಾಲಯ ಮತ್ತು ಸಂವಹನ ಸಾಧನಗಳ ಸಹಿತ ಸಜ್ಜಾದ ಪುಟ್ಟ ಸಭಾಭವನ ಹೊಂದಿದೆ. ಒಳ ವಠಾರದಲ್ಲಿ ಹರಡಿದಂತೆ ಆರೆಂಟು ಕುಟೀರಗಳು ಮತ್ತು ಸಹರಚನೆಗಳು.



ಭಯ್ಯಾ ಕೊಟ್ಟ ಅವಲಕ್ಕಿ ಚಾದಿಂದ ಹೊಟ್ಟೆ ಗಟ್ಟಿ ಮಾಡಿಕೊಂಡೆವು. ಆ ವೇಳೆಗೆ ಸಮುದ್ರದಲ್ಲಿ ಇಳಿತದ ಕಾಲ. ವೇಣು ಸಲಹೆ ಮೇರೆಗೆ ಭಯ್ಯಾನ ಜತೆಯಲ್ಲಿ ವಠಾರದ ಧಕ್ಕೆಯಾಚಿನ ಕಾಂಡ್ಲವನ 'ಶೋಧ'ನೆಗೆ (ಮ್ಯಾನ್‌ಗ್ರೋವ್) ನಡೆದೆವು. ಹ್ಯಾವ್ಲಾಕ್‌ನಲ್ಲಿ ನಾವು ಕಂಡ ಇಳಿತದ ನೆಲಕ್ಕೂ ಇದಕ್ಕೂ ವ್ಯತ್ಯಾಸವಿತ್ತು. ಇಲ್ಲಿ ನೆಲದ ಪಾತಳಿ ತುಸುವೇ ಎತ್ತರದ್ದು. ಸಹಜವಾಗಿ ಜನ ಅರೆಬರೆ ಕಾಂಡ್ಲ ಕಳೆದು ತೆಂಗಿನ ಕೃಷಿ ನಡೆಸಿದ್ದರು. ಆದರೆ ಸುನಾಮಿ ಬಡಿದಾಗ ಸಾಕಷ್ಟು ತೆಂಗು ಕೊಚ್ಚಿಹೋಗಿದ್ದರೂ ಉಳಿದಷ್ಟೂ ಮರ ಮತ್ತು ನೆಲ ತೆಗೆಯದುಳಿದ ಕಾಂಡ್ಲಾವನಕ್ಕೆ ಕೃತಜ್ಞವಾಗಿರಬೇಕು! ಹಲವು ತೆಂಗು ಅಡಿ ಮಗುಚಿದ್ದವು, ತಲೆಕೆಟ್ಟು ಅನಾಥವಾಗಿ ಕಾಣುತ್ತಲೂ ಇದ್ದವು. ಕೃಷಿ ಮತ್ತು ಓಡಾಟಕ್ಕೆ

ಮಾಡಿಕೊಂಡಂತೇ ಕಾಣುತ್ತಿದ್ದ ಕಾಲ್ದಾರಿಯಂತ ತೆರವುಗಳಾಚೆ ಸಮುದ್ರ ಕಾಣದಂತೆ ಕಾಂಡ್ಲಾ ಪೊದರುಗಳು ಸಾಕಷ್ಟಿತ್ತು. ಬಿಲದೊಳಗಿಂದ ಮಣ್ಣಗೋಲಿ ತಂದು 'ಅಂಗಳ' ಶೃಂಗಾರ ಮಾಡುವ ಏಡಿ ಇಲ್ಲಿ ಭೀಮಗೋತ್ರದ್ದೇ ಇರಬೇಕು. ಹ್ಯಾವ್ಲಾಕ್ ದ್ವೀಪದ ಗೋಲಿಗಳು ಕಡಲೆ ಗಾತ್ರದವಾದರೆ ಇಲ್ಲಿನವು ನೆಲ್ಲಿ ಗಾತ್ರದವು! ನೆಲದ ಹಸಿ, ಅಲ್ಲಿ ಇಲ್ಲಿ ಪುಟ್ಟ ಕೆರೆಗಳಂತೆ ನೀರು ಮಡುಗಟ್ಟಿದ್ದು ನೋಡುವಾಗ ಇದು ಪೂರ್ತಿ 'ನಮ್ಮದಲ್ಲ' ಎಂದು ಎಚ್ಚರ ದಟ್ಟವಾಗುತ್ತಿತ್ತು. ಹೀಗೆ ನೂರಿನ್ನೂರು ಮೀಟರ್ ನಡೆಯುವುದರೊಳಗೆ ಕಡಲ ಕಿನಾರೆಯೇ ಬಂತು. ಬುಡಮೇಲಾದ ಹತ್ತೆಂಟು ಭಾರೀ ಮರಗಳು ಕಿನಾರೆಯುದ್ದಕ್ಕೂ ಸುನಾಮಿಯ ಸ್ಪಷ್ಟ ನೆನಪಿನ ಕಾಣಿಕೆಗಳಾಗಿ ಬಿದ್ದುಕೊಂಡಿದ್ದವು. ಮರಳಿನುದ್ದಕ್ಕೆ ಸ್ವಲ್ಪ ನಡೆದದ್ದೇ ನಾವು ಹಿಂದಿನ ರಾತ್ರಿ ಬ್ಲೇರಿನಿಂದ ಬರುತ್ತಾ ಸಂಸ್ಥೆಯೊಳಗೆ ಪ್ರವೇಶಿಸುವಲ್ಲಿ ಬಿಟ್ಟ ದಾರಿಯ ಮುಂದುವರಿಕೆ ಮತ್ತದರ ಮುಕ್ತಾಯ ಕಾಣಿಸಿತು. ಅಕ್ಕೋ ಹಕ್ಕಿ, ಇಕ್ಕೋ ಚಿಪ್ಪೀ, ವ್ಹಾಯ್ ಏಡಿ ಎಂಬ ಉದ್ಗಾರಗಳ ಸರಣಿಯಲ್ಲಿ ಮತ್ತೆ ಬಂದ ದಾರಿಯಲ್ಲೇ ಮರಳಿದೆವು. ಮತ್ತೆ ಬೈಕೇರಿ ಯೋಜನೆಯಂತೆ ವಂಡೂರಿನದೇ ಇನ್ನೊಂದು ಕಿನಾರೆಗೆ ಧಾವಿಸಿದೆವು.

ವನ್ಯದ ಉಸ್ತುವಾರಿಯಲ್ಲಿ ಜಲ

ದ್ವೀಪಸ್ತೋಮದೊಳಗಿನದೇ ಒಂದು ಪುಟ್ಟ ದ್ವೀಪ ಜಾಲೀಬಾಯ್. ಅದರ ಸುತ್ತ ಮುತ್ತಣ ನೀರತಳ ಆಳ ಕಡಿಮೆಯಿದ್ದು ವೈವಿಧ್ಯಮಯ ಹವಳದರ್ಶನಕ್ಕೆ ಮತ್ತು ನೀರಾಟಕ್ಕೆ ಅವಕಾಶ ಕಲ್ಪಿಸುತ್ತದೆ. ಅಲ್ಲಿಗೆ ವಂಡೂರಿನಿಂದ ಸುಮಾರು ಒಂದು ಗಂಟೆಯ ದೋಣಿ ಸವಾರಿ. ಅದಕ್ಕೆ ವನ್ಯ ಇಲಾಖೆ (ಹೌದು, ಇಂಗ್ಲಿಶಿನ ತಿಟಜಟುಜಿಜಗೆ ಇರುವ ವ್ಯಾಪಕ ಅರ್ಥದಲ್ಲಿ ಇಲ್ಲಿ ಜಲಸಂಬಂಧೀ ಕಾಪಿಟ್ಟ ವಲಯವನ್ನೂ ವನ್ಯವೆಂದೇ ಪರಿಗಣಿಸುತ್ತಾರೆ) ವಂಡೂರಿನಿಂದ ತನ್ನದೇ ವ್ಯವಸ್ಥೆಯಲ್ಲಿ ಮತ್ತು ಶಿಸ್ತಿನಲ್ಲಿ ಪ್ರವಾಸಿಗರನ್ನು ಒಯ್ಯುತ್ತದೆ. ನಮ್ಮ ವಾಸ್ತವ್ಯದಿಂದ ಸುಮಾರು ನಾಲ್ಕು ಕಿಮೀ ದೂರದ ಆ ಜಾಗವನ್ನು ನಾವು ಸಾಕಷ್ಟು ಮುಂಚಿತವಾಗಿಯೇ ತಲಪಿಕೊಂಡೆವು. ಹೇಗೂ ಸಮಯ ಇದೆಯಲ್ಲಾಂತ ಸ್ವಲ್ಪ ಆಚೀಚೆ ಕಾಲಾಡಿಸಿದೆವು.

ಆಧುನಿಕ ಭಾರತದ ಸಂಪ್ರದಾಯದಲ್ಲಿ ಪ್ರಜಾಪ್ರತಿನಿಧಿಗಳು ಬಿಡಿ, ಸಾರ್ವಜನಿಕ ಅಧಿಕಾರಿಗಳೂ ಸಂದ ರಾಜಸತ್ತೆಯ ಉತ್ತರಾಧಿಕಾರಿಗಳೇ ಆಗುತ್ತಾರೆ!! ಅದಕ್ಕೆ ಸರಿಯಾಗಿ ಅಲ್ಲೇ ದಾರಿ ಪಕ್ಕದಲ್ಲಿದ್ದ ಪುಟ್ಟ ಗುಡ್ಡದ ಮೇಲೊಂದು ಇಲಾಖಾ ವಸತಿಗೃಹ, ಅದರ ಉಸ್ತುವಾರಿಗೊಂದಷ್ಟು ಸಿಬ್ಬಂದಿಗಳನ್ನು ಕಂಡೆವು. ಬ್ಲೇರಿನಿಂದ ಸರಿಯಾದ ವಾಹನ ಯಾನದಲ್ಲಿ ಅರ್ಧ ಗಂಟೆಯ ದಾರಿಯೂ ಇಲ್ಲದಲ್ಲಿ ಬೇಕೇ ಇಷ್ಟೆಲ್ಲ? ಮತ್ತೆ ದಾರಿ ಪಕ್ಕದಲ್ಲಿ ಮ್ಯೂಸಿಯಮ್ಮೇ ಮುಂತಾದ ಉದಾತ್ತ ಹೆಸರಿನ ವ್ಯರ್ಥ ರಚನೆಗಳು ಧಾರಾಳ ಇದ್ದವು. ಸಮಯ ಇದ್ದುದರಿಂದ ಅವನ್ನೆಲ್ಲ ಒಂದು ಸುತ್ತು ಹಾಕುವುದರೊಳಗೆ ಇಲಾಖೆಯ ಬೋಟುಗಳು ಬಂದವು. ಇದಕ್ಕೆ ಬ್ಲೇರ್‌ನಲ್ಲೇ ಪ್ರವಾಸೋದ್ಯಮ ಇಲಾಖೆಯಿಂದ ಸ್ಥಳ ಕಾಯ್ದಿರಿಸುವ ವ್ಯವಸ್ಥೆಯಿತ್ತು. ನಾವು ಅದನ್ನು ಬಳಸಿಕೊಂಡೇ ಬಂದಿದ್ದೆವು. ಆದರೆ ಇಲಾಖೆಗಳ ಒಳ ರಾಜಕೀಯದಲ್ಲಿ ಸ್ವಲ್ಪ ತಡವರಿಸಬೇಕಾಯ್ತು. ಅದೃಷ್ಟವಶಾತ್ ಅದು ನಮ್ಮ ಯಾತ್ರಾವಕಾಶವನ್ನು ಮಾತ್ರ ವಂಚಿಸಲಿಲ್ಲ.

ಅಂಡಮಾನ್ ದ್ವೀಪಸ್ತೋಮದಲ್ಲಿ ದಾಖಲೆಗೊಂದು ಪುಟ್ಟ ಸಿಹಿನೀರ ತೊರೆ ಇದ್ದರೂ ನಿಜದಲ್ಲಿ ಹರಿಯುವ ನೀರಿನ ಪರಿಣಾಮಗಳು ಕಾಣಸಿಗುವುದಿಲ್ಲ. ಇರುವುದೆಲ್ಲ ಸಮುದ್ರದ ಉಪ್ಪುನೀರ ಏರಿಳಿತಕ್ಕೆ ಒಡ್ಡಿಕೊಳ್ಳುವ ತಗ್ಗುಗಳು. ಭರತದಲ್ಲಿ ನೀರಿನ ಮಿತಿಮೀರಿದವು ದ್ವೀಪಗಳ ಹಾಗೆ. ಮತ್ತು ಸುತ್ತುವರಿದ ನೀರು ತೋಡು ತೊರೆಗಳ ಹಾಗೆ. ಇವು ಒಟ್ಟು ದ್ವೀಪಸ್ತೋಮದ ಒಳ ವಲಯಗಳಲ್ಲಿರುವುದರಿಂದ ನಮಗೆ ಮುಕ್ತ ಸಾಗರದ ದೃಶ್ಯ ಮಾತ್ರ ಇರುವುದಿಲ್ಲ. ನಾವು ವಂಡೂರಿನಲ್ಲಿ ಯಾವುದೋ ಸರೋವರದಂಚಿನಲ್ಲಿದ್ದೇವೆ ಅನಿಸುತ್ತಿತ್ತು. ದೋಣಿ ಎದುರಿಗೇ ಕಾಣುವ ದಂಡೆ ಬಿಟ್ಟು ಓರೆಯಲ್ಲಿ ಸಾಗಿದಂತೆ ಅನಾವರಣಗೊಳ್ಳುತ್ತಾ ಹೋದ ನೀರಹರಹು ಯಾವುದೋ ಮಹಾನದಿಯ ನೆನಪೇ ತರುತ್ತಿತ್ತು. [ಪಶ್ಚಿಮ ಬಂಗಾಳದ ಸುಂದರಬನ್ಸ್ ವ್ಯಾಘ್ರಧಾಮ ಇಂಥದ್ದೇ ಪ್ರಾಕೃತಿಕ ವ್ಯವಸ್ಥೆಯಲ್ಲಿ ಹರಡಿಕೊಂಡಿದೆ. ಅದು ಗಂಗೆಯ ಸಾಗರಸಂಗಮ ಕ್ಷೇತ್ರ. ಅಲ್ಲಿ ಸಮುದ್ರದಿಂದ ನುಗ್ಗಿ ಬರುವ ಉಪ್ಪುನೀರೂ ಇರಬಹುದು, ಮುಂದೊತ್ತುವಲ್ಲಿ ನಿಧಾನಿಸಲೇಬೇಕಾದ ನದಿಯ ಸಿಹಿ ನೀರೂ ಇರಬಹುದು. ಅಲ್ಲಿನ ಕುದ್ರುಗಳ (ನದಿನೀರಿನ ನಡುಗಡ್ಡೆಗಳಿಗೆ ಕರಾವಳಿ ವಲಯದಲ್ಲಿ ಕುದ್ರು ಎನ್ನುತ್ತಾರೆ) ನಡುವಣ ನೀರ ಹರಹುಗಳು ಖಾರಿಗಳೆಂದೇ ಖ್ಯಾತ.)]

ಇಲ್ಲಿ ನೀರಿಗೆ ನದಿಯ ಸೆಳವಿಲ್ಲ. ಹಾಗೆಂದು ನಮ್ಮ ದೋಣಿ ಅವಸರಿಸುವಂತೆಯೂ ಇಲ್ಲ! ನದಿಪಾತ್ರೆಯಲ್ಲಿ ಶತಶತಮಾನಗಳಿಂದ ಏಕಮುಖ ಹರಿವಿನ ಸವಕಳಿ ಸ್ಪಷ್ಟ ಜಾಡು ಮಾಡುವುದರಿಂದ ಸಾಮಾನ್ಯವಾಗಿ ನಡುವೆ ಆಳ ಜಾಸ್ತಿಯಿರುತ್ತದೆ. ಇಲ್ಲಿ ಎಲ್ಲೂ ಆಳವಿರಬಹುದು, ತೋರಿಕೆಗೆ ನೀರಿನ ನಡುಬಿಂದು ಎಂಬಲ್ಲೂ ನೆಲ ಎದ್ದು (ಹವಳದಗಡ್ಡೆ ಬೆಳೆಯುತ್ತಿರಬಹುದು) ದೋಣಿಯನ್ನು ಒದೆಯಬಹುದು. ತೋರಿಕೆಗೆ ನೀರಪಾತ್ರೆ ವಿಸ್ತಾರವಿದ್ದರೂ ಸಣ್ಣಪುಟ್ಟ ಕವಲುಗಳು ಪ್ರತಿ ತಿರುವಿನಲ್ಲೂ ಸ್ವಾಗತಿಸುವಂತೆ ಕಾಣುತ್ತಿದ್ದರೂ ಚುಕ್ಕಾಣಿ ಹಿಡಿದವನು ಮೈಯೆಲ್ಲಾ ಕಣ್ಣಾಗಿ ನೀರನ್ನು

ದೃಷ್ಟಿಸುತ್ತಾ ವಿಚಿತ್ರ ಜಾಡುಗಳಲ್ಲಿ ಅದೂ ಬಲು ನಿಧಾನವಾಗಿ ದೋಣಿ ಚಲಾಯಿಸುತ್ತಾನೆ. ಅವನಿಗೆ ಹೆಚ್ಚಿನ ಕಣ್ಣಾಗಿ ಎದುರು ಮೂಕಿಯ ಮೇಲೂ ಒಬ್ಬ ನಿಂತು ಅವಶ್ಯ ಬಂದಾಗ ನಿರ್ದೇಶನ ಕೊಡುತ್ತಿದ್ದದ್ದು ಪರಿಸ್ಥಿತಿಯ ಗಭೀರತೆಯನ್ನು ಬಿಂಬಿಸುವಂತಿತ್ತು. ತಮಾಷೆಗೆ ಹೇಳುತ್ತೇನೆ, ಉಡ್ಪಿ ಎಕ್ಸ್‌ಪ್ರೆಸ್‌ನ ಎದುರು ಬಾಗಿಲ ಅಂಚಿನಲ್ಲಿ ನೇತುಬಿದ್ದ ಹುಡುಗ ಒಂದೊಂದು ಲಾರಿ ಬಸ್ಸುಗಳನ್ನು ಹಿಂದಿಕ್ಕುತ್ತಿರುವಾಗ "ರೈಟ್‌ರೈಟ್" ಕೊಟ್ಟಹಾಗೆ!

ದಿಬ್ಬ, ದಿಬ್ಬಗಳಲ್ಲೂ ಎಷ್ಟೊಂದು ವೈವಿಧ್ಯ. ಶುದ್ಧ ಬಂಡೆಯಲ್ಲದಲ್ಲಿ ಪ್ರತಿ ನಡುಗಡ್ಡೆಗೂ ದಟ್ಟ ಕಾಂಡ್ಲಾಪೊದರುಗಳ ಪೌಳಿ, ಹಿನ್ನೆಲೆಯಲ್ಲಿ ಆಕಾಶ ಎತ್ತಿ ಹಿಡಿದ ಮರಗಳು. ಹೊರ ನೋಟಕ್ಕೆ ಎಲ್ಲವೂ ದಟ್ಟ ಹಸಿರಂಗಿ ತೊಟ್ಟಿದ್ದರೂ ಕೆಲವಕ್ಕೆ ಸಮತಳದ ನೆಲ, ಕೆಲವು ಕಡಿದಾದ ಗುಡ್ಡೆ. ಅಲ್ಲಿ ಇಲ್ಲಿ ಹಸಿರು ಹರಿದು ಮಲೆತು ನಿಲ್ಲುವ ಕಲ್ಲಮೊನಚುಗಳು. ತೀರಾ ವಿರಳವಾಗಿ ಕಾಣುತ್ತಿದ್ದ ಹದ್ದು, ನೀರಕಾಗೆಗಳನ್ನು ಬಿಟ್ಟರೆ ಬೇರಿನ್ಯಾವ ಚಲನಶೀಲ ಜೀವವೈವಿಧ್ಯವನ್ನು ಅವು ಬಿಟ್ಟುಕೊಡುತ್ತಿರಲಿಲ್ಲ. ಅಥವಾ ನಮ್ಮ ದೋಣಿಯ ಡೀಸಲ್ ಇಂಜಿನ್ನಿನ ಗೊಟ ಗೊಟ ಶಬ್ದ ಇರುವವನ್ನು ಪ್ರಕಟವಾಗಲು ಬಿಡುತ್ತಿರಲಿಲ್ಲ ಎನ್ನಬಹುದೇನೋ! ಸುಮಾರು ಒಂದು ಗಂಟೆಯ 'ವಿಹಾರ'ದ ಕೊನೆಯಲ್ಲಿ ನಾವು ಬಲು ವಿಸ್ತಾರದ ನೀರಹರಹಿನ ನಡುವಣ ಪುಟ್ಟ ದ್ವೀಪ – ಜಾಲಿಬಾಯ್, ಸಮೀಪಿಸಿದೆವು. ನಮ್ಮ ದೊಡ್ಡ ದೋಣಿಗಳು ತುಸು ದೂರದಲ್ಲೇ ಲಂಗರು ಇಳಿಸುತ್ತಿದ್ದಂತೆ ಅದುವರೆಗೆ ನಮ್ಮ ಬೋಟುಗಳ ಬಾಲಂಗೋಚಿಗಳಂತಿದ್ದ ಪುಟ್ಟ ಎರಡು (ಔಟ್‌ಬೋರ್ಡ್ ಎಂಜಿನ್ ಇದ್ದವು) ದೋಣಿಗಳು ಬಂಧನ ಕಳಚಿಕೊಂಡು, ಜೀವದಳೆದವು. ಪುಟ್ಟದೋಣಿಯ ತಳದ ನಡುವಿನ ಅಂಶ ಪಾರದರ್ಶಕವಾಗಿತ್ತು. ಆ ಕಂಡಿಯನ್ನು ಸುತ್ತುವರಿದಂತೆ ಆರೆಂಟು ಜನರನ್ನಷ್ಟೇ ಕೂರಿಸಿಕೊಂಡು ಅದು ಸವಾರಿ ಹೊರಡುತ್ತಿತ್ತು. ತುಸುವೇ ಸುತ್ತು ಬಳಸಿನ ದಾರಿಯಲ್ಲಿ ನೀರ ಆಳದ ಜೀವಾಜೀವಲೋಕವನ್ನು ತೋರಿಸುತ್ತಾ ಸಾಗಿತು. ಒಂದೆರಡು ಕಡೆಯಂತೂ ಹವಳದ ವಿಶಿಷ್ಟ ರಚನೆಯ ವಿವರ ವೀಕ್ಷಣೆಗಾಗಿ ನಿಂತು ಸಹಕರಿಸಿತು. ದೋಣಿಚಾಲಕ ಸಾಕಷ್ಟು ಮಾಹಿತಿದಾರನೂ ಇದ್ದ. ಯಾವುದೇ ರೀತಿಯಲ್ಲಿ ನೇರ ನೀರಿಗಿಳಿದು ಪರಿಸರದ ಪರಿಚಯ ಮಾಡಿಕೊಳ್ಳಲಾಗದವರಿಗೆ, ಗುಂಪಿನಲ್ಲಿ ಅಭಿಪ್ರಾಯಗಳ ವಿನಿಮಯ ಮಾಡುತ್ತ ಸಾಗರತಳ ಶೋಧಿಸಬಯಸುವವರಿಗೆ ಇದು ಬಲು ಸಹಕಾರಿ. ಐದು ಮಿನಿಟಿನ ಸವಾರಿಯ ಕೊನೆಯಲ್ಲಿ ದೋಣಿ ನೇರ ಪುಳಿನತೀರಕ್ಕೇ ಮೂತಿ ತೂರಿ ನಮ್ಮನ್ನು ಜಾಲಿಬಾಯ್ನಲ್ಲಿ ಇಳಿಸಿತು.

ಜಾಲಿಬಾಯ್ಸ್

ಕಂತು ಕಂತುಗಳಲ್ಲಿ ದೊಡ್ಡದೋಣಿಯೆರಡರ ಜನರೆಲ್ಲ ದ್ವೀಪಕ್ಕೆ ಖಾಲಿಯಾಗುತ್ತಿದ್ದಂತೆ ದ್ವೀಪದ ಹೆಸರು ನಿಜಕ್ಕೂ ಅನ್ವರ್ಥವಾಯ್ತು; ಜಾಲಿಬಾಯ್‌ನಲ್ಲಿ ಎಲ್ಲರೂ ಜಾಲಿಬಾಯ್‌ಗಳೇ (ಹೋಯ್ ಮಾರಾಯ ಲಿಂಗಬೇಧದ ಮಾತೆತ್ತಬೇಡಾ ನನ್ನುದ್ದೇಶ ಹುಡುಗುತನದ ಬಗ್ಗೆ ಅಂದರೆ ಕೇವಲ ಹರಯದ ಬಗ್ಗೆ ಹೇಳುತ್ತಿದ್ದೇನೆ)! ದೇಶ, ವಯಸ್ಸು ಬೇಧವಿಲ್ಲದೆ ಎಲ್ಲರೂ ನೀರಿಗೆ ನುಗ್ಗುವವರೇ. ಆದರೆ ಆನಂದಿಸುವ ಪರಿಯಲ್ಲಿ ಸಂಸ್ಕಾರಗಳ ಬೇಧವನ್ನು ಸುಲಭವಾಗಿ ಗುರುತಿಸಬಹುದಿತ್ತು. ಮರಳ ದಂಡೆಯಲ್ಲಿ ಮೂರ್ನಾಲ್ಕು ದೊಡ್ಡ ಛತ್ರಿ ನಿಲ್ಲಿಸಿ ನೆರಳು ಕಲ್ಪಿಸಿದ್ದರು. ಅದರಲ್ಲೇ ಒಂದರಲ್ಲಿ ಒಂದಿಬ್ಬರು ಇಲಾಖೆಯ ಜನ ಸ್ವಲ್ಪ ಸ್ನಾರ್ಕೆಲಿಂಗ್ ಕಿಟ್ ಬಳಸುವವರಿಗೆ ಉಚಿತವಾಗಿ ಕೊಡುತ್ತಿದ್ದರು. ಇಬ್ಬರು ನಾವಿಕರು ಸ್ನಾರ್ಕೆಲ್ ಕಟ್ಟಿಕೊಂಡ ಅನನುಭವಿ ಉತ್ಸಾಹಿಗಳನ್ನು ಎಳೆದುಕೊಂಡು ಹೋಗಿ ಹವಳದ ದರ್ಶನ ಮಾಡಿಸುತ್ತಿದ್ದರು. ಸ್ವತಂತ್ರ ಉಮೇದುವಾರರಿಗೆ ಎಚ್ಚರಿಕೆಯ ಮಾತುಗಳನ್ನು ಆಗಾಗ ಹೇಳುತ್ತಿದ್ದರು. ಸುನಾಮಿಯನಂತರ ಜಾಲಿ ಬಾಯ್ ಸುತ್ತಣ ನೀರಲ್ಲಿ ಅಪಾಯಕಾರೀ ಅಂತಃ ಸೆಳೆತಗಳು, ಸುಳಿಗಳು ಇವೆ. ಅಭಯ ಸ್ವಲ್ಪ ದೂರವೇ ಸುತ್ತಿ ಸುಳಿದು ಬಂದ. ಇನ್ನೂ ಹೆಚ್ಚು ನುಗ್ಗಲು ಧೈರ್ಯ ಸಾಲದಾಯ್ತಂತೆ. ಉಪಾಧ್ಯರಿಗೆ ತೌರೂರು ಸಾಲಿಗ್ರಾಮದಲ್ಲಿ ಸಮುದ್ರದೀಜು ಹಿತ್ತಲಾಟ. ಹಾಗಾಗಿ ಹೆಚ್ಚು ಉಮೇದು ತೋರದೆ ನಮ್ಮಿಬ್ಬರೊಡನೆ (ಹೆಚ್ಚಿನ ಎಲ್ಲಾ ಪ್ರವಾಸಿಗರೊಡನೆ) ಸೊಂಟ ಮಟ್ಟದಿಂದ ಕಂಠ ಮಟ್ಟದವರೆಗಿನ ನೀರಿನಲ್ಲೇ ಉಳಿದುಬಿಟ್ಟರು. ಆದರೆ ನೀರೇನ್ ಬಹಳ ಹೊತ್ತು ನಾಪತ್ತೆ. ನಮಗೆ ಆತಂಕ ಬಲಿಯುವುದರೊಳಗೆ ವಾಪಾಸೇನೋ ಬಂದರು. ಆದರೆ ಅವರು ಮುಖ ಅಡಿ ಮಾಡಿಕೊಂಡು ಹಗುರಾಗಿ ಈಜುತ್ತ ಹೋದಂತೆ ಅರಿವಿಲ್ಲದಂತೆ ನೀರಸೆಳವಿನಲ್ಲಿ ದೂರ ತೇಲಿದ್ದರಂತೆ. ತಿಳಿದು, ವಾಪಾಸಾಗಲು ಪ್ರಯತ್ನಿಸುವಾಗ ನೀರಸೆಳವು ಬಿಟ್ಟುಕೊಡಲಿಲ್ಲವಂತೆ. ಧೃತಿಗೆಡದೆ, ನೀರಮೇಲ್ಮೈ ನೋಟದಲ್ಲಿ ಸೆಳವಿನ ಇನ್ನೊಂದೇ ಕೊನೆಯಲ್ಲಿ ದ್ವೀಪಕ್ಕೆ ಮರಳುವ ಸಾಧ್ಯತೆ ಅಂದಾಜಿಸಿ, ಬಂದದ್ದನ್ನು ಆನಂದಕ್ಕೇ ಅನುಭವಿಸುತ್ತ ಮರಳಿದ್ದರು. 'ಬದುಕುಳಿದರೆ ಸಾಹಸ, ಇಲ್ಲವಾದರೆ ದುರಂತ' ಎಂದಾಗುವ ಸ್ಥಿತಿ ಇನ್ನೊಮ್ಮೆ ತಂದುಕೊಳ್ಳಬಾರದು ಎಂದು ಎಲ್ಲರೂ ಮನನ ಮಾಡಿಕೊಂಡೆವು.

ಇಲಾಖೆಯ ಕುರಿತಾಡುವಾಗ ಮೊದಲಲ್ಲೇ 'ಶಿಸ್ತಿನಿಂದ' ಅಂತ ಹೇಳಿದ್ನಲ್ಲಾ? ಹೌದು, ಆಶ್ಚರ್ಯಕರವಾಗಿ ಇಲಾಖೆ ಇಲ್ಲಿ ಪರಿಸರ ಸಂರಕ್ಷಣೆಯ ನಿಯಮವನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರುತ್ತಿತ್ತು. ಜಾಲಿಬಾಯ್‌ಗೆ ಹೋಗುವ ಎಲ್ಲಾ ಪ್ರವಾಸಿಗರ ಚೀಲ, ಬಾಟಲಿ ಮುಂತಾದ ತಿನ್ನು-ಕುಡಿ ಸಾಮಾನು ಸಾಗಣೆ ಪರಿಕರಗಳು ಪರಿಸರ ಸ್ನೇಹಿಗಳಾಗಿರಲೇಬೇಕಿತ್ತು. ಇದರ

ಅರಿವಿಲ್ಲದೇ ಬಂದವರಿಗೆ ಬಳಕೆಗೆ ಬದಲಿ ವ್ಯವಸ್ಥೆಯಾಗಿ ಇಲಾಖೆಯೇ ಸೆಣಬಿನ ಚೀಲಗಳನ್ನು ಕೊಡುತ್ತಿತ್ತು. ಅನಿವಾರ್ಯವಾದಲ್ಲಿ ಬಳಸಿ ಎಸೆದುಬಿಡಬಹುದಾದ ಪ್ರತಿ ಪ್ಲ್ಯಾಸ್ಟಿಕ್ ಬಾಟಲಿಗೂ ತಲಾ ರೂ ಹತ್ತರ ಠೇವಣಿ ಇಡುವುದೂ ಕಡ್ಡಾಯ ಮಾಡಿದ್ದರು. ಸಹಜವಾಗಿ ಪ್ರತಿ ತಂಡವೂ ಮರಳಿ ದಕ್ಕೆ ಸೇರುವಲ್ಲಿಯವರೆಗೆ ತಮ್ಮ ಪಾನೀಯಗಳಿಗಿಂತಲೂ ಜತನವಾಗಿ ಚೀಲ, ಬಾಟಲಿಗಳನ್ನು ಕಾಪಾಡಿಕೊಳ್ಳುತ್ತಿದ್ದುದನ್ನು ನಾವು ಕಂಡೆವು! ಜಾಲಿಬಾಯಲ್ಲಿದ್ದ ಏಕೈಕ ಮಾನವರಚನೆ ಸ್ತ್ರೀ ಪುರುಷರಿಗೆ ಪ್ರತ್ಯೇಕ ಶೌಚಗೃಹಗಳು. ಉದ್ದೇಶ ಒಳ್ಳೆಯದೇ ಆದರೂ ಸೂಕ್ಷ್ಮ ಕಳೆದುಕೊಂಡಂತೆ ಅವೆರಡನ್ನು ಪರಸ್ಪರ ಸುಮಾರು ಐವತ್ತಡಿ ದೂರದಲ್ಲಿ ಮಾಡಿ, ಕೇಂದ್ರದಲ್ಲಿ ಎತ್ತರದ ನೀರ ಟ್ಯಾಂಕ್ ಮಾಡಿ, ಇನ್ನೊಂದಷ್ಟು ಜಾಗದಲ್ಲಿ ಟ್ಯಾಂಕಿಗೆ ಸಮುದ್ರ ನೀರನ್ನು ತುಂಬಲು ಡೀಸೆಲ್ ಪಂಪ್ ತತ್ಸಂಬಂಧಿ ಕೊಳಾಯಿಜಾಲ ಎಲ್ಲ ಹರಡಿ ಪುಟ್ಟ ದ್ವೀಪಕ್ಕೆ ಶೌಚ ಒಂದು ಕಣ್ಣಕಿಸರಾಗಿ ನಿಂತಿತ್ತು. ಸಾಲದ್ದಕ್ಕೆ ಅವು ಸುನಾಮಿಗೆ ಸಿಕ್ಕು ಇಂದು ತೀರಾ ಜೀರ್ಣಾವಸ್ಥೆಯಲ್ಲೂ ಇತ್ತು. ರಿಪೇರಿ ಕೆಲಸ ಯಾರೂ ಯೋಚಿಸಿದಂತೆ ಕಾಣಲಿಲ್ಲ. ನಾವು ತಿಳಿದ 'ಸರಕಾರೀ ಬುದ್ಧಿ' ಖಂಡಿತವಾಗಿಯೂ ಇನ್ನೂ ದೊಡ್ಡ ಅಭಿವೃದ್ಧಿ ಯೋಜನೆಯನ್ನು ಜಾಲಿ ಬಾಯ್‌ಗೆ ಹೊಸೆದಿರುತ್ತದೆ. ಸದ್ಯದ ತುರ್ತಿಗೆ ಬಡ ದಿನಗೂಲಿಯೊಬ್ಬ ತಲೆಹೊರೆಯಲ್ಲಿ ಆಗೊಮ್ಮೆ ಈಗೊಮ್ಮೆ ಸಮುದ್ರದ ನೀರನ್ನು ಬಾಲ್ದಿಯಲ್ಲಿ ಹೊತ್ತು ಶೌಚಶುದ್ಧಿ ಮಾಡಿ ಜನಬಳಕೆಗೆ ಒದಗಿಸುತ್ತಿದ್ದ. ಇತರ ಸಮಯದಲ್ಲಿ ಪಾಪ, ಅದೇ ಕೂಲಿ, ನಿರ್ಬಂಧಗಳ ನಡುವೆಯೂ ಜನ ಕಾವಲು-ಕಣ್ಣು ತಪ್ಪಿಸಿ ಕಸ ಎಸೆಯುವುದರ ವಿರುದ್ಧ ಪೊಲಿಸ್ ಕೆಲಸವನ್ನು ಹಾಗೂ ಎಸೆದ ಕಸ ಹೆಕ್ಕುವುದನ್ನೂ ಮಾಡುತ್ತಿದ್ದ! ಸಂಜೆ ನಾವು ಮರಳುವ ವೇಳೆಗೆ ದೋಣಿಗೇರುವಲ್ಲಿ ಆತನ ದೊಡ್ಡ ಕಸದ ಗೋಣಿ ನಮ್ಮ ನಾಗರಿಕತೆಯನ್ನು ಅಣಕಿಸುವಂತೆ ಜೊತೆಗೊಟ್ಟಿತು.

ಸಾಕಷ್ಟು ನೀರಾಟ ಮುಗಿಸಿ, ನಾವು ದ್ವೀಪದ ಹಿಮ್ಮೈಗೆ ಹೋಗಿ ಸುನಾಮಿ ಅವಶೇಷದ ಮರದ ಬೊಡ್ಡೆಯೊಂದರ ಮೇಲೆ ವಿಶ್ರಮಿಸಿದೆವು. ನಾವು ಒಯ್ದಿದ್ದ ಎಮ್.ಟಿ.ಆರ್ ಸಿದ್ಧ ತಿನಿಸುಗಳ ಪ್ಯಾಕೇಟ್ ಖಾಲಿ ಮಾಡಿ (ದಿನಗೂಲಿಗೆ ಕೆಲಸ ಕೊಡಲಿಲ್ಲ!), ಹರಡಿಬಿದ್ದ ಒಂದೇ ಸಮುದ್ರದ ವೈವಿಧ್ಯಮಯ ಧಾರೆಗಳನ್ನು ನೋಡುತ್ತಾ ಮೈಮರೆತೆವು. ಪಾತ್ರೆಯ ಆಳ, ಕೊರಕಲುಗಳಿಗನುಗುಣವಾಗಿ ಸಮುದ್ರದ 'ನಿಂತ ನೀರಿನಲ್ಲೂ' ಇದ್ದ ಅಸಂಖ್ಯ ಹರಿವುಗಳು ಕಾಣುತ್ತಿದ್ದವು. ನೀರನೀಲಿಮೆಯಲ್ಲಿ ಅಸಂಖ್ಯ ಛಾಯೆಗಳು, ಕೆಲವೊಮ್ಮೆ ಉಬ್ಬು ಚಿತ್ರದ ಭಾಸಗಳು. ಎದುರು ದ್ವೀಪದ ಮಳಲತೀರದ ಬಿಳಿ, ಕಾಡಹಸಿರು, ಬೀಸುವ ಗಾಳಿ, ಹೆಚ್ಚಾಗಿ ಉರುಳುವ ಅಲ್ಲೊಮ್ಮೆ ಇಲ್ಲೊಮ್ಮೆ ಮಗುಚುವ ಅಲೆ ಪೂರ್ಣ ಕಣ್ಣು ತೆರೆದೂ ನಮ್ಮನ್ನು ಧ್ಯಾನಸ್ಥ ಸ್ಥಿತಿಗೆ ಒಯ್ಯುತ್ತಿತ್ತು ಎಂದರೆ ಅತಿಶಯೋಕ್ತಿಯಲ್ಲ. ನಮ್ಮೆಲ್ಲ ಭೌತಿಕ ಚಟುವಟಿಕೆಗಳ ಸಾಮಾನ್ಯ ತಳ ಸಮುದ್ರಮಟ್ಟ. ನಮ್ಮ ಅರಿವಿಗೆ ಬರುವ ಎಲ್ಲವೂ ಅಲ್ಲಿಂದ ಸೇರುತ್ತ ಹೋಗುತ್ತದೆ. ಉದಾಹರಣೆಗೆ ಸಮುದ್ರ ತಟದಿಂದ ಒಂದೂವರೆ ಗಂಟೆ ಒಳನಾಡಿನತ್ತ ಪ್ರಯಾಣಿಸಿ ಅರವತ್ತು ಕಿಮೀ ದೂರದ ಬೆಳ್ತಂಗಡಿ ತಲಪಿದರೂ ಸ್ಮರಣೆ ಸಮುದ್ರದ್ದೇ; ಬೆಳ್ತಂಗಡಿಯ ಎತ್ತರ ಸಮುದ್ರ ಮಟ್ಟದಿಂದ ಸುಮಾರು ಮುನ್ನೂರು ಅಡಿ. ಆದರೆ ಅದೇ ನಾವು ಸಮುದ್ರಕ್ಕಿಳಿದರೆ ಎಲ್ಲಾ ಋಣಾತ್ಮಕ! ನೀರೊಳಗೆ ನಾವು ಶಿಖರದಿಂದ ತೊಡಗುತ್ತೇವೆ. ನಮ್ಮ ವಿಜಯದ ಲಕ್ಷ್ಯ ಕಣಿವೆಯ ಆಳ. ಸಣ್ಣ ಪುಟ್ಟ ಮುಳುಗಿಗೆ ನಮ್ಮ ಶ್ವಾಸಬಂಧ ಸಾಕು. ಹೆಚ್ಚಿನದಕ್ಕೆ ಬೇಕೇ ಬೇಕು ಪ್ರಾಣವಾಯುವಿನ ಬೆನ್ನ-ಬಲ. ನಮ್ಮ ಅದ್ವಿತೀಯ ಶಿಖರ ಎವರೆಸ್ಟನ್ನೂ ಮುಳುಗಿಸುವ ಆಳ ಸಾಗರದಲ್ಲಿದೆ. ಭೂಮಿಯ ಹೊರಮೈಯ ಮೂರನೇ ಎರಡಂಶವನ್ನು ಆವರಿಸಿರುವ ಈ ನೀರಿನ ಆಳ, ಹರಹು, ಊಹಾತೀತ ಜೀವಾಜೀವ ವೈವಿಧ್ಯಗಳ ಕಲ್ಪನೆ ಮತ್ತು ವಿಚಾರವಿನಿಮಯಗಳ ಕಡಲಲ್ಲಿ ಕಳೆದುಹೋದವರನ್ನು ವಾಪಾಸು ಹೋಗಲೇ ಬೇಕಾದ ಬೋಟಿನ ಕರೆ ಎಚ್ಚರಿಸಿತು!

ಮತ್ತೊಮ್ಮೆ ಪುಟ್ಟ ದೋಣಿಯಲ್ಲಿ ಇನ್ನೊಂದಷ್ಟು ಹವಳದ ರಚನೆಗಳನ್ನು ನೋಡಿ, ದೊಡ್ಡ ದೋಣಿಗೇರಿದೆವು. ಬಂದ ನಡೆಯಲ್ಲೇ ಮರಳುತ್ತಿದ್ದಂತೆ ಮೋಡದ ಎಲ್ಲೆಲ್ಲಿನ ಸೆಳಕುಗಳು ಒಗ್ಗೂಡಿ, ತೆಳುವಾಗಿ ಬಣ್ಣ ಬದಲಿಸಿ ಸಣ್ಣದಾಗಿ ಹನಿಯತೊಡಗಿತು. ಹೋಗುವಾಗಿನ ನಮ್ಮ ನಾಗರಿಕ ವೇಷಭೂಷಣಗಳು ಮರಳುವಾಗ (ಹ್ಯಾವ್ಲಾಕಿನ ಹಾಗೇ) ಹೆಚ್ಚು ಸಹಜತೆಗೆ ಪರಿವರ್ತನೆಗೊಂಡಿತ್ತು. ನಾವಂತೂ ಬದಲಿ ಬಟ್ಟೆ ಮುಂತಾದ ವ್ಯವಸ್ಥೆಗಳನ್ನು ಮಾಡಿಕೊಳ್ಳದೇ ಹೋಗಿದ್ದರಿಂದ ಹಾಗೇ ಚಂಡಿ ಬಟ್ಟೆಯಲ್ಲೇ ಇದ್ದೆವು. ವಾತಾವರಣದ ಬಿಸಿ ಇನ್ನೇನು ನಮ್ಮನ್ನು ಸಚೇಲ ಒಣಗಿಸಿಬಿಡುತ್ತದೆ ಎನ್ನುವಾಗ ಬಂದ ಪಿರಿಪಿರಿ ಮಳೆ ನಮಗೆ ಹೊಸ ಅನಾನುಕೂಲವನ್ನೇನೂ ತರಲಿಲ್ಲ. ಹಾಗೇ ನೆನೆದುಕೊಂಡು ಬೈಕ್ ಸೇರಿದೆವು. ಬೈಕೇರಿ ಕುಟೀರಕ್ಕೆ ಮರಳಿ ಶುದ್ಧವಾದೆವು.

ನಾವು ಬೆಳಿಗ್ಗೆ ನಡೆದು ಹೋಗಿ ನೋಡಿದ್ದ ಕಿನಾರೆಯನ್ನು ಇನ್ನಷ್ಟು ವಿವರಗಳಲ್ಲಿ ನೋಡಲು ಬೈಕೇರಿ ಮಾರ್ಗದಲ್ಲೇ ಹೋದೆವು. ಕಿನಾರೆಗೂ ಸ್ವಲ್ಪ ಮೊದಲು ದ್ವೀಪಸ್ತೋಮದ ಕುಡಿನೀರಿನ ವ್ಯವಸ್ಥೆಯ ಒಂದು ಸಣ್ಣ ಅಂಗವನ್ನು ಕಂಡೆವು. ಆ ದರ್ಶನದೊಡನೆ ರಹಮತ್ ತರೀಕೆರೆಯವರದೋ ಕೆಟಿ ಗಟ್ಟಿಯವರದೋ ಅಂಡಮಾನಿನ ಪುಸ್ತಕಗಳ ನೆನಪು ಸ್ವಲ್ಪ ತಿಳಿಯಾಯ್ತು. ಇಡಿಯ ದ್ವೀಪ ಸ್ತೋಮ ಹವಳದ ರಚನೆಗಳೇ ಆದ್ದರಿಂದ ಮುಖ್ಯ ಭೂಮಿಯ ಸ್ತರಗಳ ಲೆಕ್ಕ ಇಲ್ಲಿಲ್ಲ. ಸಹಜವಾಗಿ ಮಳೆನೀರು ಹಿಡಿದಿಡುವ, ಒರತೆ ಮೂಡುವ, ಸಿಹಿನೀರ ತೊರೆ ಎಲ್ಲಾ ಇಲ್ಲಿ ತೀರಾ ಆಶ್ಚರ್ಯದ ಸಂಗತಿಗಳು! (ಇಡೀ ದ್ವೀಪ ಸ್ತೋಮಕ್ಕೆ ಎಲ್ಲೋ ಒಂದು ಸಿಹಿನೀರ, ಪುಟ್ಟ ತೋಡು ಇದೆಯೆಂದು ಆಗಲೇ ಹೇಳಿದ್ದೇನೆ. ಉಳಿದಂತೆ

ಸ್ವಾಭಾವಿಕ ಹೊಂಡ, ತೋಡಿದ ಭಾವಿಗಳು ಕೊಡುವುದೇನಿದ್ದರೂ ಸವಳು ನೀರು (=hard water) ಅಥವಾ ಉಪ್ಪು ನೀರು. ಮುಖ್ಯ ಭೂಮಿಯಲ್ಲಿ ಮಾಡಿದಂತೆ ಇಲ್ಲಿ ಆಡಳಿತ ನೆಲ ಕಂಡಲ್ಲೆಲ್ಲ ಬಿಡಾರ ಹೂಡುವ ಕಲ್ಪನೆ ಕಟ್ಟಿಕೊಳ್ಳುವಂತಿಲ್ಲ. ಪ್ರತಿ ನೆಲವನ್ನು ಮೊದಲು ಜಲ–ಸ್ವತಂತ್ರವನ್ನಾಗಿಸುವ ಕೆಲಸ ಮಾಡಿದರಷ್ಟೇ ವಿಸ್ತರಣೆ ಸಾಧ್ಯ. (ಕೊಳಾಯಿ ಸಾಲೆಳೆಯಲು ಕಾವೇರಿ ಇಲ್ಲ, ತಿರುಗಿಸಲು ನೇತ್ರಾವತಿ ಇಲ್ಲ!) ಈಚಿನ ದಿನಗಳಲ್ಲಿ ಶ್ರೀಪಡ್ರೆಯವರು ತಮ್ಮ ಅವಿರತ ಶೋಧನೆ, ನಿರೂಪಣೆಗಳಿಂದ ನಮ್ಮಲ್ಲಿ ಮೂಡಿಸಿದ ಜಲಜಾಗೃತಿಯನ್ನು ಇಲ್ಲಿನ ಆದಿವಾಸಿಗಳು ಬಹಳ ಹಿಂದೆಯೇ ಸಹಜವಾಗಿ ಆದರೆ ಆಂಶಿಕವಾಗಿ ಕಂಡುಕೊಂಡಿದ್ದರಂತೆ. ಆದರೆ ಆ ಸೂಕ್ಷ್ಮಗಳನ್ನು ಗಮನಿಸುವ, ದಾಖಲಿಸುವ, ಬೆಳೆಸುವ ಸಮಾಜಶಾಸ್ತ್ರಿಗಳ ತಾಳ್ಮೆ ಆಧುನಿಕತೆ ಹೇರುವ ಆಡಳಿತಕ್ಕೆ ಇದ್ದಂತಿಲ್ಲ. ಈ ಪತ್ರದ ಮೊದಲಲ್ಲಿ ನಾನು ಪ್ರಸ್ತಾಪಿಸಿದ ಒತ್ತಿನೆಣೆಯ ಪ್ರಸಂಗ ನೆನಪಿಸಿಕೋ. ವಿಗ್ರಹ ಸ್ಥಾಪನೆ ಚಾರ್ಲೀಚಾಪ್ಲಿನ್‍ಗೆ ಗೌರವ ಅಲ್ಲ, ಸಮಾಜದ ಬಯಕೆ ಅಲ್ಲ, ಪರಿಸರದ ಅಗತ್ಯವಲ್ಲ, ಸರಕಾರದ ಹೇರಿಕೆ ಅಲ್ಲ, ಕನಿಷ್ಠ ಕಾನೂನಿನ ಮಾನ್ಯತೆಯನ್ನೂ ಮೀರಿದ ಅಸಾಂಗತ್ಯ ಅಲ್ಲಿತ್ತು. ಮನುಷ್ಯ ಕಾಲೂರದ ದ್ವೀಪಗಳು ಅಂದರೆ ನೆಲ ಇಲ್ಲಿ ಇನ್ನೂ ಎಷ್ಟೋ ಇದೆ ಮತ್ತವಕ್ಕೆಲ್ಲ ಹರಡಿಕೊಳ್ಳಲು ನಮ್ಮಲ್ಲಿ ಎಷ್ಟೂ ಜನಸಂಖ್ಯೆ ಇದೆ ಎಂಬ ಭ್ರಮೆ ಬೇಡ. ಲಕ್ಷಾಂತರ ವರ್ಷಗಳ ಪ್ರಾಕೃತಿಕ ರೂಢಿಯನ್ನು ಕೇವಲ (ಸ್ವಾತಂತ್ರ್ಯ ಬಂದು) ಅರವತ್ತೆರಡರ ಎಳಸಿನ ಕೇವಲ ಸಾಮಾಜಿಕ ಆಡಳಿತ ಅವಸರದಲ್ಲಿ ನಾಗರಿಕಗೊಳಿಸುವ ಹುಚ್ಚು ಸಾಹಸಕ್ಕೆ ತೊಡಗದಿರಲಿ. ನಮ್ಮಲ್ಲೇ ಕಾಣುತ್ತಿದೆ – ಜೀವಾಜೀವಗಳ ಪ್ರಾಮಾಣಿಕ ಸರ್ವೇಕ್ಷಣೆಯೇ ಆಗದೆ ನೀರಾವರಿ, ಜಲವಿದ್ಯುತ್, ಗಣಿಗಾರಿಕೆಯೇ ಮೊದಲಾದ ಪ್ರಾಕೃತಿಕ ಅನಾಚಾರಗಳು ಸಾರೋದ್ಧಾರ. ಪರಮಾಣು, ಉಷ್ಣ ವಿದ್ಯುತ್ ಸ್ಥಾವರಗಳು, ಪೆಟ್ರೋದಿಂದ ತೊಡಗಿ ಅನೇಕಾನೇಕ ರಾಸಾಯನಿಕ ವಿಷೋತ್ಪನ್ನಗಳ ಹೇರಿಕೆ ಅವಿಚ್ಛಿನ್ನ. ಅಂಡಮಾನ್ ನಿಕೋಬಾರ್ ದ್ವೀಪಸ್ತೋಮವಾದರೂ ಇಂಥ ಗೊಂದಲದ ಬೀಡಾಗದಿರಲಿ ಎಂಬ ಹಾರೈಕೆಯೊಡನೆ – ಶಾಂತಿ, ಶಾಂತಿ, ಶಾಂತಿಃ

ಅಶೋಕ

ಪತ್ರ ಐದು

ಪ್ರಿಯ ಆನಂದಾ,



ಆದ್ಯತೆಯಲ್ಲಿ ಕಳೆದ ವಾರ ಯಕ್ಷಗಾನ ಗೋಷ್ಠಿ ಬಂದು ನಿನ್ನ ಕಥೆ ತಡೆ ಹಿದಿದಿದ್ದೆ. ಅಲ್ಲಿ ವಿಡಿಯೋ ಚಿತ್ರಗಳನ್ನು ಅಳವಡಿಸುತ್ತಾ ಅಭಯ ನನಗೆ 'ಯೂಟ್ಯೂಬ್ ಕಾರ್ಯಾಚರಣೆಯ ಕ್ರಮ ವಿವರಿಸಿದ್ದು ನೆನಪಿಗೆ ಬರುತ್ತದೆ. ಹಿಂದೆಲ್ಲ ನಾನು ಯೂಟ್ಯೂಬಿನಲ್ಲಿ ಬೇಕಾದ ಚಿತ್ರ ಆರಿಸಿಕೊಂಡು, ಕ್ಲಿಕ್ ಮಾಡುತ್ತಿದ್ದೆ. ಮತ್ತದು ಚೂರುಚೂರೇ ಲೋಡಾಗುತ್ತ ಚರೆಪರೆಗುಟ್ಟುತ್ತಾ ತುಂಡು ತುಂಡಾದ ಟೇಪಿನಂತೆ ತಡವರಿಸುತ್ತಾ ಸಾಗುವ ಉದ್ದಕ್ಕೂ ಸಹಿಸಿಕೊಳ್ಳುತ್ತಿದ್ದೆ. ಎಷ್ಟೋ ಬಾರಿ ಅರ್ಧದಲ್ಲೇ ಸ್ವಾರಸ್ಯ ಕಳೆದುಕೊಂಡು ರದ್ದುಪಡಿಸಿದ್ದೂ ಇದೆ. ಇಲ್ಲವಾದರೆ ಒಮ್ಮೆ ಪೂರ್ಣ ಲೋಡಾದ ಮೇಲೆ ರೀಪ್ಲೇ ಮಾಡುತ್ತಿದ್ದೆ. ಅಭಯ ಹೇಳಿದ, "ಅಪ್ಪಾ ನೀವು ಒಮ್ಮೆ ಕ್ಲಿಕ್ ಮಾಡುವುದು ಸರಿ. ಮತ್ತೆ ಪಾಜ್ ಕ್ಲಿಕ್ ಮಾಡಿ. ಮತ್ತದರಲ್ಲೇ ಕಾಣುವ ಚಿತ್ರದ ಅವಧಿಯವರೆಗೆ ಅದನ್ನು ಕೆಳಸಾಲಿಗೆ ಸಂಕ್ಷಿಪ್ತಗೊಳಿಸಿಬಿಡಿ ಮತ್ತು ಬೇರೆ ಕೆಲಸದಲ್ಲಿ ತೊಡಗಿಕೊಳ್ಳಬಹುದು. ಪ್ರದರ್ಶನ ನಿಂತರೂ ಲೋಡಿಂಗ್ ನಡೆದೇ ಇರುತ್ತದೆ. ಅಲ್ಲೇ ಪೂರ್ಣತೆಗೆ ತಗಲುವ ಅವಧಿಯ ಇಳಿಗಣನೆ ಮಾಪಕ ನೋಡಿಕೊಂಡು, ನಿಶ್ಶಬ್ದವಾಗಿ ಬೇರೇ ಕೆಲಸದಲ್ಲಿ ತೊಡಗಿಕೊಳ್ಳಬಹುದು. ಅದು ಪೂರ್ಣಗೊಂಡಾಗ ಅಥವಾ ನಿಮಗೆ ಬಿಡುವಾದಾಗ ಮೇಲೆತ್ತಿ, ರೀಪ್ಲೇ ಒತ್ತಿದರಾಯ್ತು." ಹಾಗೇ ಆಯ್ತು, ತಲೆಯೊಳಗೆ ಅಂಡಮಾನ್ ಕಥನ ಪಾಜ್‍ಗೆ ಹಾಕಿದಂತೆ ಲೋಡಾಗುತ್ತಲೇ ಇತ್ತು. ತಗೋ ಮತ್ತೆ ಹರಿಬಿಡುತ್ತೇನೆ.

ಅಂಡಮಾನಿನಲ್ಲಿ ಮುಖ್ಯ ಭೂಮಿಯಲ್ಲಿ ಮಾಡಿದಂತೆ ಆಡಳಿತ ನೆಲ ಕಂಡಲ್ಲೆಲ್ಲ ಬಿಡಾರ ಹೂಡುವ ಕಲ್ಪನೆ ಅಸಾಧ್ಯ. ಪ್ರತಿ ನೆಲವೂ ಮೊದಲು ಜಲ–ಸ್ವತಂತ್ರವಾದರಷ್ಟೇ ವಿಸ್ತರಣೆ ಸಾಧ್ಯ. ಇಲ್ಲಿ ಕೊಳಾಯಿ ಸಾಲೆಳೆಯಲು ಕಾವೇರಿ ಇಲ್ಲ, ತಿರುಗಿಸಲು ನೇತ್ರಾವತಿ ಇಲ್ಲ! ಇಲ್ಲಿನ ನವನಾಗರಿಕತೆ ಬಾನಿಗೊಂದು ಆಲಿಕೆ ಒಡ್ಡುವುದು, ಟಾಂಕಾ ಕಟ್ಟುವುದು ಅನಿವಾರ್ಯ, ಎಂದಿತ್ಯಾದಿ ಲಹರಿ ಬೆಳೆಯುತ್ತಿದ್ದಾಗ ನಗ್ರಿಮೂಲೆ ಗೋವಿಂದ ಅವನ ಬ್ಲಾಗಿನ ಹೊಸ ಲೇಖನಕ್ಕೆ (www.halliyimda.blogspot.com) ಆಹ್ವಾನಿಸಿದ. ಕೊಲರಡೋ ಕಣಿವೆಯಲ್ಲಿ ಮಳೆನೀರು ಸಂಗ್ರಹ, ನೀರಿಂಗಿಸುವ

ಯೋಜನೆಗಳು ಕಾನೂನು ಬಾಹಿರವಂತೆ! ಒಮ್ಮೆಗೆ ಆಶ್ಚರ್ಯವಾಯ್ತಾದರೂ ಇಂದು ಇಲ್ಲಿ ನಗರಗಳು ಬೆಳೆಯುವ ವರಿಸೆ, ಅದಕ್ಕೆ ಸವಲತ್ತು ಒದಗಿಸುವ ಹುನ್ನಾರಗಳು ನೋಡಿದರೆ ಏನೂ ತಪ್ಪಲ್ಲಾಂತವೂ ಅನ್ನಿಸುತ್ತದೆ. ಬಿಡು, ಸದ್ಯ ಅಂಡಮಾನ್ ಮೀರಿದ ವಿಚಾರಗಳನ್ನು ಕ್ಲಿಕ್ ಮಾಡಿ, ಲೋಡಿಂಗಿಗೆ ಪಾಜ್ ಕೊಟ್ಟು ಮುಖ್ಯ ಕಥನಕ್ಕೆ ಮರಳುತ್ತೇನೆ.

ಅಂಡಮಾನಿನಲ್ಲಿ ನೀರಿನ ಸಂಕಟಕ್ಕೆ ಗೋಣಸು ತಗುಲಿಸಿದಂತೆಯೇ ಇದೆ ಜಾನುವಾರು ಸಾಕಣೆ. ಹವಳ ದ್ವೀಪಗಳಾದ ಈ ನೆಲದಲ್ಲಿ ಸುಣ್ಣದ ಅಂಶದ ಪ್ರಭಾವ ಹೆಚ್ಚಿರುವುದರಿಂದ ಹುಲ್ಲು ಸದಾ ಅಭಾವ. ಆದರೂ ಇರುವ ಹೇರಿಕೆಯ ಹೈನುಗಾರಿಕೆ 'ಸುಣ್ಣದಕಾವಿನಲಿ ಬಳಲುತ್ತದಂತೆ. ಸಿಗುವ ಹಾಲು ಮತ್ತು ಜೀವ-ಮರುಉತ್ಪತ್ತಿ ಪ್ರೋತ್ಸಾಹದಾಯಕವಲ್ಲವಂತೆ. ಇಲ್ಲಿರುವ ವನ್ಯಜೀವಿಗಳಲ್ಲಿ ಪ್ರಕೃತಿಯೂ ಹಸಿರು ಮೇವು ಅರಸುವ ಗೊರಸಿನ ಪ್ರಾಣಿಗಳನ್ನು ಪೋಷಿಸಿಲ್ಲ ಎಂಬುದು ಗಮನಾರ್ಹ. ಬ್ರಿಟಿಷರ ಕಾಲದಲ್ಲಿ ಮುಖ್ಯ ಭೂಮಿಯಿಂದ ಅಲಂಕಾರಕ್ಕೆ ತಂದು ಸಾಕಿದ್ದ ಜಿಂಕೆಗಳು, ಅವರು ಹೋದಮೇಲೆ ಬಂಧನ ಕಳಚಿಹೋಗಿ ವನ್ಯದಂತೇ ಆಗಿರುವುದನ್ನು ಮುಂದೊಂದು ದ್ವೀಪದಲ್ಲಿ ನಾವು ನೋಡಿದ್ದು ಉಂಟು. ಆದರೆ ಅವೆಷ್ಟಿದ್ದರೂ ಮಂಗಳೂರು ಬೀದಿಯಲ್ಲಿ ಬಿಟ್ಟ ಬಸವನಷ್ಟೇ ಸ್ವತಂತ್ರ. ಸಹಜವಾಗಿ ಆಹಾರ ಸರಪಣಿಯ ಕೊನೆಯಲ್ಲಿರುವ ಮಾಂಸಾಹಾರಿ ಪ್ರಾಣಿಗಳೂ ಇಲ್ಲಿ ವಿಕಸಿಸಿಲ್ಲ. (ಮನುಷ್ಯನನ್ನು ಬಿಟ್ಟರೆ) ಹಲ್ಲಿ, ಹಾವು, ಅರಣೆಗಳದ್ದೇ ದೊಡ್ಡಪ್ಪ (Monitor Lizard) ಬಹುಶಃ ಇಲ್ಲಿನ ದೊಡ್ಡ ಮಾಂಸಾಹಾರಿ ಪ್ರಾಣಿ ಎಂಬಲ್ಲಿಗೆ ಪ್ರಕೃತಿ ಪಾಠ ಮುಗಿಸಿ ವಂಡೂರಿಗೇ ಹೋಗುತ್ತೇನೆ.



ನಾವು ಜಾಲಿಬಾಯಿಂದ ಮರಳುವಾಗಲೇ ವಂಡೂರಿನ ಸಂಶೋಧನಾ ಸಂಸ್ಥೆಯ ಕಾರ್ಯದರ್ಶಿ, ಅದಕ್ಕೂ ಮಿಗಿಲಾಗಿ ನಮ್ಮ ಆತಿಥೇಯ ವೇಣು ಯಾವುದೋ ತಂಡಕ್ಕೆ ಮಾರ್ಗದರ್ಶಿಸಲು ಹೋಗಿದ್ದಾರೆ ಎಂದು ಭಯ್ಯಾ ಹೇಳಿದ್ದ. ಆ ತಂಡದವರನ್ನು ಕರೆತಂದಿದ್ದ ಎರಡು ವ್ಯಾನುಗಳನ್ನು ಅಲ್ಲಿ ಬಿಟ್ಟು, ದೋಣಿಯೇರಿ ಹೋಗಿದ್ದರು. ಆ ಚಾಲಕರು ಭರ್ಜರಿ 'ಮೂಜಿಕ್' (music) ಹಾಕಿ ವೇಳೆ ಕಳೆಯುತ್ತಾ ಬಿದ್ದುಕೊಂಡಿದ್ದರು. ಸ್ವಲ್ಪ ಕಿವಿ ಇದ್ದವರಿಗೆ ಶಬ್ದಮಾಲಿನ್ಯದ ಈ ಸಣ್ಣ ಕಾಯಿಲೆಯನ್ನು ಹುಟ್ಟಡಗಿಸಿಬಿಡಬೇಕು ಎಂಬ ರೋಷ ಒಮ್ಮೆಗೆ ಬರುವಂಥದ್ದೇ. ಆದರೆ ಇದು ರೋಗಲಕ್ಷಣ, ಇದಕ್ಕೆ ಮದ್ದು ಸಲ್ಲ ಎಂದನ್ನಿಸಿತು. ವ್ಯವಸ್ಥೆಯನ್ನೇ ಗಟ್ಟಿ ಮಾಡುವ ಅವಕಾಶವಿದ್ದರೆ ಮಾತ್ರ ಮಾತಾಡಬೇಕು ಎಂದು ತಾಳ್ಮೆ ತಂದುಕೊಂಡು ನಮ್ಮಷ್ಟಕ್ಕೇ ಕಿನಾರೆಯುದ್ದಕ್ಕೆ ನಡೆದೆವು. ಸುನಾಮಿಯ ಹೊಡೆತಕ್ಕೆ ಒರಗಿದ್ದ ಧರಾಮರರ ಲೆಕ್ಕ ತೆಗೆಯುವವರಂತೆ, ಮಗುಚುವ ಅಲೆಗಳ ಸೌಂದರ್ಯ ಸಾರ್ಥಕಗೊಳಿಸುವ ಉಮೇದಿನಲ್ಲಿ (ಮೂಸುವವರಿಲ್ಲದೆ ಎಷ್ಟೊಂದು ವನಸುಮಗಳು ಉದುರಿಬೀಳುತ್ತವೆ ಎಂದೊಬ್ಬ ಕವಿ ಗರ್ವಿಸಿದ್ದು ಸುಮ್ಮನೆಯೇ) ಸುಮಾರು ನಡೆದೆವು. ಪ್ರಾಕೃತಿಕ ವಿಕೋಪದಲ್ಲೂ ಏನೋ ಒಂದು ಸೌಂದರ್ಯಾನುಭೂತಿ ನಮಗಾಗುತ್ತಿತ್ತು! ಬಿದ್ದ ಮರಗಳ ಬೊಡ್ಡೆಗಳಿಗೆ ಕ್ಷಮಾಪೂರ್ವ ನೇವರಿಕೆ ಕೊಡುತ್ತಿರುವ ತೆಳು ಅಲೆಗಳ, ಹಿನ್ನೆಲೆಯಲ್ಲಿ ಕಂತುತ್ತಿದ್ದ ಸೂರ್ಯನ ಹತ್ತೆಂಟು ಬಿಂಬಗಳ ವಿವಿಧ ಕೋನಗಳ ದೃಶ್ಯ ನೋಡಿದಷ್ಟೂ ಮುಗಿಯದು. ಆದರೆ ದಿನದ ಪಾಳಿ ಮುಗಿಸುತ್ತಿದ್ದ ಸೂರ್ಯ ಬಣ್ಣದ ಮನೆಗೆ ನುಗ್ಗಿ ಹತ್ತೆಂಟು ರಂಗಿನ ಟ್ರಯಲ್ ನೋಡಿ, ಬಿಟ್ಟು, ಮಾಸಲು ಚಾದರ ಬಿಡಿಸುತ್ತಿದ್ದಂತೆ ನಾವು ಕುಟೀರಕ್ಕೆ ಮರಳಲೇಬೇಕಾಯ್ತು. ರಾತ್ರಿ ಮುಗಿಸಿ ಮತ್ತೆ ಪೋರ್ಟ್ ಬ್ಲೇರ್ ದಾರಿ ಹಿಡಿದೆವು.

ದಿನ ಐದು (ಏಪ್ರಿಲ್ ೨೨)



ಬ್ಲೇರ್ ತಲಪಿದ್ದೇ ಹುಡುಕುಡುಕಿ ಅನ್ನಪೂರ್ಣ ಹೋಟೆಲಿನ ಪಕ್ಕದ ಗಲ್ಲಿಯಲ್ಲೇ ಒಂದು ಲಾಡ್ಜಿನ ದೊಡ್ಡ ಕೋಣೆ ಬಾಡಿಗೆಗೆ ಹಿಡಿದೆವು. ನಮ್ಮ ಗಂಟು ಗದಡಿಗಳನ್ನು ಅಲ್ಲಿ ಬಿಸಾಡಿ, ಇನ್ನೇನು ಮಾಸಲು ಬಟ್ಟೆಗಳ ಗಂಟಿಗೆ ಧೋಬಿ ಶಾಟ್ ಕೊಡುವವರಿದ್ದೆವು. ಆಗ ಮತ್ತೆ ಪೂರ್ವಸೂರಿಗಳ (ಬಹುಶಃ ರಹಮತ್ ತರೀಕೆರೆಯವರ ಪುಸ್ತಕದ) ಅನುಭವ ಎಚ್ಚರಿಸಿತು. ಬ್ಲೇರ್ ನಮ್ಮ ಹಳ್ಳಿಮೂಲೆಯ ಪೇಟೆಯಂತೇ ಇದ್ದರೂ ಧೋಬಿ ದರಗಳು ದುಬಾರಿ; ಕಾರಣ – ಸರಳ! ಶ್ರಮ, ಸಾಬೂನು, ವಿದ್ಯುತ್‌ಗಳಿಗೆ ಇಲ್ಲಿ ನೀರಿನ ಬೆಲೆಯೂ ಸೇರುತ್ತದೆ. ಮುಖ್ಯ ಭೂಮಿಯಲ್ಲಿ ದೊಡ್ಡ ಬಟ್ಟೆ ಕೊಟ್ಟು ಸಣ್ಣದು ಬಿಟ್ಟಿ ಅನುಭವಿಸಿದ ಬಲದಲ್ಲಿ ನಮ್ಮ ಕಟ್ಟೂ ಸಾಕಷ್ಟು ದೊಡ್ಡದೇ ಇತ್ತು. (ಹಳಸಲು ಜೋಕ್ ಒತ್ತಿಕೊಂಡು ಬರ್ತಾ ಇದೆ, ಹೇಳಿಬಿಡ್ತೇನೆ. ಒಗೆಯಕ್ಕೆ ಶರ್ಟ್ ಹಾಕಿದರೆ ಕರವಸ್ತ್ರ ಉಚಿತ ಎಂದೊಂದು ಲಾಂಡ್ರಿ ಹೇಳಿತಂತೆ. ಕಾಲು ಸೋತ ಪರ್ವತಾರೋಹಿಯೊಬ್ಬ ಭಾರೀ ಬೆಟ್ಟ ಇಳಿಯುವಲ್ಲಿ ಪ್ಯಾಂಟ್ ಕುಂಡಿ ಹರಕೊಂಡು ಬಂದಾಗ ದೋಬಿಯ ಬಳಿ ಕಾಚಾ ಫ್ರೀ ಮಾಡೋ ಎಂದು ದುಂಬಾಲು ಬಿದ್ದನಂತೆ!) ಇಲ್ಲಿ ಉಚಿತ ಇಲ್ಲ, ಉಳಿದವಕ್ಕೂ ದರ ಕೇಳಿದ ಮೇಲೆ ದೊಡ್ಡಸ್ತಿಕೆ ಮರೆದವರೆಲ್ಲ ಊರಿಗೊಯ್ಯುವ ನೆನಪಿನ ಕಟ್ಟಿಗೆ ಸಾಕಷ್ಟು ಕೊಳೆ ಬಟ್ಟೆ ಕಟ್ಟು ಸೇರಿಸಿಕೊಂಡರು!

ಹಕ್ಕಿಗುಡ್ಡ

ಅಂಡಮಾನಿಗರ ಲೆಕ್ಕದಲ್ಲಿ ಇದು ಚಿಡಿಯಾ ಟಾಪ್. ನಮ್ಮ ಮುಂದಿನ ಬೈಕ್ ದೌಡು ಅತ್ತ ತಿರುಗಿತು. ಮೊದಮೊದಲು ಸಪಾಟಾಗಿ, ವಿಹಾರದೋಟಕ್ಕೆ ಕಡಲ ಕಿನಾರೆಯೇ ಸರಿ ಎಂಬಂತೆ ದೀರ್ಘ ತಿರುವುಗಳಲ್ಲಿ ಸಾಗಿತು ದಾರಿ. ಅಲ್ಲೊಂದೆರಡು ಕಡೆಯಂತೂ ಅಲೆಯಪ್ಪಳಿಕೆಯ ಸೌಂದರ್ಯ ನಿಂತು ನೋಡುವಷ್ಟು ಆಕರ್ಷಕವಾಗಿತ್ತು. ಮತ್ತೆ ಘಟ್ಟದಾರಿಯಲ್ಲಿ ಏರೇರುತ್ತ ದಟ್ಟ ಕಾಡೇ ಸುತ್ತುವರಿಯಿತು. ದ್ವೀಪಸ್ತೋಮದ ತಮಾಷೆ ಎಂದರೆ ಎಲ್ಲೂ ನೀವು ದೀರ್ಘ ಕಾಲ ಕಳೆದುಹೋಗುವುದು ಅಸಾಧ್ಯ! ನಾವು ಬೆಟ್ಟ ಏರುತ್ತ, ಕಾಡಿನ ಗಾಳಿ ಕುಡಿಯುತ್ತ ಎಲ್ಲೋ ಚಾರ್ಮಾಡಿಯದೋ ಶಿರಾಡಿಯದೋ ಲಹರಿಯಲ್ಲಿರುವಾಗ ತೀರಾ ಲಘು ಇಳಿಜಾರು ಬಂದು ಇನ್ನೊಂದೇ ಮಗ್ಗುಲಿನ ಕಡಲಕಿನಾರೆ ತಲುಪಿದ್ದೆವು. ಅಷ್ಟೇ ಅನಿರೀಕ್ಷಿತವಾಗಿ ಚಿಡಿಯಾಟಾಪಿನ ಪುಟ್ಟ ಪೇಟೆಯೂ ಅಲ್ಲೇ ಇತ್ತು.

ಅದುವರೆಗೆ ಸುನಾಮಿಯ ಪ್ರಾಕೃತಿಕ ನಾಶದ ಕುರುಹುಗಳನ್ನಷ್ಟೇ ನೋಡಿದ್ದ ನಮಗಿಲ್ಲಿ ನಾಗರಿಕ ಬವಣೆಗಳ ಕಿರು ಕುರುಹುಗಳೂ (ಕೆಲವು ಕಥೆಗಳೂ) ಸಿಕ್ಕವು. ಈಗ ಅಲ್ಲಿ ಕಾರ್ಯಾಚರಿಸುತ್ತಿದ್ದ ಮಳಿಗೆಗಳೆಲ್ಲ ಸುನಾಮಿಯೋತ್ತರ ಕಾಲದಲ್ಲಿ ಹೊಸದಾಗಿ ರೂಪುಗೊಂಡವು. ಕೆಲವು ಕಟ್ಟಡ ಹಳತೇ ಉಳಿದಿದ್ದರೂ ಹಿಂದಿನ ಮಳಿಗೆ ಮಾಲೀಕರುಗಳು ನಾಮಾವಶೇಷರಾಗಿದ್ದಾರೆ. ಅಂಥಾ ಒಂದು ಹಿಟ್ಟಿನ ಗಿರಣಿಯಲ್ಲಿ ಯಂತ್ರೋಪಕರಣಗಳು, ಒಂದು ಸ್ಕೂಟರ್, ಒಂದು ಬೈಕ್ ಸುನಾಮಿಯ ಭೀಕರ ಸ್ನಾನ ಮುಗಿಸಿ ಅವಶೇಷಗಳ ಮಟ್ಟದಲ್ಲಿ ಉಳಿದಿದ್ದದ್ದು ಹಾಗಾಗೇ ನಿಂತುಕೊಂಡಿರುವುದು ಮನಕಲಕುವಂತಿತ್ತು. ಅಲ್ಲಿನ ಹೊಸ ಅರ್ಧ ಚಂದ್ರಾಕೃತಿಯ ಸಮುದ್ರ ತಡೆಗೋಡೆ, ದೋಣಿಕಟ್ಟೆ, ವಾಹನ ತಂಗುದಾಣದ ಕೆಲಸಗಳು ಎಲ್ಲ ಸಾರ್ವಜನಿಕ ಕಾಮಗಾರಿಗಳ ಅವ್ಯವಸ್ಥೆಯನ್ನು ಬಿಂಬಿಸುತ್ತಿತ್ತು. “ಯಾರಿಗ್ಗೊತ್ತು, ಕಡಲುರಿಯ ಕರಾಳ ಹಸ್ತ ಮತ್ತೆ ನಾಳೆಯೇ ಬರಬಹುದು. ಆಗ ಈ ಕಾಮಗಾರಿ ಪೂರ್ಣಗೊಳ್ಳದ್ದರಿಂದ ತಮ್ಮನ್ನು ದೂರುವಂತಿಲ್ಲ. ಮತ್ತೆ ಕಳ್ಳಕೆಲಸದ ಸುಳಿವೂ ಉಳಿಯದಂತೆ ನೋಡಿಕೊಳ್ಳುವ ಕೆಲಸ ಸುನಾಮಿ ಮಾಡಿಯೇ ಮಾಡುತ್ತದೆ. ಚುರುಕು, ಚೊಕ್ಕಾಂತ ಪ್ರಪೋಜಲ್ಲು, ಪ್ರಾಜೆಕ್ಟು, ಸ್ಯಾಂಕ್ಷನ್‌ಗಳ ಸರಣಿಯನ್ನು ದಿಢೀರನೆ ಕಡಿದರೆ, ಕೆಲಸವನ್ನು ಕರಕ್ಟಾಗಿ ಕಂಪ್ಲೀಟ್ ಮಾಡ್ದ್ರೇ ನಾವು ಬದುಕಬೇಡ್ವೇ ಸರೂ” ಅಂತ ಸೀಜನ್ಡ್ ಸರಕಾರೀ ಕಂತ್ರಾಟುದಾರನೊಬ್ಬ ಪ್ರಾಮಾಣಿಕವಾಗಿ ಹೇಳಿದ್ದು ನೆನಪಿಗೆ ಬಂತು.

ನಮ್ಮ ದಾರಿ ಎದುರಿನ ಪುಟ್ಟ ಗುಡ್ಡೆ ನೆತ್ತಿಯ ಭಾರೀ ಬಂಗ್ಲೆಗೂ ಅಸ್ಪಷ್ಟ ಕವಲಿನಲ್ಲಿ ಎಡಕ್ಕೆ ಹೊರಳಿ ಕಾನನಾಂತರಕ್ಕೂ ಹೋಗುವುದು ಕಾಣುತ್ತಿತ್ತು. ಅರಣ್ಯ ಇಲಾಖೆ ಆ ಕಾಡುದಾರಿಗೆ ಬೈಕೂ ನುಸುಳದಂತೆ ಅಡ್ಡ ಸರಪಳಿ ಕಟ್ಟಿದ್ದರು. ನಡೆದು ಹೋಗುವವರಿಗೆ ಯಾವ ಕಟ್ಟುಪಾಡೂ ಇಲ್ಲವೆಂದು ತಿಳಿದ ಮೇಲೆ ನಾವು ಬೈಕ್ ಅಲ್ಲೇ ಬಿಟ್ಟು ಮುಂದುವರಿದೆವು. ಅನುಮತಿ ಪಡೆದು ಮತ್ತೂ ಬೈಕಿನಲ್ಲೇ ಮುಂದುವರಿಯುವ ತುರ್ತು ನಮಗೇನೂ ಇರಲಿಲ್ಲ. ಬಂಗ್ಲೆ ದಾರಿ ಗುಡ್ಡೆಯ ಇನ್ನೊಂದು

ಮಗ್ಗುಲಿನ ಕಡಲ ಕಿನಾರೆಯ ಉದ್ದಕ್ಕೆ ಇದ್ದದ್ದು, ಸುನಾಮಿಯ ಆಘಾತದಲ್ಲಿ ಹರಿದು ಹೋಗಿತ್ತು. ಸದ್ಯ ಮಾರಿ ಹಲಗೆಗಳೂ (earth movers), ಕಾಂಕ್ರೀಟ್ ಕಲಸುಗಗಳೂ ನೂರೆಂಟು ಕೂಲಿಗಳು ಕೆಲಸ ನಡೆಸಿದ್ದರು. ತಮಾಷೆ ಅಂದರೆ, ಅಂದು ಯೋಚನೆ ಮಾಡಿಯೇ ಇರಲಿಲ್ಲ, ಈಗ ಕಾಡುತ್ತಿದೆ ಪ್ರಶ್ನೆ! ಕಾಂಕ್ರೀಟ್ ಕೆಲಸಕ್ಕೆ ನೀರೆಲ್ಲಿಂದ? ನೆನಪಿನ ವಿವರಗಳಿಗೆ ಝೂಂ–ಇನ್ ಮಾಡುವ ಸೌಲಭ್ಯವಿಲ್ಲದೆ ಸೋತೆ! ಮೊರೆದು ನೊರೆಯುತ್ತಿದ್ದ ಮತ್ತು ಮೊಗೆದು ಮುಗಿಯದ ಉಪ್ಪುನೀರಲ್ಲೂ ಕಾಂಕ್ರೀಟ್ ಕೆಲಸ ಸಾಧ್ಯವಾಗುವ ತಂತ್ರ ಜ್ಯಾರಿಯಲ್ಲಿತ್ತೇ? ಚಿಡಿಯಾಟಾಪಿನ ಒಳನೆಲದಿಂದ ಸಿಹಿನೀರು ತರುತ್ತಿದ್ದರೆ? ಬಲ್ಲವರು ಹೇಳಬೇಕು!

ದಾರಿ ಅಭಿವೃದ್ಧಿ ಕಾಮಗಾರಿಗಳ ಗದ್ದಲ, ವಾಸನೆ ಮೀರಿ, ಸ್ವಲ್ಪ ಒಳನಾಡಿನತ್ತ ತಿರುಗಿ ಗುಡ್ಡೆಯ ಏರು ಮೈ ತೋರಿಸಿತು. ಮುಂದುವರಿದಂತೆ ಡಾಮರು ಚೆನ್ನಾಗಿದ್ದರೂ ನಾಗರಿಕ ಸಂಪರ್ಕ ತಪ್ಪಿದ್ದರಿಂದ ನಿರ್ಜನ, ನೀರವ ನಡಿಗೆಗೆ ಅನುಕೂಲವಿತ್ತು. ದಾರಿಯ ನೆತ್ತಿ ಪೂರ್ತಿ ತೆರವಾಗಿದ್ದು ನಮ್ಮ ಮಂಡೆ ಚುರುಗುಟ್ಟಿದರೂ ಅಕ್ಕಪಕ್ಕಗಳ ಮರಗಳ ದಟ್ಟಣೆ, ಮುಚ್ಚಿ ಬಂದ ಕುರುಚಲು ಸಾಂತ್ವನ ಹೇಳಿತು. ದಪ್ಪ ಬೀಜ ಹೊತ್ತ ದೊಡ್ಡ ಗಿರಿಗಿಟಿಯ ಇರಿಪು ಮರ ನನ್ನನ್ನು ಬಹಳ ಆಕರ್ಷಿಸಿತು. ನಾನು ಕೆಲವು ಬೀಜ ಸಂಗ್ರಹಿಸಿಟ್ಟುಕೊಂಡು ಊರಿಗೆ ಮರಳಿದಮೇಲೆ ಗಿಡ ಮಾಡಿ ಬಿಸಿಲೆಯ ನಮ್ಮ ಕಾಡಿನಲ್ಲಿ (ಅಶೋಕವನ) ನೆಟ್ಟುಬಿಡುವ ಯೋಚನೆಯನ್ನೂ ಮಾಡಿದ್ದೆ. ಆದರೆ ಇಂಥಲ್ಲೆಲ್ಲ ನಿರೇನ್ ವೈಜ್ಞಾನಿಕತೆ ಹೆಚ್ಚು ನಿಖರ ಮತ್ತು ಅಂದು ಕಠೋರ ಎಂದೂ ಅನ್ನಿಸಿತು! “ಇಲ್ಲ ಅಶೋಕರೇ ದ್ವೀಪದ ವೈಶಿಷ್ಟ್ಯವನ್ನು ಬುದ್ಧಿಪೂರ್ವಕವಾಗಿ ನಾವು ಪಶ್ಚಿಮಘಟ್ಟದ ಪರಿಸರಕ್ಕೆ ಹೇರುವುದು ಪರಿಸರ ರಕ್ಷಣೆಯ ವ್ಯಾಪ್ತಿಯಲ್ಲಿ ಸರಿಯಲ್ಲ” ಎಂದುಬಿಟ್ಟರು. ಅಡಿಗೆ ಬಿದ್ದರೂ ಮೀಸೆ ಮೇಲೆಂದು (ನಿರೇನ್‌ಗೆ ಮೀಸೆಯೇ ಇಲ್ಲವಾದ್ದರಿಂದ ಮೇಲೆ ಬಿದ್ದರೂ ಗೊತ್ತಾಗುವುದು ಕಷ್ಟ!) ನಾನು “ಇಲ್ಲ, ಪೇಟೆಯೊಳಗಿನ ಪಾಳುಭೂಮಿ ಪುನರುತ್ಥಾನ ಪ್ರಯೋಗನೆಲೆಯಾದ ನಮ್ಮದೇ ಇನ್ನೊಂದು ನೆಲದಲ್ಲಿ (ಅಭಯಾರಣ್ಯ) ನಡುತ್ತೇನೆ” ಎಂದು ಜಾರಿಸಿದೆ. ನಿಜಾ ಹೇಳುತ್ತೇನೆ, ಊರಿಗೆ ಮರಳಿದಮೇಲೆ ಹೆಚ್ಚಿನೆಲ್ಲಾ ಸ್ಮರಣಿಕೆ ಸಂಗ್ರಹಿಸುವ ಪ್ರವಾಸಿಗಳು ಮಾಡುವಂತೇ ಅದನ್ನೆಲ್ಲಿ ಕಳೆದುಕೊಂಡೆ ಅಥವಾ ಮಾಡಿದೆ ಎಂದೇ ಮರೆತುಹೋಗಿದೆ! ದ್ವೀಪಸ್ತೋಮಕ್ಕೇ ವಿಶಿಷ್ಟವಾದ ತಿಳಿಹಸುರು ಹಲ್ಲಿ ಕಾಣಿಸಿದ್ದು ಚಿಡಿಯಾಟಾಪಿನ ಈ ದಾರಿಯಲ್ಲೆ. ಕಾಡುಮರದ ಕಜ್ಜಾ ಕಾಂಡಕ್ಕೆ ಯಾರಂಟಿಸಿದ್ದು ಈ ಆಟಿಕೆ (ಪ್ಲ್ಯಾಸ್ಟಿಕ್ ಹಲ್ಲಿ?) ಎನ್ನುವಂತಿತ್ತು! ಯಾವುದೋ ಹದ್ದು ಗಸ್ತು ಹೊಡೆಯುತ್ತಿತ್ತು. ಇನ್ಯಾವುದೋ ಹಕ್ಕಿ ಅಶರೀರವಾಣಿ ಕೊಡುತ್ತಿತ್ತು. ಸುದೂರದ ಮರದೆತ್ತರದಲ್ಲಿ ಹಕ್ಕಿಗಳೆರಡರ ಬೇಟದಾಟಕ್ಕೆ ನಾವೂ ವಾಲ್ಮೀಕಿ ಕಣ್ಣು ಕೀಲಿಸಿದೆವು. ಸನ್ನಿವೇಶದಲ್ಲೇನೂ ಬದಲಾವಣೆ ಬರಲಿಲ್ಲ (ನಿನ್ನ/ನಿಮ್ಮೆಲ್ಲರ ಪುಣ್ಯ), ಹುತ್ತಗಟ್ಟಲಿಲ್ಲ ಚಿತ್ತ (ಬರುತ್ತಿಲ್ಲ ಇನ್ನೊಂದು ರಾಮಣ್ಯ). ಮತ್ತೆ ದುರ್ಬೀನಿಟ್ಟು ನೋಡಿದರೆ ಎಲ್ಲೆಲ್ಲೂ ಎಲೆ ಎಲೆ ಎನ್ನುತ್ತಿರುವಾಗಲೇ ಹಕ್ಕಿಯ ತಲೆ ಮೂಡಿಸಿ ನಗುತ್ತಿತ್ತು ಚಿಡಿಯಾ ಟಾಪ್ ಅರ್ಥಾತ್ ಹಕ್ಕೀ ದಿಬ್ಬ.

ದಾರಿ ಮತ್ತೆ ಇಳಿದು ಸಮುದ್ರದ ಮಟ್ಟಕ್ಕೆ ಬರುವಲ್ಲಿಗೆ ಒಂದೆರಡು ಕಾರುಗಳು, ಕೆಲವು ವಿಹಾರಿಗಳು ಇನ್ಯಾವುದೋ ಕಾಡು ದಾರಿ ಹಿಡಿದು ಬಂದು ಹರಡಿಕೊಂಡಿದ್ದರು. ವಾಸ್ತವದಲ್ಲಿ ಪಕ್ಷಿ, ಪರಿಸರ ವೀಕ್ಷಣೆಗೆ ನಡಿಗೆಯೇ ಸರಿಯಾದ ಕ್ರಮ. ಆದರೆ ಆ ಕಾರುಗಳ ಜನರನ್ನು ಕಂಡಾಗ, ತಲೆ ತೂತಾಗುವ ಬಿಸಿಲಿದ್ದರೂ ಹೊಟ್ಟೆಯೊಳಗೆ ಉರಿ ಎದ್ದದ್ದು ಸುಳ್ಳಲ್ಲ. ಬಂದದ್ದಂತೂ ಆಯ್ತು, ಮತ್ತೆ ಅಷ್ಟನ್ನೂ ಮರಳಿ ನಡೆಯಲೇ ಬೇಕೆನ್ನುವ ಸ್ಥಿತಿಗೆ ಎಲ್ಲರೂ ಬೈಕ್ ತರಬಹುದಿತ್ತು ಎಂದು ಗೊಣಗಿಕೊಂಡೆವು! ಮುಂದೆ ದಾರಿಯೇ ಇರಲಿಲ್ಲವೋ ಅಥವಾ ಇದ್ದ ದಾರಿಯನ್ನೂ ಸೇರಿಸಿ ನೆಲದ ಬಹ್ವಂಶವನ್ನು ಸಮುದ್ರ ನುಂಗಿರಬಹುದೇ ಎಂಬ ಸಂಶಯ ಬರುವ ಸ್ಥಿತಿ. ಒಂದು ಪುಟ್ಟ ತೊರೆಯಂಥ ಹಿನ್ನೀರ ಸೆರಗು ದಾಟಿದ ಮೇಲಂತೂ ಉರುಳಿಬಿದ್ದ ಒಂದೆರಡು ಭಾರೀ ಮರ ರೂಢಿಯ ಜಾಡೂ ಉಳಿಸಿರಲಿಲ್ಲ. ಸಮುದ್ರ ತೊಳೆಯುತ್ತಿದ್ದ ನುಣ್ಣನೆ ಮರಳ ಹಾಸಿನ ಮೇಲೆ ಸ್ವಲ್ಪ ನಡಿಗೆ. ಅಲ್ಲೊಬ್ಬ ಬೆಸ್ತ ತನ್ನ ಪುಟ್ಟದೋಣಿಯನ್ನು ಮುಳುಗಿ ನಿಂತ ಮರಗಳೆಡೆಯಲ್ಲಿ ಕಟ್ಟಿ, ಎದೆ ಮಟ್ಟದ ಅಲ್ಲೋಲಕಲ್ಲೋಲದಲ್ಲಿ ಮುಳುಗುತ್ತೇಳುತ್ತ ನಡೆದು ದಡ ಸೇರುತ್ತಲಿದ್ದ. ನಿರೇನ್‌ಗೋ ಅವನ ಸಂಗ್ರಹದ ಮೀನುಗಳ ಬಗ್ಗೆ ತಿಳಿಯುವ ಕುತೂಹಲ. ಅಂದಿನ ಸಮುದ್ರ, ಒಟ್ಟಾರೆ ಮೀನುಗಾರಿಕೆ, ಅಂದಿನ ಕೊಳ್ಳೆ ಇತ್ಯಾದಿ ಮಾತಿನ ಕಟ್ಟಡ ನಿಲ್ಲಿಸುವ ಪ್ರಯತ್ನಕ್ಕೆ ಪರಸ್ಪರ ಭಾಷಾ ಅಡಿಪಾಯವೇ ಬೇರೆಯಿದ್ದದ್ದು, ತುಂಬಿಕೊಡಲು ನಾವೆಲ್ಲರೂ ಅಸಹಾಯಕರಾದದ್ದು ತಮಾಷೆಯಾಗಿತ್ತು. ಮುಂದೆ ಸ್ಪಷ್ಟ ಸವಕಲು ಕಾಲುದಾರಿ ಗುಡ್ಡೆಯ ಕುರುಚಲು ಕಾಡಿನ ನಡುವೆ ಏರಿ ಸಾಗಿತ್ತು. ನಾವು ಅನುಸರಿಸಿದಂತೆ ಒಂದೆರಡು ಕವಲು ಜಾಡು ಸ್ವಲ್ಪ ಕಾಡಿತು. ಆದರೆ ಯಾವುದು ಆರಿಸಿದ್ದರೂ ಭಾರೀ ಮೋಸವಾಗದಷ್ಟು ಸಣ್ಣದಿತ್ತು ಮುಂದಿನ ನೆಲ. ನೂರಿನ್ನೂರು ಹೆಜ್ಜೆಗಳಲ್ಲೇ ಗುಡ್ಡದ ನೆತ್ತಿ ಸೇರಿದ್ದೆವು. ಅಲ್ಲಿ ಚದುರಿದಂತಿದ್ದರೂ ಸಾಕಷ್ಟು ದೊಡ್ಡ ಮರಗಳ ತೋಪೇ ಇತ್ತು. ಆಚಿನ ಮೈಯ್ಯ ಇಳುಕಲಿನ ಕೊನೆಯಲ್ಲಿ ಸಮುದ್ರ ಭೋರ್ಗರೆಯುತ್ತಿತ್ತು.

ಅದೊಂದು ಅರ್ಧ ಚಂದ್ರಾಕೃತಿಯ ದಂಡೆ. ನಾವು ಅತ್ತ ಇಳಿದು ನಿರಪಾಯದ ಎತ್ತರದಲ್ಲಿ ನಿಂತು ಅದರ ಚಂದ ಅನುಭವಿಸಿದೆವು. ಶುದ್ಧ ಕಲ್ಲಿನ ಆ ಕಿನಾರೆ ನೀರಿಗೂ ಒಂದಿಷ್ಟು ಪಾದೆ ಚಾಚಿತ್ತು. ನಮ್ಮ ಸೋಮೇಶ್ವರದ ರುದ್ರಪಾದೆಯಲ್ಲಿ ಕಂಡಂತದ್ದೇ ಆಟ. ಈ ಕೊರಕಲಿನಿಂದ ಒಂದು ಮಹಾ ಅಲೆ ನುಗ್ಗಿ ಬಡವಾಗುವುದರೊಳಗೆ ಆ ಸಂದಿನಿಂದೊಂದು ಹೆದ್ದೆರೆ ನುಗ್ಗುತ್ತಿತ್ತು. ಇದನ್ನು ಅಳಿಸಿ ಅದು ನಗುವ ಮೊದಲು ಮೂರನೆಯದು ಮತ್ತೆ ನಾಲ್ಕನೆಯದು ಹೀಗೆ ಬಿಳಿನೊರೆಯ ಉಕ್ಕು,

ಸೊಕ್ಕು ತೋರುತ್ತಾ ಕ್ಷೀರಸಾಗರ ಮಥನದ ರಮ್ಯ ನಮ್ಮೆದುರು ನಿರಂತರವಾಗಿತ್ತು. ಬಂಡೆ ಹಾಸಿನ ಉನ್ನತ ಕೇಂದ್ರದಲ್ಲಿ ಪ್ರಕೃತಿಯ ಶಕ್ತಿಗಳು ಒಂದಾಗಿ ಒಂದಾಳು ಸುಲಭದಲ್ಲಿ ನುಗ್ಗಬಹುದಾದಷ್ಟು ದೊಡ್ಡ ಗವಿಯನ್ನೇ ಮಾಡಿದ್ದವು. ಅಲ್ಲಿವರೆಗೂ ನುಗ್ಗಿದ ಬೆಳ್ದೆರೆಗಳನ್ನು ಅದು ಕುಡಿದದ್ದೇ ಕುಡಿದದ್ದು. ಆದರೂ ಅದು ತುಂಬಿದ ಸ್ಥಿತಿ ಕಾಣದಾಗ ತಳವಿಲ್ಲದ ಸರಕಾರೀ ಖಜಾನೆಯ ನೆನಪಾದದ್ದು ಸುಳ್ಳಲ್ಲ! ಅಷ್ಟ ಗ್ರಹ ಕೂಟ ಎಂದು ಕೇಳಿದ್ದುಂಟು ('ಅಷ್ಟಗ್ರಹ ಕೂಟ ಕಣಿನುಡಿಯುವ ಘೋಂಗಿಗಳ ಮಾತು. ನಿಜ ಆಗಸದಲ್ಲಿ ಅದೊಂದು ಸುಳ್ಳು. ನಿಂತ ನೆಲದ ಬಲದಲ್ಲೇ ಸಾಧಿಸುವುದಾದರೆ ನೂರೆಂಟು ಗ್ರಹಕೂಟವಾದರೂ ಆಶ್ಚರ್ಯವಲ್ಲ' ಎಂದು ಬದುಕಿ ಇದ್ದಿದ್ದರೆ ನಮ್ಮಪ್ಪ ಕೂಡಲೇ ಹೇಳುತ್ತಿದ್ದರು). ಆದರಿಲ್ಲಿ ಅಷ್ಟೂ ಧಾರೆಗಳ ಕೂಟ ಒಮ್ಮೆ ಆದಾಗ ಗವಿಯ ತಳದಿಂದಲೂ ಬೆಳ್ಳಿ ಉಕ್ಕಿ, ಪೂರ್ಣ ಕಲ್ಲನ್ನು ಮರೆಸಿ ಮೆರೆಯುವುದು ಹೊಸತೇ ಅದ್ಭುತ ನೋಟ.



ಹೊಟ್ಟೆ ತಾಳ ಹಾಕುತ್ತಿತ್ತು, ಕುಡಿನೀರೆಲ್ಲರಲ್ಲೂ ಅಂಡೆಗಳ ತಳ ಸೇರಿದ್ದವು. ಅಂದರೆ ವಾಸ್ತವ ನಮ್ಮನ್ನು ವಾಪಾಸಾಗಲು ನೆನಪಿಸಿತು. ಬಾಲ, ಕರೆಕುಚ್ಚುಗಳಲ್ಲಿ ಸಂಭ್ರಮಿಸುತ್ತ, ಪ್ರತಿ ಸೆಳೆತಕ್ಕೂ ಒಲ್ಲೆ ಒಲ್ಲೆನೆನ್ನುವಂತೆ ಆಚೀಚೆ ತೊನೆಯುವ ಗಾಳಿಪಟದಂಥ ನಮ್ಮ ಮನಸ್ಸನ್ನು ಜಗ್ಗುತ್ತ ಬೈಕಿನವರೆಗೆ ಮರಳಿದೆವು. ಅಲ್ಲಿನ ತಮಿಳರ ಹೋಟೆಲಿನಲ್ಲಿದ್ದ ಅನ್ನ ಮತ್ತು ಏಕೈಕ ಸಸ್ಯಾಹಾರಿ ಸಾಂಬಾರಿಗೆ ನಾವು ದೊಡ್ಡ ಗಿರಾಕಿಗಳಾದೆವು. ಮುಕ್ತಾಯಕ್ಕೆ ಊರಿನ ನೆನಪಿನಲ್ಲಿ ಮಜ್ಜಿಗೆ ಕಲಸಿ ಉಣ್ಣುವ ಭ್ರಮೆಗೆ ಅಲ್ಲಿನ ಅಂಗಡಿಯಲ್ಲಿದ್ದ ಯಾವುದೋ ಕಂಪೆನಿಯ ಸೀಲ್ಡ್ ಪ್ಯಾಕೇಟ್ ಕೊಂಡು ಕಲಸಿಯೂ ಬಿಟ್ಟೆವು. ಆದರದು ನಮ್ಮ ರುಚಿಗೆ ಅಪರಿಚಿತವಾದ ಜೀರಿಗೆ ಮಸಾಲೆಯ ಮಜ್ಜಿಗೆಯಾಗಿ, ಪಥ್ಯದ ಆಹಾರವೇ ಆಯ್ತು.

ಪತ್ರ ಆರು

ಪ್ರಿಯ ಆನಂದಾ,

ಇತಿಹಾಸ ಹೀಗೆ ಬೇಕೇ?

ಪೋರ್ಟ್ ಬ್ಲೇರಿಗೆ ಮರಳಿ ಇತಿಹಾಸದ ಪುಟಗಳಲ್ಲಿ ಕುಖ್ಯಾತವೂ ವರ್ತಮಾನದಲ್ಲಿ ವಿಖ್ಯಾತವೂ ಆದ ಸೆಲ್ಯುಲರ್ ಜೈಲ್ ಸೇರಿದೆವು. ಅದರ ಸಂಜೆಯ ಸಂದರ್ಶನ ವೇಳೆ ತೀರಾ ಸಂಕ್ಷಿಪ್ತ. ಬಾಗಿಲು ತೆರೆದು ನಮ್ಮನ್ನು ಒಳಗೆ ಬಿಡುವಾಗಲೇ ಮುಸ್ಸಂಜೆ. ಜೈಲಿನ ಸ್ವಾಗತ ಕಛೇರಿಯ ವಠಾರದಲ್ಲಿ ಐತಿಹಾಸಿಕ ಚಿತ್ರ, ಕೆಲವು ದಾಖಲೆಗಳು, ಸಾಮಗ್ರಿಗಳು ಜೋಡಿಸಿದ್ದರು. ಅವನ್ನು ನೋಡನೋಡುತ್ತಿದ್ದಂತೆ ಸಿಬ್ಬಂದಿ ದೀಪವಾರಿಸುತ್ತಾ ನಮ್ಮನ್ನು ಜೈಲಿನ ಒಳವಠಾರ ನೋಡಲು ಹೋಗುವಂತೆ ಅವಸರಿಸಿದರು. ಮುಖ್ಯ ಅಂಗಳದಲ್ಲಿ ಸಣ್ಣ ವೇದಿಕೆಯ ಎದುರು ನೂರಾರು ಕುರ್ಚಿ ಜೋಡಿಸಿ ಸಜ್ಜುಗೊಳಿಸಿದ್ದರು. ಕಾಲದ ಪರೀಕ್ಷೆಯಲ್ಲಿ ದಾಟಿ ಬಂದವೆಲ್ಲಾ ಐತಿಹಾಸಿಕ ಮಹತ್ವ ಪಡೆದುಕೊಳ್ಳುವುದನ್ನು ಸಾಕ್ಷಿಸುವಂತೆ ಪ್ರಾಚೀನ ಒಂಟಿಮರ, ಹಿಂದೆ ಶಿಕ್ಷೆಯ ಅಂಗವಾಗಿ ನಡೆಯುತ್ತಿದ್ದ ಕಾರ್ಯಾಗಾರ, ಗಲ್ಲಿಗೇರಿಸುವ ಕೋಣೆಗಳನ್ನು ನೋಡಿದೆವು. ಎರಡೋ ಮೂರೋ ಮಹಡಿಯ ಎತ್ತರಕ್ಕೆ ನಿಂತ ವೃತ್ತಾಕಾರದ ಮೆಟ್ಟಿಲ ಕೋಣೆ ಮತ್ತು ಕೇಂದ್ರೀಯ ಕಣ್ಗಾವಲ ಕೋಣೆಗೂ ನುಗ್ಗಿದೆವು. ಅಲ್ಲಿಂದ ಸೂರ್ಯ ಕಿರಣಗಳು ವಿಸ್ತರಿಸುವಂತೆ ಚಾಚಿಕೊಂಡಿದ್ದ ಓಣಿಗಳಲ್ಲಿ ಪಾದಬೆಳೆಸುವಾಗ ಹ್ಯಾವ್ಲಾಕಿನಲ್ಲಿ ಮಣ್ಣಗೋಲಿಗಳನ್ನು ಸೂರ್ಯಕಿರಣದ ಮಾದರಿಯಲ್ಲಿ ಜೋಡಿಸಿದ ಏಡಿ ನೆನಪಾಗಿ ಬೆರಗುಪಟ್ಟೆ. ಓಣಿಯುದ್ದಕ್ಕೆ ಖೈದಿಗಳ ಕೋಣೆ ಕೋಣೆ; ಕಿಷ್ಕಿಂಧೆ, ಓಣಿಯೊಂದೇ ದೃಶ್ಯ. ಅಲ್ಲೆಲ್ಲೋ ಸಾವರ್ಕರ್ ಇದ್ದ ಕೊಠಡಿ, ಇನ್ಯಾರ್ಯಾರೋ ಮಹಾತ್ಮರುಗಳು ರಾಜಕೀಯ ಕೈದಿಗಳಾಗಿದ್ದ ಗೂಡುಗಳನ್ನೂ, ತಗುಲಿಸಿದ್ದ ನಾಮಫಲಕಗಳಿಂದ ಕಂಡುಕೊಂಡೆವು. ಇವನ್ನೆಲ್ಲ ಚರಿತ್ರೆಯ ಭಾಗವಾಗಿ ನೋಡುವುದಷ್ಟೇ ನನಗೆ ಸಾಧ್ಯ. ಸ್ವಾತಂತ್ರ್ಯ ಹೋರಾಟಗಾರರ ಕಥೆಗಳು ಮಹತ್ವದವೇ; ವಿಕಾಸವಾದದ ಎಲ್ಲ ಕೊಂಡಿಗಳಂತೆ. ಯಾವುದೇ ಪುರಾಣಗಳನ್ನು (ನಿರಾಧಾರ ಇತಿಹಾಸ?) ಅವು ಪ್ರತಿಪಾದಿಸುವ ಸಾರ್ವಕಾಲಿಕ ಮೌಲ್ಯಗಳಿಗಾಗಿ ಬಳಸುವಂತೆ ಇಂಥವನ್ನೂ ನೋಡುವುದು ನಮಗೆ ಸಾಧ್ಯವಾಗಬೇಕು. ಅವುಗಳಿಗೆ ವರ್ತಮಾನದಲ್ಲಿ ಭಾವುಕರಾಗುವುದು (ಭಜನೆ ಮಾಡುವುದು), ನ್ಯಾಯ ಹುಡುಕುವ ಪ್ರಯತ್ನ ಮಾಡುವುದನ್ನು ನಾನು ಬುದ್ಧಿಪೂರ್ವಕವಾಗಿ ತಿರಸ್ಕರಿಸುತ್ತೇನೆ. ಅಂದಿನ ಹೋರಾಟ ೧೯೪೭ರ 'ವಿಜಯ'ದಿಂದಷ್ಟೇ 'ನಮಗೆ' ಉದಾತ್ತವಾಗುತ್ತದೆ. ಇಲ್ಲವಾದರೆ ಇಂದಿನ ಶ್ರೀಲಂಕಾದ ಎಲ್ಟಿಟಿಯಿ,

ಪಾಕಿಸ್ಥಾನದ ತಾಲೀಬಾನಿಗಳ ಹಾಗೇ ಅಂದಿನ ಆಡಳಿತ ಇವರನ್ನು ನೋಡಲೇಬೇಕಿತ್ತಲ್ಲವೇ? (ಎಸ್.ಎಲ್ ಭೈರಪ್ಪನವರ ಕೊನೆಯ ಕಾದಂಬರಿ (?) ಆವರಣ, ನೆನಪಿಗೆ ಬಂದು ಈ ಮಾತು ಹೇಳಿದ್ದೇನೆ. ಆನಂದಾ ನೀನದನ್ನು ಓದಿದ್ದೀಯಾ?)



ಕತ್ತಲಾವರಿಸುತ್ತಿದ್ದಂತೆ ಅಂಗಳಕ್ಕಿಳಿದು ಕುರ್ಚಿಗಳನ್ನಾಕ್ರಮಿಸಿದೆವು. ಸೆಲ್ಲ್ಯುಲ್ಲರ್ ಜೈಲ್ ಪ್ರವಾಸಿಗಳಿಗೆ ಪ್ರತಿ ಸಂಜೆ ಬೆಳಕು, ಧ್ವನಿಗಳ ವ್ಯವಸ್ಥೆಯಲ್ಲಿ ಭಾರತದ ಸ್ವಾತಂತ್ರ್ಯ ವೀರಗಾಥೆಯೊಳಗಿನ ತನ್ನ ನೆನಪುಗಳನ್ನು ಬಿತ್ತರಿಸುತ್ತದೆ. ಅದನ್ನು ಪೂರ್ತಿ ಅನುಭವಿಸಿದ ಮೇಳೆ ನನಗಂತೂ ಇದು ಇತಿಹಾಸವನ್ನು ಅಕಾರಣಕ್ಕೆ ಪೂಜನೀಯವಾಗಿಸುತ್ತಿದೆ ಎಂದೇ ಕಾಣಿಸಿತು. ವರ್ತಮಾನಕ್ಕೆ ಪ್ರಾಮಾಣಿಕರಾಗಿಲ್ಲದವರು (ಇಲ್ಲಿ ಆಡಳಿತಾತ್ಮಕ ನಿರ್ಧಾರ ತೆಗೆದುಕೊಳ್ಳುವ ನಮ್ಮ ಪ್ರಜಾಪ್ರತಿನಿಧಿಗಳಿಗೆ) ಸದಾ ಭೂತಕಾಲದಲ್ಲಿ ಆಸರೆ ಹುಡುಕಿ ಹಾಳಾಗುತ್ತಾರೆ. ಬ್ರಿಟಿಷರ ಕ್ರೌರ್ಯ, ಖೈದಿಗಳ ಶೌರ್ಯಗಳನ್ನು (ರಾಮಾಯಣ, ಮಹಾಭಾರತಗಳಂತ) ಪುರಾಣಗಳ ಅಂತರದಲ್ಲಿಟ್ಟು ನೋಡದಿದ್ದರೆ ಮೌಲ್ಯಗಳು ಮಸುಕಿ ಕ್ರಿಯೆಗಳು ಮಾತ್ರ ವಿಜೃಂಭಿಸುತ್ತವೆ. ಅಂದು ಭಾರತಕ್ಕೆ ಸ್ವಾತಂತ್ರ್ಯ ಬರುವ ಕಾಲದಲ್ಲಿ ಸೈನ್ಯದಲ್ಲಿದ್ದ ಬ್ರಿಟಿಷನೊಬ್ಬನ ಪುಟ್ಟ ಮಗ ಈಚೆಗೆ ಭಾರತಕ್ಕೆ ಬಂದವರು ನನಗೆ ಅಕಸ್ಮಾತಾಗಿ ಸಿಕ್ಕಿದ್ದರು. ಆತ ತನ್ನ ಬಾಲ್ಯ ಕಳೆದ ನೆಲದ, ಒಡನಾಡಿದ ಜನರ ಮೋಹವಿಟ್ಟುಕೊಂಡು ಬಂದರೆ ಇಲ್ಲಿನ ಮನಸ್ಸು ಇತಿಹಾಸಕ್ಕೆ ವರ್ತಮಾನದಲ್ಲಿ ಸೇಡಿನ ದಾರಿಗಳನ್ನು ಶೋಧಿಸುತ್ತಿರುವುದನ್ನು ಕಂಡು ಮೂಕನಾದ! ಸೆಲ್ಯುಲರ್ ಜೈಲಿನ ಬೆಳಕು, ಧ್ವನಿಯ ಸಾಹಿತ್ಯ ಅದೇ ಭಾವವನ್ನು ಜಾಗೃತಗೊಳಿಸುವಂತಿತ್ತು. ಅದಕ್ಕೆ ಸರಿಯಾಗಿ ಸಿಕ್ಕಿದ ಇನ್ನೊಂದು ಮಾಹಿತಿಯನ್ನು ಇಲ್ಲಿ ದಾಖಲಿಸಲೇಬೇಕು: ದ್ವೀಪಸಮೂಹದಲ್ಲಿ ಮುಖ್ಯವಾಗಿ ಐತಿಹಾಸಿಕ ತಾಣಗಳಿಗೆ ಭೇಟಿಕೊಡಲು ಈಗಲೂ ವಿದೇಶೀ ಪ್ರವಾಸಿಗರಿಗೆ ಪರವಾನಗಿ ಇಲ್ಲವಂತೆ. ಈ ಸಮೀಕರಣ ಮುಂದುವರಿದದ್ದೇ ಆದರೆ ನಾಳೆ ನಮ್ಮ ಎಲ್ಲಾ ಐತಿಹಾಸಿಕ ಕ್ಷೇತ್ರಗಳೂ ಪ್ರತಿಕಾರದ ಧ್ವನಿ ಎತ್ತಲು ತೊಡಗೀತು. ಒಂದು ಹಂತದಲ್ಲಿ ದೇಶೀಯರೊಳಗೂ ಈ ವಿಷ ವ್ಯಾಪಿಸಿ ಸ್ವತಂತ್ರ ಭಾರತ ಎಂಬ ಕಲ್ಪನೆಯೂ ದ್ರೋಹವಾದೀತು.

ಸೆಲ್ಯುಲರ್ ಜೈಲಿನ ಕಾರ್ಯಕ್ರಮ ಮುಗಿದ ಮೇಲೆ ಎರಡು ದಿನದ ಲೆಕ್ಕ ಕೊಟ್ಟು ಬೈಕ್‌ಗಳನ್ನು ಮರಳಿಸಿದೆವು. ಬಾಡಿಗೆ ಅಂಗಡಿ ಯಜಮಾನ, ನಾನು ಮೊದಲೇ ಹೇಳಿದಂತೆ ಊರಿನ ಮರಿ ರಾಜಕಾರಣಿ, ನಮ್ಮ ಊರು, ಆಸಕ್ತಿ, ಮುಂದಿನ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಆತ್ಮೀಯವಾಗಿ ವಿಚಾರಿಸಿಕೊಂಡರು. ರೂಪಾಯಿ ಇಪ್ಪತ್ತರ ನೋಟಿನಲ್ಲಿ ಮುದ್ರಿತವಾಗಿರುವ ದೀಪಸ್ತಂಭದ ದೃಶ್ಯ ತಮ್ಮದೇ ದ್ವೀಪಸ್ತೋಮದ್ದು ಎಂದು ಅಭಿಮಾನದಿಂದ ತೋರಿಸಿದರೂ ಅಖಂಡ ಭಾರತದ ವ್ಯಾಪ್ತಿಯಲ್ಲಿ ತಮಗಿಷ್ಟೇ ಪ್ರಾತಿನಿಧ್ಯ ಎಂದು ಗೊಣಗಿದ್ದೂ ಆಯ್ತು. ಆಡಳಿತಾತ್ಮಕ ವಿಭಜನೆಗಳು ಕೇವಲ ಭೌಗೋಳಿಕ ಪ್ರಾಂತ್ಯಗಳನ್ನು ಗುರುತಿಸಬೇಕಿತ್ತು. ಜಾತಿ, ಭಾಷೆ, ಜಾನಾಂಗಿಕ ವ್ಯತ್ಯಾಸಗಳೆಲ್ಲ ಕೇವಲ ಸಾಂಸ್ಕೃತಿಕ ಅಭಿವೃದ್ಧಿಯ ಸ್ತರದಲ್ಲಷ್ಟೇ ಉಳಿದಿದ್ದರೆ ಅಂಡಮಾನಿನ ಕೊರಗು ಇರುತ್ತಿರಲಿಲ್ಲ. ಅದಕ್ಕೂ ಮಿಕ್ಕು ಇಂದಿನ ಮತೀಯ ಗಲಭೆಗಳು, ಭಾಷಾದ್ವೇಷಗಳು ಒಟ್ಟಾರೆ ಮನುಷ್ಯನ ಭಾವನಾಕೋಶದ ಪುಢಾರೀಕರಣ ಆಗುತ್ತಿರಲಿಲ್ಲ ಎಂದು ನನ್ನ ನಂಬಿಕೆ. ಏನಂತೀ?

ದಿನ ಆರು (ಏಪ್ರಿಲ್ ೨೩)

ಒಂದು ಸಾಮಾಜಿಕ ನಾಟಕ

ಪ್ರವಾಸದ ಆರನೇ ದಿನ ನಮಗೆ ಮೂರು ಗಂಟೆಗೇ ಬೆಳಗ್ಗಾಯ್ತು! ಗಾಬರಿಯಾಗಬೇಡ, ಯಾವುದೇ ಪ್ರಾಕೃತಿಕ ಉತ್ಪಾತಗಳೂ ಘಟಿಸಲಿಲ್ಲ. ದ್ವೀಪ ಸಮೂಹದ ಅತ್ಯಂತ ಉದ್ದದ ದಾರಿಯುದ್ದಕ್ಕೆ ಸರಕಾರೀ ಬಸ್ಸಿನಲ್ಲಿ ಯೋಜಿತ ಪ್ರವಾಸಕ್ಕೆ ಟಿಕೇಟ್ ಖರೀದಿಸಿದ್ದೆವು. ಆ ದಾರಿ ದ್ವೀಪ ಸಮೂಹದ ಜರವಾ ಎನ್ನುವ ಮೂಲವಾಸಿಗಳ ನೆಲೆಯನ್ನು ಹಾಯ್ದುಹೋಗುತ್ತಿತ್ತು. ಆ ಜನರ ಅನನ್ಯತೆಯನ್ನು ಹಾಳುಗೆಡವದಂತೆ ಮತ್ತು ಅವರಿಂದ ಸಾರ್ವಜನಿಕರಿಗೆ ಬಾಧೆ ತಟ್ಟದಂತೆ ನೋಡಿಕೊಳ್ಳಲು ವಾಹನ ಸಂಚಾರವನ್ನು ಹಗಲಿಗೆ ಮಾತ್ರ ಮತ್ತು ಸೀಮಿತ ಸಂಖ್ಯೆಯಲ್ಲಿ ಮಾತ್ರ ನಡೆಸಲು ಸರಕಾರ ಅನುಮತಿಸಿತ್ತು. ಇದನ್ನು ಜಾರಿಗೆ ತರುವಲ್ಲಿ ಅವರ ವಲಯದಿಂದ ಹೊರಗೆ ದಾರಿಯ ಎರಡೂ ಕೊನೆಗಳಲ್ಲಿ ಗೇಟು, ನಿಶ್ಚಿತ ವೇಳಾಪಟ್ಟಿ ಸಿದ್ಧಪಡಿಸಿದ್ದಾರೆ. ಅದಕ್ಕೆ ಸರಿಯಾಗಿ ವಾಹನಗಳನ್ನು ಒಂದು ಗುಂಪಿನಂತೆ ಮಾಡಿ ನುರಿತ ಮಾರ್ಗದರ್ಶಿಗಳ ಜೊತೆಗೆ ಒಂದು ದಿಕ್ಕಿನಿಂದ ಕಳಿಸುತ್ತಿದ್ದರು.

ಅಂಥ ಮೊದಲ ಅವಕಾಶದಲ್ಲೇ ನಮ್ಮ ಬಸ್ಸು ದಾಟಿದರಷ್ಟೇ ನಮಗೆ ಮುಂದಿನ ಕಲಾಪಗಳಿಗೆ ಸಮಯಾವಕಾಶ ಸಿಗುತ್ತದೆ ಎಂದು ಈ ಬೆಳಗಿನ ಧಾವಂತ. ವಸತಿಗೃಹದ ಹೊರಗೆ ಪೂರ್ವನಿಶ್ಚಿತ ಸ್ಥಾನದಿಂದ ನಮ್ಮನ್ನು ಬಸ್ಸು ಪಿಕ್ಕಪ್ಪಿಸಿ ಉತ್ತರಮುಖಿಯಾಯ್ತು. ನಾವು ಪುಟ್ಟ ಹಡಗೇರಿ ಹ್ಯಾವ್ಲಾಕ್ ದ್ವೀಪಕ್ಕೆ ಹೋದ 'ನೀರದಾರಿಗೆ' ಸಮಾನಾಂತರವಾಗಿ ನೆಲದಲ್ಲಿ ನಾವು ಹೋಗುತ್ತಿದ್ದಂತೆ ಅನಿಸುತ್ತಿತ್ತು. ಬಸ್ಸಿನಲ್ಲಿ ಪ್ರವಾಸಿಗರೇ ಬಹುಸಂಖ್ಯಾತರಾದರೂ ಸಿಬ್ಬಂದಿಯೋ ಪರಿಚಿತ ಬಿಟ್ಟಿ ಪ್ರಯಾಣಿಕರೋ ಕೆಲವರಿದ್ದರು. ಆದರೆ ಎಲ್ಲರೂ ತರಬೇತಿ ಅಥವಾ ಮಹತ್ವಾಕಾಂಕ್ಷೆಗಳ ಸೋಂಕೂ ಇಲ್ಲದಂತೆ ದಾರಿ, ಇಕ್ಕೆಲಗಳ ವಿವರ ಮತ್ತು ನಮ್ಮ ಲಕ್ಷ್ಯಗಳನ್ನೆಲ್ಲಾ ತಿಳಿಸುವ ಗೋಜಿಗೇ ಬರಲಿಲ್ಲ. ಹೊಂಡ ಚಡಿಗಳಿಲ್ಲದ ಆದರೆ ಎಲ್ಲೂ ನುಣುಪು ಸಪಾಟಾಗಿಯೂ ಇರದ ದಾರಿಯಲ್ಲಿ ಶಕ್ತಿ ಮೀರಿದಂತೆ ಸದ್ದು ಮಾಡಿದರೂ ಸಾಮಾನ್ಯ ವೇಗದಲ್ಲಿ ನಮ್ಮ ಬಸ್ಸು ಸುಮಾರು ಮೂವತ್ತು ಕಿಮೀ ಕ್ರಮಿಸಿದಾಗ ತಡೆಗಟ್ಟೆ ಬಂತು.



ಮೊನ್ನೆ ಮೊನ್ನೆ ಬಂದುಹೋದ ನೀನಾಸಂ ತಿರುಗಾಟದ ನಟನಾರಾಯಣೀ ನಾಟಕದಲ್ಲಿ ಬೆಳಕು ಮಸುಕಿ ಬೆಳಗುವ ಕ್ಷಣಾರ್ಧದಲ್ಲಿ ಪ್ರಶಾಂತ ಮನೆಯ ವಾತಾವರಣದಿಂದ ಸಂತೆಚೌಕಕ್ಕೆ ದೃಶ್ಯ ಬದಲಾದದ್ದು ನೆನಪಿಗೆ ಬಂತು. ನಿರ್ಜನ, ನೀರವ ಬಯಲುಸೀಮೆಯಂಥ ಹಳ್ಳಿಗಾಡಿನ ಮೌನ ಮತ್ತು ಮುಂಜಾವದ ಮಬ್ಬು, ಮಂಜನ್ನು ಹರಿಯುತ್ತ ನಾವೇ ನಾವಾಗಿ ಓಡಿ ಬಂದವರಿಗೆ ಒಮ್ಮೆಗೆ ದಟ್ಟ ಕಾಡಿನಂಚಿಗೆ ಬಂದ ಅನುಭವ. ಹತ್ತೆಂಟು ಬಸ್ಸು, ಕಾರುಗಳು ಮೊದಲೇ ಬಂದವು ಹಾಗೇ ದಾರಿಯ ಬದಿಯಲ್ಲಿ ಜನರನ್ನು 'ಚೆಲ್ಲಿ', ಗೇಟು ತೆರೆಯುವ ಮುಹೂರ್ತವನ್ನು 'ಉಸ್ಸಪ್ಪಾಂತ' ಕಾದು ನಿಂತಿದ್ದವು. ಜನ ಬೇಕಾಬಿಟ್ಟಿ ಅಡ್ಡಾಡಿಕೊಂಡಿದ್ದರು. ಸರಕಾರೀ ಇಲಾಖೆಗಳ ವಸತಿ–ಕಛೇರಿಯಂತಿದ್ದ ನಾಲ್ಕೆಂಟು ಸಾರ್ವಕಾಲಿಕ ರಚನೆಗಳು ಅಲ್ಲಿ ಚದುರಿದಂತೆ ಇದ್ದವು. ಆದರೆ ಜನರೆಲ್ಲ ದಾರಿ ಬದಿಯಲ್ಲೇ ಇದ್ದ ತಟ್ಟಿ, ತಗಡುಗಳ ನಾಲ್ಕೆಂಟು ಚಾಯ್ ದುಕಾನುಗಳ ವಲಯದಲ್ಲೇ ಗಸ್ತು ಹೊಡೆದಿದ್ದರು. ನಾವೂ ಒಂದೆರಡು ಜೋಪಡಿಗಳಲ್ಲಿ ಚೌಕಾಸಿ ವ್ಯಾಪಾರ ಮಾಡಿ ಸಮೋಸಾವೋ ಆಲೂಗೆಡ್ಡೆ ಬೋಂಡಾವೋ ತಿಂದು ಚಾ ಕುಡಿದು ಕ್ಷುದ್ಬಾಧೆಯೇನೋ ತೀರಿಸಿಕೊಂಡೆವು. ಆದರೆ ಜಲಮಲಬಾಧೆ?! ದಿಕ್ಕಲ್ಲದ ದಿಕ್ಕಿನಲ್ಲಿ ಸರಕಾರೀ ವ್ಯವಸ್ಥೆಯೇನೋ ಇದೆಯೆಂದು ತಿಳಿಯಿತು, ಆದರೆ ಪರೀಕ್ಷಿಸುವ ಧೈರ್ಯ ನನಗಂತೂ ಬರಲಿಲ್ಲ. ಆನಂದಾ ನಿಮ್ಮ (ಅಮೆರಿಕಾದ) ದಟ್ಟ ಕಾಡು, ಕುತ್ತ ಬೆಟ್ಟಗಳಲ್ಲೂ ಶಿಬಿರ ಸ್ಥಾನಗಳು ಪೂರ್ವನಿಗದಿತ. ಅಲ್ಲಿ ನೀರು ಮತ್ತು ಪಾಯಖಾನೆಯ ವ್ಯವಸ್ಥೆ ಪ್ರಕೃತಿಯೊಡನೆ ಶ್ರುತಿ ಸೇರಿಸಿದಂತಿದ್ದರೂ ಸೌಲಭ್ಯಗಳು ಆಧುನಿಕ ಎಂದು ನೀನು ಹೇಳಿದ್ದು ಇಂಥಲ್ಲಿ ಮತ್ತೆ ಮತ್ತೆ ನೆನಪಿಗೆ ಬರುತ್ತಿರುತ್ತದೆ. ವಾಸ್ತವದ ಅವ್ಯವಸ್ಥೆಗಳನ್ನು ಕೇಸರಿ ಶಾಲಿನಲ್ಲಿ ಮುಚ್ಚುವ, ಹೇಳ ಹೊರಟವರನ್ನು ದೇಶಪ್ರೇಮದ ಹೆಸರಿನಲ್ಲಿ ತುಳಿಯುವ 'ರಾಜಕಾರಣದ' ದಿನಗಳಿವು. ಹಾಗಾಗಿ ಇಷ್ಟು ಸಾಕು.

ಆರೂವರೆಯ ಸುಮಾರಿಗೆ ನಮ್ಮ ವಾಹನಗಳ ಮೆರವಣಿಗೆ ಹೊರಟಿತು. ಇಲ್ಲಿವರೆಗೆ ಕೇವಲ ಟಿಕೆಟ್ ವ್ಯವಹಾರದಲ್ಲಷ್ಟೆ ಇದ್ದಂತಿದ್ದ ಕಂಡೋರಕುಟ್ಟಿ (ಕಂಡಕ್ಟರ್) ಮೊದಲೇ ಘೋಷಿಸಿದ – ಇನ್ನೊಂದು ಹದಿನೈದಿಪ್ಪತ್ತು ಕಿಮೀ ಅಂತರದಲ್ಲಿ ಜರವಾಗಳ ವಲಯ ನಾವು ದಾಟುತ್ತೇವೆ. ಎಲ್ಲ ಕಿಟಕಿ, ಕ್ಯಾಮರಾ ಬಂದ್ ಮಾಡಿಕೊಳ್ಳಿ. ಅವರಿಗೇನೂ ಪ್ರಚೋದನೆ, ಉಡುಗೊರೆ ಕೊಡಲು ಹೋಗಬೇಡಿ ಇತ್ಯಾದಿ, ಶಾಸನ ವಿಧಿಸಿದ ಎಚ್ಚರಿಕೆ! ನಮ್ಮ ಎದುರೂ ಹಿಂದೂ ಕೆಲವು ಬಸ್ಸುಗಳು, ಕಾರುಗಳು ಪರಸ್ಪರ ಹಿಂದಿಕ್ಕುವ ಧಾವಂತ ಇಲ್ಲದೆ ಸಾಗಿದ್ದವು. ಪ್ರತಿ ತಿರುವಿನಲ್ಲಿ, ಮರಗಿಡಬಳ್ಳಿಯ ಚಲನೆಯಲ್ಲಿ ನಾವಂತೂ ಕುತೂಹಲದ ಕಣ್ಣು ಓಡಿಸುತ್ತಲೇ ಇದ್ದೆವು. ಫಕ್ಕನೆ ಕಾಣ ಸಿಕ್ಕಿದ ದಾರಿ ಕೆಲಸಗಾರರನ್ನು ಕೆಲವರು ಗೊಂದಲಿಸಿಕೊಂಡರು. ಆಗ ನನಗೆ ಮೂಡಿದ ಪ್ರಶ್ನೆ, ಸಾರ್ವಜನಿಕರಿಗೆ ವಿಧಿಸಿದ ಎಚ್ಚರಿಕೆಗಳು ಈ ದಾರಿ ರಚನೆಯಲ್ಲಿ ಎಲ್ಲಿ ಹೋಯ್ತು? ಅವರಿವರ ಮಾತಿನಲ್ಲಿ ತಿಳಿದಂತೆ, ಜರವಾಗಳು ಸ್ನೇಹಜೀವಿಗಳಲ್ಲವಂತೆ. ಪೊಲೀಸ್ ಜಬರ್ದಸ್ತಿನಲ್ಲೇ ರಸ್ತೆಯ ಕಾಮಗಾರಿ ಮತ್ತೆ ಕಾಲಕಾಲದ ಉಸ್ತುವಾರಿ ನಡೆದಿದೆಯಂತೆ! ಪೌರಾಣಿಕ ಯುಗದಲ್ಲಿ, ಭಾರತದ ಮುಖ್ಯ ನೆಲದಲ್ಲಿ ಅಗಸ್ತ್ಯರು ವಿಂಧ್ಯಾಚಲ ಮಣಿಸಿ ದಕ್ಷಿಣೋತ್ತರಗಳ ಬಾಂಧವ್ಯ ಬೆಸೆದ ಕಥೆ ಕೇಳಿದ್ದೇನೆ. ನಮ್ಮ ಕರಾವಳಿ ಬಯಲು ಸೀಮೆಗಳ ನಡುವೆ ಪಶ್ಚಿಮಘಟ್ಟ ಸಾರಿಗೆ ಸಂಪರ್ಕಕ್ಕಾಗಿ ಪಳಗಿಸುವುದು ಎಂದೆಂದೂ ಮುಗಿಯದ ಕಥೆಯಾದರೂ ತಾರ್ಕಿಕವಾಗಿ ಆಗಬೇಕಾದ್ದೇ ಇದೆ. ಆದರೆ ಇಲ್ಲಿ ಬಹು ಸಣ್ಣ ಸಂಖ್ಯೆಯಲ್ಲಿರುವ ಜರವಾಗಳ ವಲಯ (ಅವರೂ ಭಾರೀ ಅಲೆಮಾರಿಗಳೂ ಅಲ್ಲ) ಹಾಯ್ದರೆ ನಮಗೆ ಕೂಡಲೇ ಸಿಕ್ಕುವುದು ಸೇತುವಿಲ್ಲದ ಸಾಗರ ಮಾತ್ರ. ಒಂದು ಕಡೆ ಆದಿವಾಸಿಗಳ ಶುದ್ಧವನ್ನು ನವನಾಗರಿಕತೆಯಿಂದ

ಕಾಪಾಡುವ ಮಾತಾಡುವ ಸರಕಾರಕ್ಕೆ ಮೂಲದಲ್ಲಿ ಈ ಮಾರ್ಗವನ್ನೇ ರಚಿಸದಿದ್ದರೆ ಏನಾಗುತ್ತಿತ್ತು? ಅಂಡಮಾನಿನ ಇತರ ಸ್ವತಂತ್ರ ದ್ವೀಪವಾಸಿಗಳಾದ ಓಂಗೆ, ಸೆಂಟಿನೆಲೀಸ್‌ರಂತೆ ಜರವಾವಲಯವನ್ನು ಸಾರ್ವಜನಿಕ ದೃಷ್ಟಿಯಿಂದ ಹೊರಗುಳಿಸಬೇಕಿತ್ತು. ನನಗಂತೂ ಈ ದಾರಿ ಜೇನು ಹುಟ್ಟಿನ ನಡುವೆ ತೂರಿದ ಕೋಲಿನ ಹಾಗೇ ಅನಿಸಿತು. ರಾಷ್ಟ್ರೀಯ ಉದ್ಯಾನವೋ ಅಭಯಾರಣ್ಯದ್ದೋ ಹೆಸರಿನಲ್ಲಿ (ಅಂದರೆ ವನ್ಯದ ರಕ್ಷಣೆ ಪೋಷಣೆಯ ಹೆಸರಿನಲ್ಲಿ) ಮೂಲವಾಸಿಗಳನ್ನು ಅವ್ಯವಸ್ಥಿತವಾಗಿ, ನಿಷ್ಕರುಣೆಯಿಂದ ಎತ್ತಂಗಡಿ ಮಾಡಿ (ಮರು ನೆಲೆಗಾಣಿಸುವ ಆಶ್ವಾಸನೆ ಕಾಗದದಲ್ಲಿ ಮಾತ್ರ!) ಇಲಾಖೆಯ ರಚನೆಗಳನ್ನು ನಿರ್ಲಜ್ಜವಾಗಿ ಹೇರುವ ಧೋರಣೆಯೇ ಅಂಡಮಾನಿನಲ್ಲೂ ನಡೆದದ್ದು ಕಾಣುತ್ತೇವೆ. (ಸಾರ್ವಜನಿಕ ಸೇವೆಯ ಹೆಸರಿನಲ್ಲಿ ಶಪಥ ಕೈಗೊಳ್ಳುವ ನಮ್ಮ ಜನಪ್ರತಿನಿಧಿಗಳು ತಮ್ಮ ಅಧಿಕಾರಾವಧಿಯ ತಾತ್ಕಾಲಿಕ ನೆಲೆಯ ಶೃಂಗಾರಕ್ಕೆ ಲಕ್ಷಾಂತರ ರೂಪಾಯಿ ಹುಡಿಹಾರಿಸುತ್ತಿರುವ ಸಂಗತಿ ಈಗ ಕರ್ನಾಟಕದಲ್ಲಿ ಬಹು ಚರ್ಚೆಗೆ ಒಳಗಾಗಿದೆ)



ಇದ್ದಕ್ಕಿದ್ದಂತೆ ಬಸ್ಸಿನೊಳಗೇನೋ ವಿಶೇಷ ಸಂಚಲನ. ಜರವಾ ಜಪದೊಡನೆ ನಿರ್ವಾಹಕ "ಕಿಟಕಿ ಹಾಕಿ, ಏನೂ ಕೊಡಬೇಡಿ. ಫೋಟೋ ತೆಗೆಯಬೇಡಿ" ಹಿಂದೆ ಹೇಳಿದ್ದನ್ನೆ ಹೇಳುತ್ತಿದ್ದಂತೆ ಒಂದಷ್ಟು ಆದಿವಾಸಿಗಳು (ಆಫ್ರಿಕನ್ ಬುಡಕಟ್ಟುಗಳ ಛಾಯೆಯವರು) ದಾರಿಯ ಆಚೆ ಈಚೆ ಹರಡಿಕೊಂಡು ಇರುವುದು ಕಾಣಿಸಿತು. ತಮಾಷೆ ಎಂದರೆ ಗಂಡು, ಹೆಣ್ಣು, ಚಳ್ಳೆಪಿಳ್ಳೆಗಳ ಗುಂಪು ನಮ್ಮ (ವಾಹನ ಮೇಳದಲ್ಲಿ ಬರುವ ನಾಗರಿಕರ) ನಿರೀಕ್ಷೆಯಲ್ಲೇ ಇದ್ದಂತಿತ್ತು! ಪಿಳ್ಳೆಗಳನ್ನು ಬಿಟ್ಟರೆ ಎಲ್ಲರೂ ಸೊಂಟದ ಕೆಳಗೆ ಒಂದಲ್ಲ ಒಂದು ಸುತ್ತಿಕೊಂಡವರೇ. ಕರಿ ಮುಖ ಮೈಗೆ ಹಲವರು ಬೂದಿ ಬಡಿದುಕೊಂಡಂತಿದ್ದರು. (ಅಂದೇ ಅಪರಾಹ್ನ ಕೆಸರು ಕಕ್ಕುವ 'ಅಗ್ನಿಮುಖಿ'ಯೊಂದನ್ನು ಕಂಡಾಗ ಜರವಾಗಳ ಬೂದಿಯ ರೂಪು ಆ ಕೆಸರಿನದೇ ಇರಬೇಕೆಂದು ತರ್ಕಿಸಿದೆವು) ಬೇಕಾಬಿಟ್ಟಿಯಾಗಿ (ಎಲ್ಲರಿಗೂ ಕಡ್ಡಾಯವೆನ್ನುವಂತಿರಲಿಲ್ಲ ಎಂಬರ್ಥದಲ್ಲಿ) ಹಕ್ಕಿಯ ಗರಿ, ಬಳ್ಳಿ ಎಲೆಗಳ ಅಲಂಕಾರ ಮತ್ತೆ ಕೈಯಲ್ಲಿ ಬಿಲ್ಲು, ಬಾಣ, ಬಡಿಗೆ ಅವರನ್ನು ನಮ್ಮಿಂದ ಪ್ರತ್ಯೇಕಿಸುವಂತಿತ್ತು. ಆದರೆ ಚಡ್ಡಿ, ಬನಿಯನ್ನು, ಟೋಪಿಯಲ್ಲದೆ ನಾನು ಕಾಣದ ಇನ್ನೆಷ್ಟೋ ಸಂಗತಿಗಳು ಅವರಲ್ಲಿದ್ದಿರಬೇಕು. ಮತ್ತವು ಇಲ್ಲ ಇಲ್ಲಾ ಎಂದು 'ನಾವೇ' ಕೊಟ್ಟ ಉಡುಗೊರೆಗಳು ಎನ್ನುವುದೂ ಅರ್ಥವಾಗುತ್ತಿತ್ತು. ನಮಗೆ ಅವರನ್ನು ಕಾಣುವ ಕುತೂಹಲವಿದ್ದಷ್ಟೇ ಅವರಿಗೂ ತಮ್ಮನ್ನು ಕಾಣಿಸಿಕೊಳ್ಳುವ, ಅರಿವಿದ್ದೋ ಇಲ್ಲದೆಯೋ ನಮ್ಮಿಂದ ಬಿಕ್ಷೆ ಬೇಡುವ ಉತ್ಸಾಹ ಕಾಣುತ್ತಿತ್ತು. ಹೀಗೇ ದಾರಿ ಅಡ್ಡಗಟ್ಟಿದ (ಅವ್ಯವಸ್ಥಿತವಾಗಿ) ನಾಲ್ಕೆಂಟು ತರುಣರು ಬಸ್ಸುಗಳ ಸುತ್ತ ಸುಳಿದಾಡಿದರು. ಒಂದಿಬ್ಬರು ಕೈಯಲ್ಲಿದ್ದ ಬಿಲ್ಲೋ, ಕೋಲೋ ಬಸ್ಸಿನ ಬಾಡಿಗೆ ಬಡಿದು (ಪುಣ್ಯಕ್ಕೆ ಮುಚ್ಚಿದ್ದ ಕನ್ನಡಿಗಲ್ಲ) ಏನಾದರೂ ಕೊಡಿ ಎನ್ನುವ ಭಾವವನ್ನೂ ಪ್ರಕಟಿಸಿದರು. ನೋಡನೋಡುತ್ತಿದ್ದಂತೆ ಬಸ್ಸಿನ ಏಣಿ ಹಿಡಿದು ಎದುರು ಬಸ್ಸಿನ ಮೇಲೆ ನಮ್ಮ ಬಸ್ಸಿನ ಮೇಲೆ ಒಂದಿಬ್ಬರು ಏರಿ ಸವಾರಿಯೇ ಹೊರಟರು. ಚಾಲಕರು ಜರವಾಗಳಿಗೆ ಆಘಾತವಾಗದ ಎಚ್ಚರದಲ್ಲಿ ದಾರಿಬಿಡಿಸಿಕೊಳ್ಳಲು ಮಾತ್ರ ನಿಧಾನಿಸಿದ್ದವರು (ಅಥವಾ ನಿಲ್ಲಿಸಿದ್ದವರು) ಹಾಗೇ ಮುಂದುವರಿದರು. ಸುಮಾರು ಅರ್ಧ ಒಂದು ಕಿಮೀ ಹೋಗುತ್ತಿದ್ದಂತೆ ಏರುದಾರಿಯಲ್ಲಿ ನಮ್ಮೆದುರಿನ ಬಸ್ಸು ನಿಧಾನಿಸಿದಾಗ ಮೇಲಿದ್ದ ಇಬ್ಬರೂ ಇಳಿದು ಓಡಿದರು. ನಮ್ಮ ಮೇಲಿದ್ದವ ಮತ್ತೂ ಸ್ವಲ್ಪ ದೂರ ಬರುತ್ತಿದ್ದಂತೆ ಟಾಪಿಗೆ ಬಿಲ್ಲು ಬಡಿದು ಸಣ್ಣ ಗಲಭೆ ಮಾಡಿದ, ಪರೋಕ್ಷವಾಗಿ ಇಳಿಯುವ ಸೂಚನೆ ನೀಡಿದ ಮತ್ತು ಚಾಲಕ ನಿಧಾನಿಸುತ್ತಿದ್ದಂತೆ ಇಳಿದುಹೋದ. ಮತ್ತೊಂದೇ ಕಿಮೀ ಅಂತರದಲ್ಲಿ ಭಾರಟಾಂಗ್ ಎಂಬ ದಾರಿಯ ಮತ್ತು ನಮ್ಮ ಬಸ್ಸು ಪ್ರಯಾಣದ ಕೊನೆ ಬಂತು.




ನಾವೆಲ್ಲರೂ ಒಂದೇ

ಹ್ಯಾವ್ಲಾಕ್ ದೋಣಿಗಟ್ಟೆಯದೇ ಇನ್ನೊಂದು ರೂಪ ಈ ಭಾರಟಾಂಗ್. ನಾವು ಬಸ್ಸಿಳಿದು ಕಾದಿದ್ದ ದೊಡ್ಡ ಬೋಟುಗಳಲ್ಲಿ ತುಂಬಿಕೊಂಡೆವು. ಇಲ್ಲಿ ಸಮುದ್ರ ಎರಡು ಭೂಖಂಡಗಳ ನಡುವೆ ವಿಸ್ತಾರದ ಹೊಳೆಯಂತೆ ಚಾಚಿಕೊಂಡಿದೆ. ಆದರೆ ನೆನಪಿರಲಿ, ಇಲ್ಲಿ ನೀರಿಗೆ ಏಕಮುಖದ ಹರಿವಿಲ್ಲವಾದ್ದರಿಂದ

ಮೇಲ್ದಂಡೆ, ಕೆಳದಂಡೆ ಅನ್ನುವಂತಿಲ್ಲ. ಹಾಗಾಗಿ ನಮ್ಮ ದಾರಿ ಮುಗಿದ ಕ್ರಮದಲ್ಲಿ ನೀರಿನ ಮೇಲೆ ಎಡದಿಕ್ಕಿಗೆ ಸಾಗುತ್ತಾ ಎದುರು ದಂಡೆಯೆಡೆಗೆ 'ದೋಣಿಸಾಗಲಿ, ದೂರ ಹೋಗಲಿ' ಹಾಡು ಹರಿಯಿತು. ಸುಮಾರು ಇಪ್ಪತ್ತು ಮಿನಿಟಿನಲ್ಲಿ ಅಲ್ಲಿನೊಂದು ಪುಟ್ಟ ಪೇಟೆಯ ದೋಣಿಗಟ್ಟೆ ಸೇರಿದೆವು. ಅದು ನಮ್ಮ ಪ್ಯಾಕೇಜ್ ಟೂರಿನ ಅಧಿಕೃತ ಊಟೋಪಚಾರಗಳ ಕೇಂದ್ರ. ನಮಗೆಲ್ಲಾ ಕೈಗೊಂದು ತಿಂಡಿ ಪೊಟ್ಟಣ ಹಾಗೂ ಲೈಫ್ ಜ್ಯಾಕೆಟ್ ಕೊಟ್ಟು ಸಣ್ಣ ಸಣ್ಣ ಗುಂಪುಗಳಾಗಿ ವಿಂಗಡಿಸುತ್ತಾ ಸಣ್ಣ ದೋಣಿಗಳಿಗೆ ಏರಿಸಿದರು. ಒಂದೊಂದು ದೋಣಿಯಲ್ಲಿ ಐದಾರು ಜನ ಇದ್ದರೂ ವಿಂಗಡಿಸುವಾತ ಅಭಯನನ್ನು ಪ್ರತ್ಯೇಕಿಸಿ ಬಿಟ್ಟ! ಅನ್ಯ ಗುಂಪುಗಳು ನಾವು, ನಮ್ಮವರು ಎಂದು ಗುಲ್ಲು ಮಾಡಿ ಹೊಂದಾಣಿಕೆ ನಡೆಸುವುದನ್ನು ನೋಡಿ ಒಗ್ಗಟ್ಟು ಎನ್ನುವುದೋ ಸಣ್ಣತನ ಎನ್ನುವುದೋ ಅರ್ಥವಾಗಲಿಲ್ಲ. ಎಲ್ಲ ದೋಣಿಗಳೂ ಒಂದೇ ಗುರಿಯತ್ತ ಹೆಚ್ಚುಕಡಮೆ ಒಟ್ಟಿಗೇ ಹೋಗುತ್ತವೆ. ಮುಂದೆ ಆದ್ಯತೆಯಲ್ಲಿ ಸಮ್ಮಾನವೋ ಮದುವೆಮುಂಜಿಯಂಥ ಕೌಟುಂಬಿಕ ಕಾರ್ಯಕ್ರಮವೋ ನಡೆಯುವುದೇನೂ ಇರಲಿಲ್ಲ. ಹಾಗೆ ಒದಗುವ ಕ್ಷಣ ಕಾಲವಾದರೂ ಸಮಾನ ಗುರಿಯ ಇತರ ಜನರೊಂದಿಗೆ ಬೆರೆಯುವ ಅವಕಾಶವನ್ನು ತಿರಸ್ಕರಿಸುವ ಈ ಭಾವ ನನಗೆ ಎಂದೂ ಹಿಡಿಸಿಲ್ಲ. ಯಾವುದೇ ಪ್ರವಾಸ ಕಥನ ಆತ್ಮಕಥಾನಕದ ಒಂದು ಎಳೆಯೇ ಆದ್ದರಿಂದ ಇಲ್ಲೊಂದು ನನ್ನದೇ ಸಣ್ಣ ಉಪಕಥೆ ಹೇಳಿಬಿಡುತ್ತೇನೆ.

ನನ್ನ ಶಾಲಾ ದಿನಗಳಲ್ಲಿ ತಂದೆ ಅವರ ಕಾಲೇಜು ಎನ್.ಸಿ.ಸಿ ಶಿಬಿರ ಅಲ್ಲಿ ಇಲ್ಲಿ ನಡೆಸುತ್ತಿದ್ದರು. ಅಂಥ ಕೆಲವಲ್ಲಿ ಅವರು ನನ್ನನ್ನೂ (ಕೈಯಿಂದ ಖರ್ಚು ಹಾಕಿ. ಆ ಕಾಲದಲ್ಲಿ ಹಾಗೊಂದು ಅವಕಾಶ ಇತ್ತು.) ಶಿಬಿರಕ್ಕೆ ಸೇರಿಸಿದ್ದಿತ್ತು. ತಂದೆಯ ಉದ್ದೇಶವಾದರೂ ನನ್ನ ಲೋಕಾನುಭವದ ಪರಿಧಿ ವಿಸ್ತರಿಸುವುದೇ ಇತ್ತು. ಅಲ್ಲೆಲ್ಲ ನನ್ನ ಊಟ, ವಾಸ, ಚಟುವಟಿಕೆ ಇತರ ಶಿಬಿರಾರ್ಥಿಗಳೊಡನೆಯೇ ಇರುತ್ತಿತ್ತು ವಿನಾ 'ರಾಜಕುಮಾರ'ನದ್ದಲ್ಲ ಅರ್ಥಾತ್ ತಂದೆಯೊಡನೆ ಅಲ್ಲ. ಮುಂದುವರಿದು ನನ್ನ ಕಾಲೇಜು ದಿನಗಳಲ್ಲಿ ನಾನೇ ಎನ್.ಸಿ.ಸಿಯ ಒಂದು ಅಖಿಲ ಭಾರತ ಮಟ್ಟದ ನಾಯಕತ್ವ ಶಿಬಿರಕ್ಕಾಗಿ ಅಸ್ಸಾಂಗೆ ಹೋಗಿದ್ದೆ. ಸಹಜವಾಗಿ ಅಲ್ಲಿ ವಿವಿಧ ರಾಜ್ಯಗಳ ಪುಟ್ಟಪುಟ್ಟ ತಂಡಗಳು ಬಂದಿದ್ದವು. ಸಂಘಟಕರು 'ಭಾರತೀಯರೆಲ್ಲ ಒಂದೇ' ಎಂಬ ಭಾವ ಬೆಳೆಸಲು ಎಲ್ಲಾ ತಂಡಗಳನ್ನು ಮಿಶ್ರ ಮಾಡಿ ವಾಸ್ತವ್ಯದ ಗುಡಾರಗಳಿಗೆ ಹಂಚುವ ಪ್ರಯತ್ನ ಮಾಡಿದರು. ಹೆಚ್ಚು ಕಡಮೆ ಎಲ್ಲಾ ಭಾಷಾ-ತಿಚಿಡಿ ಮನೋಸ್ಥಿತಿಯವರೂ ನಿರ್ಲಜ್ಜವಾಗಿ ವಿರೋಧಿಸಿ, ಗೆದ್ದರು. ಪ್ರಯಾಣ ಕಾಲದಲ್ಲಿ ಕರ್ನಾಟಕದ ತಂಡಕ್ಕೆ ನಾಯಕನಾಗಿದ್ದವ ನಾನು. ಆದರೆ ನನ್ನನ್ನುಳಿದು ತಂಡದ ಹನ್ನೆರಡೂ ಜನ (ಇಪ್ಪತ್ತೊಂದು ದಿನದ ಶಿಬಿರ) ವಾಸ್ತವದಲ್ಲಿ ಹತ್ತು ಜನರಿಗೆ ಹೊಂದುವ ಗುಡಾರವನ್ನೇ ಬಯಸಿ, ಅನುಭವಿಸಿದರು. ಕೊನೆಗೆ ಸುಮಾರು ನೂರಾಮೂವತ್ತು ಶಿಬಿರಾರ್ಥಿಗಳಲ್ಲಿ, ಹಾಕಿದ್ದ ಹದಿನಾಲ್ಕೋ ಹದಿನೈದೋ ಗುಡಾರಗಳಲ್ಲಿ ಕೇವಲ ಎಂಟು ಮಂದಿಯ ನಮ್ಮ ಗುಡಾರವೊಂದೇ ನಿಜ ಭಾಷಾತೀತ, ಶುದ್ಧ ಭಾರತೀಯ! ಕೇವಲ ೬% ನಿಜ ಭಾರತೀಯರು! ದೇವಕಿ ಒಮ್ಮೆ ಕೇವಲ ತಾಯಿ-ಪ್ರಜ್ಞೆಯಲ್ಲಿ ಅಭಯನ್ನ ನಮ್ಮ ಗುಂಪಿಗೆ ಸೇರಿಸಿಕೊಳ್ಳಲು ಪ್ರಯತ್ನ ಮಾಡಿದಳು. ಮುಂದೆ ಅಲ್ಲಿ ಇಲ್ಲಿ ಅವನು ಎದುರಾದನಾದರೂ ಮಧ್ಯಾಹ್ನದವರೆಗಿನ ಓಡಾಟಗಳಲ್ಲಿ ನಮ್ಮದು ನಾಲ್ಕು ಜನರ ಗುಂಪಾಗಿಯೇ ಉಳಿಯಿತು!

ಕಾಂಡ್ಲಾದ ಗವಿ



ನಮ್ಮ ದೋಣಿಗಳು ಔಟ್ ಬೋರ್ಡ್ ಎಂಜಿನ್ ಹೊತ್ತ ಸಪುರ ರಚನೆಗಳು. ಹಿಂದೊಬ್ಬ ಚಾಲಕ ಎದುರು ಮೂತಿಯ ಮೇಲೊಬ್ಬ ನಾವಿಕ. ದೋಣಿಗರು ನಮಗೆ ಜಾಕೆಟ್ ಹಾಕಿಕೊಳ್ಳುವಲ್ಲಿ ಸಹಕರಿಸಿ ಎಂಜಿನ್ ಚಲಾಯಿಸಿಯೇ ಬಿಟ್ಟರು. ನಮಗೆ ಕೊಟ್ಟ ಪೊಟ್ಟಣದಲ್ಲಿ ಬಂದ ಮೂರೋ ನಾಲ್ಕೋ ಸಣಕಲು ಪೂರಿ ಬಾಜಿಯನ್ನು ನಾವು ಗಳಿಗೆಯಲ್ಲಿ ಮುಗಿಸಿ ನೀರನೋಟಕರಾದೆವು. (ತಿಂಡಿ ಕಟ್ಟಲು ಬಳಸಿದ್ದ ಕಾಗದ, ತೊಟ್ಟೆಗಳನ್ನು ನಾವಿಕ ಸಂಗ್ರಹಿಸಿದ – ನೀರಿಗೆಸೆಯಲು ಬಿಡಲಿಲ್ಲ!) ಎಂಜಿನ್ನಿನ ಭೀಕರ ಕೊಟಕೊಟ ಸದ್ದಿನಲ್ಲಿ ದಂಡೆಯನ್ನು ದಟ್ಟವಾಗಿ ಆವರಿಸಿದ್ದ ಸಸ್ಯರಾಶಿ ಬಿಟ್ಟು ಹೆಚ್ಚಿನ ಜೀವ ವೈವಿಧ್ಯ ಕಾಣುವ ಆಸೆ ನಮಗೆ ಇರಲಿಲ್ಲ. ನಮ್ಮ ಆ ಹೊತ್ತಿನ ಗುರಿ ಅದೇ ದ್ವೀಪದ ಇನ್ನೊಂದೇ ಭಾಗದಲ್ಲಿದ್ದ ಸುಣ್ಣದ ಗವಿ. ನಾವು ಹೊರಟ ದಂಡೆಗೆ ಸಮವಾಗಿ ಆದರೆ ಅಲ್ಲಿಗೆ ಬಂದ ದಿಕ್ಕಿನಲ್ಲೇ ಮತ್ತೆ ಹೋಗುತ್ತಿದ್ದೆವು. ಹೋಗುವಾಗ ದೂರನೋಟಕ್ಕೆ ಸಿಕ್ಕ ಹಸುರು ಈಗ ಸ್ಪಷ್ಟ ಕಾಂಡ್ಲಾವನ. ಅದರ ಬಲಿಷ್ಠವಾದ ಬೇರುಗಾಲುಗಳು ದ್ವೀಪಗಳ ನೆಲಕ್ಕೆ ಸುಭದ್ರ ಅಂಚು ಹೊಲಿದಂತೆಯೇ ಇತ್ತು. ಸಮುದ್ರದ ಸಾಮಾನ್ಯ ಭರತದ ಮೇಲಂಚಿನಿಂದ ಕನಿಷ್ಠ ಹತ್ತು ಹನ್ನೆರಡು ಅಡಿ ಮೇಲಕ್ಕೆ

ಹಬ್ಬಿದ ಇದರ ಕಾಂಡ ಸುನಾಮಿಯಂಥ ಪ್ರಾಕೃತಿಕ ವಿಪರೀತಕ್ಕೆ ಪ್ರಭಾವೀ ಪ್ರಾಕೃತಿಕ ತಡೆಗೋಡೆಯಂತೆ. ಕಾಂಡ್ಲಾದ ಬೇರುಗಾಲುಗಳ ಮೇಲೆ ಹೆಜ್ಜೆಯೂರುತ್ತಾ ದ್ವೀಪಶೋಧಿಸುವ ರಮ್ಯಾದ್ಭುತವನ್ನು ಮನಸ್ಸಿನಲ್ಲೇ ಚಪ್ಪರಿಸಿದೆವು. ಒಂದೆರಡು ಕಡೆ ಸ್ಪಷ್ಟವಾಗಿ ಕಾಂಡ್ಲಾ ಮುಕ್ತವಾಗಿ ಒಳನಾಡಿನತ್ತ ನೀರ ಕಾಲುವೆಯೊಂದು ಹೋದ ಹಾಗೋ ನೆಲದಿಂದ ತೊರೆಯೊಂದು ಹರಿದು ಬಂದು ಸಾಗರಕ್ಕೆ ಸೇರುವಂತೆಯೋ ಭಾಸವಾಗುತ್ತಿತ್ತು. ಪಶ್ಚಿಮ ಬಂಗಾಳದ ಸುಂದರಬನ್ಸ್ ವ್ಯಾಘ್ರಧಾಮ ಮತ್ತೆ ನೆನಪಿಗೆ ಬಂತು. ಅದು ಇಂಥದ್ದೇ ಪರಿಸರದಲ್ಲಿದೆ. ಆದರಲ್ಲಿ ನದಿಮುಖಜ ಭೂಮಿಯಾದ್ದರಿಂದ ಕಾಲುವೆಗಳು (ಬಂಗಾಲಿಗಳು ಇವನ್ನು ಖಾಲಿ ಎನ್ನುತ್ತಾರೆ) ಆಂತರ್ಯದಲ್ಲಿ ನದಿ ಸಾಗರದೊಡನೆ ಸಂಗಮಿಸುವ ರಚನೆಯಾಗಿರುವ ಸಾಧ್ಯತೆ ಹೆಚ್ಚು. ಇಲ್ಲಿನದು ಸಾಗರದ ನಡುವೆ ಮೊಳೆತ 'ನೆಲ'ವಾದ್ದರಿಂದ ಕಾಲುವೆಯಂತೆ ಕಾಣುವುದು ವಾಸ್ತವದಲ್ಲಿ ಕೇವಲ ಕೊರಕಲು. ಇದು ಕೇವಲ ಒಳನೆಲಕ್ಕೆ ಚಾಚಿದ್ದೂ ಇರಬಹುದು, ಈ ದಂಡೆಯಿಂದ ಆಚೆ ದಂಡೆಗೆ ಓಣಿಯೂ ಇರಬಹುದು. ಇಲ್ಲಿ ಕೇವಲ ಭರತ, ಇಳಿತ; ಏಕಮುಖದ ಪ್ರವಾಹ ಎಂದೂ ಇಲ್ಲ.

ಕಾಂಡ್ಲಾ ಎಡೆಯ ಕೆಲವು ಕೊರಕಲನ್ನು ಹಾಗೇ ಹಾಯ್ದು, ನಾಮಫಲಕ ಇದ್ದ ಒಂದರಲ್ಲಿ ನಮ್ಮ ದೋಣಿ ನುಗ್ಗಲು ಸಜ್ಜಾಯಿತು. ತಾರದಲ್ಲಿದ್ದ ಎಂಜಿನಿನ ಸದ್ದುಪೂರ್ತಿ ಇಳಿಯಿತು. ಚಾಲಕ ಎಂಜಿನಿನ ನಿರಂತರ ನೂಕು ಶಕ್ತಿಯನ್ನು ಪೂರ್ಣ ಇಳಿಸಿದ: ಕೊಟಟಟಟಟಟ ಬಿಟ್ಟು ಕೋಟಾ ಕೊಟಾ ಕೊಟಾ ಮಾತ್ರ. ಬಲು ಚಾಣಾಕ್ಷತೆಯಿಂದ ನಿಭಾಯಿಸುತ್ತಾ ಕೊರಕಲಿನ ಹಾವಿನ ಬಳುಕಿನಲ್ಲಿ ನುಗ್ಗಿಸಿದ. ಮೂಕಿಯ ಮೇಲಿದ್ದ ನಾವಿಕ ಅಲ್ಲೇ ನಿಂತು, ಜಲ್ಲೆ ಹಿಡಿದು ಸೂಕ್ಷ್ಮ ದಿಕ್ಕು ಬದಲಾಯಿಸುವ ಕೆಲಸ ಸುರುಮಾಡಿದ. ನೇರ ಬೇರಜಾಲದತ್ತ ನುಗ್ಗುತ್ತಿದ್ದ ಮೂಕಿಯ ಎದುರು ಜಲ್ಲೆಯನ್ನು ನೀರಿನಾಳಕ್ಕೆ ಬಿಟ್ಟು ಹಗುರಕ್ಕೆ ನೂಕುತ್ತಾ ಬಲಕ್ಕೆ ಹೊರಳಿಸಿದ. ಮತ್ತದು ಬಲದ ಅಂಚಿಗೆ ಒರೆಸುವ ಮುನ್ನ ಕೈ ಅಳವಿಗೆ ಬಂದ ಮರದೊಂದು ಗೆಲ್ಲನ್ನು ಜಗ್ಗಿ ಎಡಕ್ಕೆ ಸುಧಾರಿಸಿದ. ಅರ್ಧ ಚಂದ್ರಾಕೃತಿಯ ತಿರುವಿನಲ್ಲಿ ಮೂಕಿಯೇನೋ ಹಾಯ್ದು ದೇಹ ಒರೆಸುತ್ತದೆ ಎನ್ನುವಲ್ಲಿ ಮತ್ತೊಂದೇ ಮರದ ಗೆಲ್ಲಿಗೆ ಜಲ್ಲೆಯ ಒತ್ತು ಕೊಟ್ಟು ದೋಣಿಯೇ ಬಳುಕಿತೋ ಎನ್ನುವಂತೆ ನಯಸಾಣೆ ಮಾಡಿದ. ಆ ಕಿಷ್ಕಿಂಧೆಯಲ್ಲು ಎದುರಿನಿಂದ ಇನ್ನೊಂದು 'ಕೊಟಾ ಕೊಟಾ' ಎದುರಾಗಬೇಕೇ! ಮಂಗಳೂರಿನ ಬಂದರದಲ್ಲಿ ಲಾರಿ ಲಾರಿಗಳ ಸಂವಾದದಲ್ಲಿ ಪಾರಾಗುವ ನಗರಸಾರಿಗೆ ಬಸ್ಸಿನ ಚಾಲಕನ ಸಹಜ ಪ್ರಾವೀಣ್ಯ ಎರಡೂ ನಾವೆಯ ಚಾಲಕರಿಗಿತ್ತು; ನಾವು ಲೈಫ್ ಜಾಕೆಟ್ ಗಂಟುಗಳನ್ನು ಪರಿಶೀಲಿಸಿದ್ದು ಅನಾವಶ್ಯಕವಿತ್ತು!

ಸಣ್ಣ ಕೆರೆಯಂತೆ ವಿಸ್ತರಿಸಿದ ಜಾಗವೊಂದರಲ್ಲಿ ದೋಣಿಗಟ್ಟೆ ಮಾಡಿದ್ದರು. ಅಲ್ಲೂ ಕಾಂಡ್ಲಾ ಕಾಂಡಗಳ ಸೊಂಟದಿಂದ ಸೊಂಟಕ್ಕೆ ಬಿದಿರ ಸಲಿಕೆಗಳ ಚಾಪೆಯನ್ನೇ ಕಟ್ಟಿ ಒಂದಷ್ಟು ನಡೆದೇ ನೆಲ ಕಾಣುವಷ್ಟು ಕಾಂಡ್ಲಾವನ ಹೆಣೆದುಕೊಂಡಿತ್ತು; ಬುದ್ಧಿಪೂರ್ವಕವಾಗಿ ಹೇಳುವುದಾದರೆ ಉಳಿಸಿದ್ದರು ಎನ್ನುವುದು ಹೆಚ್ಚು ಸೂಕ್ತ! ನಮ್ಮ ಪಶ್ಚಿಮ ಘಟ್ಟದಲ್ಲಿ ಕತ್ತಿ, ಗುದ್ದಲಿಗಳ ಭ್ರಾಂತಿಯಲ್ಲಿ (ಮುಂದುವರಿದ ಯಾಂತ್ರಿಕ ರೂಪವೇ ಈ ಮಾರಿಹಲಗೆಗಳು ಅರ್ಥಾತ್ ಜಚಿಡಿಣಣು ಟಠತಜಥಿ) ದಟ್ಟ ಕಾಡುಗಳು ತರ್ಕವಿಲ್ಲದ ಅಸಂಖ್ಯ ಅಣೆಕಟ್ಟುಗಳು ಹಿಡಿದಿಡಬಹುದಾದ ನೀರಿಗಾಗಿ, ಮಲೆತು ನಿಂತ ಘಟ್ಟಗಳು ವಿವೇಚನೆಯಿಲ್ಲದ ಅಭಿವೃದ್ಧಿಯ ಸಾಕ್ಷಿಗಳಾಗಿ ಬೋಳು, ಮಟ್ಟವಾಗುತ್ತಿರುವಾಗ ಇಲ್ಲಿ ಹತ್ತಿಪ್ಪತ್ತಡಿಯಾದರೂ ಪ್ರಾಕೃತಿಕ ಸ್ಥಿತಿ ಉಳಿಯುವ ವ್ಯವಸ್ಥೆಯಾದದ್ದು ನಮಗೆ ನಿಜಕ್ಕೂ ಖುಶಿಕೊಟ್ಟಿತು.

***

ಈ ಕಂತಿನ ಕೊನೇ ವಾಕ್ಯದ ಬಗ್ಗೆ ಒಂದು ಟಿಪ್ಪಣಿ: ೨೦೦೮ರ ಸೆಪ್ಟಂಬರ್ ಉದಯವಾಣಿಯಲ್ಲಿ ನೀವೆಲ್ಲ ಓದಿರಬಹುದಾದ ಇಲ್ಲವೇ ಈಗಲೂ ಇಲ್ಲೇ ನನ್ನ ಬ್ಲಾಗಿನ ವನ್ಯಲೋಕ ವಿಭಾಗದೊಳಗೆ ಓದಬಹುದಾದ 'ಗುಂಡ್ಯಕ್ಕೆ ಗುಮ್ಮ ಬರುತಿದೆ'ಯಲ್ಲಿ ಉಲ್ಲೇಖಿತ ಗುಂಡ್ಯ ಯೋಜನೆಗೆ ಇಂದು (೨೩–೫–೨೦೦೯) ಸಕಲೇಶಪುರದಲ್ಲಿ ಮುಖ್ಯಮಂತ್ರಿ ಶಿಲಾನ್ಯಾಸ ಮಾಡಿದ್ದಾರೆ. ಈ ಯೋಜನೆಯ ಎರಡೂ (ಮೊದಲನೆಯದು ಹಾಸನದ ಹೊಂಗಡಹಳ್ಳದಲ್ಲೂ ಎರಡನೆಯದು ದಕ ಜಿಲ್ಲೆಯ ಗುಂಡ್ಯದಲ್ಲೂ ನಡೆದಿತ್ತು) ಸಾರ್ವಜನಿಕ ಅಹವಾಲು ಸ್ವೀಕಾರ 'ನಾಟಕ'ದಲ್ಲಿ ಪರಿಸರಪರವಾದ, ಸ್ಪಷ್ಟ ದಾಖಲೆಗಳ ಆಧಾರದ ವಿರೋಧವನ್ನು ನಮ್ಮ (ಮಂಗಳೂರಿನ) ನಿರೇನ್ ಜೈನ್, ಕಾನೂನು ಅಬದ್ಧವನ್ನು (ಸಕಲೇಶಪುರದ ವಕೀಲ) ಕಿಶೋರಕುಮಾರ್ ಲಿಖಿತವಾಗಿ (ಸ್ವೀಕೃತಿಯೊಡನೆ) ಕೊಟ್ಟಿದ್ದಾರೆ. ಆದರೆ ತಮಾಷೆ ಎಂದರೆ ವಿಚಾರದ ಬಲದಲ್ಲಿ ನಿರ್ಧಾರವಾಗಬೇಕಾದ ಸಾರ್ವಜನಿಕ ಅಹವಾಲು, ಕಲ್ಪಿತ (ಪರ, ವಿರೋಧಗಳ) ತಲೆಲೆಕ್ಕದಲ್ಲಿ ನಡೆದಿದೆ. ದೂರುವಂತಿಲ್ಲ, ಪ್ರಜಾಪ್ರಭುತ್ವ ನಡೆದಿರುವುದೇ ಈ ಮಾನದಲ್ಲಿ! ಆನಂದಾ ಐದು ವರ್ಷ ಕಳೆದು ಭಾರತ ಪ್ರವಾಸಕ್ಕೆ ಬರಬಹುದಾದ ನಿನಗೆ ಹೊಂಗಡಹಳ್ಳದ ಜಿಗಣೆ, ಇಲಿ ಸಂರಕ್ಷಣಾರಣ್ಯಕ್ಕೆ ಸ್ವಾಗತ!! ಆಗ ಬಹುಮತದ ತೀರ್ಪಿಗೆ ಬದ್ಧವಾಗಿ ನೀನೂ ನಾವೂ ಹಾಕಲೇಬೇಕು "ಕೊತ್ತಂಬರಿ ಮರಕ್ಕೆ ಜೈ"!?#@$#@$!#

ಪತ್ರ ಏಳು

ಪ್ರಿಯ ಆನಂದಾ,

ತೊಂಗಲಿನ ಕಲಾಶಾಲೆ



ಕಾಂಡ್ಲವನದ ದೋಣಿಗಟ್ಟೆಯಲ್ಲಿಳಿದ ನಾವು ನಾವಿಕನೊಬ್ಬೊಬ್ಬನ ನೇತೃತ್ವದಲ್ಲಿ, ಸಣ್ಣ ಸಣ್ಣ ತಂಡಗಳಲ್ಲಿ, ಪಾಳುಬಿದ್ದ ಗದ್ದೆಯಂತಹ ಹರಹಿನಲ್ಲಿ, ಕೇವಲ ಸವಕಲು ಜಾಡಿನಲ್ಲಿ ಒಳನಾಡಿನತ್ತ ನಡೆದೆವು. ನಿಂಬೇ ಶರಬತ್, ಸಣ್ಣಪುಟ್ಟ ತಿನಿಸು ಪಾನೀಯಗಳ ಒಂದೆರಡು ಜೋಪಡಿ ಬಿಟ್ಟರೆ ಏನೂ ಮನುಷ್ಯ ರಚನೆಗಳ ಹಾವಳಿ ಅಲ್ಲಿಗೆ ತಲಪಿದಂತಿರಲಿಲ್ಲ. ಮುಂದುವರಿದಂತೆ ಕೃಷಿಯ ವೈಭವ ಒಂದನ್ನು ಕಳೆದು ಪಕ್ಕಾ ನಮ್ಮದೇ ಹಳ್ಳಿಗಳನ್ನು ನೆನಪಿಗೆ ತರುವ ಪುಟ್ಟ ಜನವಸತಿ ಕಾಣಿಸಿತು. ಒಂದೋ ಎರಡೋ ಬಿಡಾರ ಕಂಡ ನೆನಪು. ಆದರೆ ಅವರ ಜೀವನಯಾಪನೆಯ ಪರಿ ಏನೆಂದು ಯೋಚಿಸಲೂ ಪುರುಸೊತ್ತಿಲ್ಲದ ಧಾವಂತ ನಮ್ಮದು...

ನಮ್ಮ ಬಿಸಲೇ ಹಳ್ಳಿಯಲ್ಲಿ ಹೀಗೇ ಗದ್ದೆಯೊಂದರ ಕಟ್ಟಪುಣಿಯಲ್ಲಿ (=ದಂಡೆ, ಬದು) ಪುಟ್ಟ ಶಿಖರವೊಂದರ ಗುರಿ ಇಟ್ಟುಕೊಂಡು ಧಾವಿಸುತ್ತಿದ್ದಾಗ ಒಮ್ಮೆಗೆ ಮೆಟ್ಟಿದ ಬಿಸಿ ಆನೆ ಲದ್ದಿ ನೆನಪಾಯ್ತು. ಮತ್ತೆ ಪ್ರತಿ ಹೆಜ್ಜೆಗೂ ಎದುರಿನ ಕಾಡಿನ ಸಂಚಲನ, ಅಲ್ಲಿಗೆ ಸಹಜವಾದ ಸದ್ದುಗಳು ನಮಗೆ ಗಜಮೂಲದವಿರಬಹುದೇ ಎಂಬ ತವಕ. ಅದು ಬೇಸಗೆಯ ಕೊನೆಯ ಪಾದ. ಸಿಕ್ಕ ವಿಸ್ತಾರ ಪಾತ್ರೆಯ ತೋಡಿನಲ್ಲಿ ಗೊಸರು ಹೆಚ್ಚಾಗಿದ್ದರೂ ತೆಳು ನೀರಿನ ಹರಿವು ಇದ್ದೇ ಇತ್ತು. ಆ ತೋಡಿನುದ್ದಕ್ಕೆ ನಡೆಯುವಲ್ಲಿ ಇನ್ನೂ ಪೂರ್ತಿ ನೀರು ತುಂಬದ ಆನೆಯ ಹೆಜ್ಜೆ ಗುಂಡಿಗಳು. ಇದ್ದಕ್ಕಿದ್ದಂತೆ ಅನತಿ ದೂರದಿಂದ ಮರದ ಗೆಲ್ಲು ಮುರಿದ ಸದ್ದು. ಮುಂಚೂಣಿಯ ಕರಿಯಣ್ಣನ ಹವಾಯ್ ಚಪ್ಪಲಿ ಗೊಸರಿನಂಟಿನಿಂದ ಮೇಲೇಳಲಿಲ್ಲವೋ ಇವನೇ ಮರವಟ್ಟು ಕಾಲೆತ್ತಲಿಲ್ಲವೋ ತಿಳಿಯುವುದರೊಳಗೆ ದಟ್ಟ ಪಿಸುನುಡಿ ಹಬ್ಬಿತು, ಆನೆ! ಇಡೀ ಸಾಲಿನ ಲಯ ತಪ್ಪಿಹೋಯ್ತು.

ಹೌದು, ಹಾಗೇ ಇಲ್ಲೂ ಆಯ್ತು. ಒಳನಾಡಿನತ್ತ ಧಾವಿಸುತ್ತಿದ್ದ ಮುಂದಾಳು ಒಮ್ಮೆಲೆ ಹಾವು ಮೆಟ್ಟಿದವನಂತೆ ನಿಂತ! ಇದು ಅಕ್ಷರಶಃ ನಿಜ, ಸಣ್ಣ ತಿದ್ದುಪಡಿ – ಕಟ್ಟುಕಟ್ಟಿನ ಈ ಭಾರೀ ಹಾವು ಸತ್ತುಬಿದ್ದಿತ್ತು. ವಾಸ್ತವವಾಗಿ ಅದೇನೂ ಅಂಥ ದೊಡ್ಡ ಸಂಗತಿಯಲ್ಲ. ದ್ವೀಪಸ್ತೋಮದಲ್ಲಿ ಯಾವುದೇ ಆಕ್ರಮಣಕಾರೀ ಪ್ರಾಣಗಳಿಲ್ಲ ಎಂದು ತಿಳಿದಿದ್ದದ್ದಲ್ಲದೆ, ಐದಾರು ದಿನಗಳನ್ನು ಕಳೆದ ಸ್ಥಿತಿಯಲ್ಲಿ ನಮ್ಮ ಮನಸ್ಸೂ ಗಟ್ಟಿಗೊಂಡಿತ್ತು. ಒಮ್ಮೆಗೆ ಹಾವು ಕಾಣಿಸಿದಾಗ, ಅದೂ ಭಯಂಕರ ವಿಷಕಾರಿಯೇ ಇರಬಹುದು ಎಂದೆಲ್ಲಾ ತಲೆಯಲ್ಲಿ ಮಿಂಚು ಹೊಡೆದಾಗ ತಡವರಿಸಿದೆವು ಅಷ್ಟೇ. ಮರುಕ್ಷಣದಲ್ಲಿ ಚೇತರಿಸಿಕೊಂಡು ಮುಂದುವರಿದೆವು.

ಸಣ್ಣ ದಿಬ್ಬ ಸಾಲನ್ನು ಸಮೀಪಿಸುತ್ತಿದ್ದಂತೆ ಜಾಡು ಸಪುರ ಕೊರಕಲಿನಾಳಕ್ಕೆ ಇಳಿಯಿತು. ಆಚೀಚಿನ ಪ್ರಾಕೃತಿಕ ಗೋಡೆಯ ತುಂಬಾ ನೂರಾರು ವರ್ಷಗಳ ನೀರ ಒಸರಿಕೆಯೊಡನೆ ಮೂಡಿದ ಕುಸುರಿ ಶಿಲ್ಪ; ಹನಿ ಹನಿ ಕಳೆದು ಉಳಿದ ಘನಘನ ರೂಪ – ತೊಂಗಲು. ಮೇಣದ ಬತ್ತಿಯ ರಸ ಅದರದೇ ದೇಹದುದ್ದಕ್ಕೆ ಹರಿಹರಿಯುತ್ತ ಘನವಾಗುತ್ತ ಚಿತ್ರ ವಿಚಿತ್ರ ಆಕೃತಿಗಳನ್ನು ಮೂಡಿಸಿದ ಹಾಗೇ ಇದು ಎನ್ನಬಹುದೋ ಏನೋ! ಹೆಚ್ಚಾಗಿ ಇಂಥ ರಚನೆಗಳು ನೀರಿನೊಡನೆ ಬಂದ ಸುಣ್ಣದ ಅಂಶ ಶೇಖರಣೆಯಾಗಿ (ರಾತ್ರಿ ಹಗಲಾಗುವುದರೊಳಗಲ್ಲ, ನೂರಾರು ವರ್ಷಗಳ ದೀರ್ಘ ಕಾಲಮಾನದಲ್ಲಿ) ಶೇಖರಣೆಯಾಗಿ ಮೂಡುತ್ತದಂತೆ. ಇವು ನೆಲದತ್ತ ಚಾಚಿಕೊಂಡವನ್ನು (stalactites) ಇಳಿತೊಂಗಲು ಎಂದೂ ನೆಲದಲ್ಲಿ ಶೇಖರಣೆಗೊಂಡು ಶಂಖುವಿನಂತೆ ಬೆಳೆದವನ್ನು (stalagmites) ನೆಲತೊಂಗಲು ಎಂದೂ ಕರೆಯುತ್ತಾರೆ. (ಹಿಮಾಲಯದಂಥ ಅತಿಶೀತದ ವಲಯಗಳಲ್ಲಿ ಇಂಥವೇ ರಚನೆಗಳು ಕೇವಲ ನೀರು ಘನೀಕರಿಸುವುದರಿಂದಲೇ ಆಗಿರುವುದು ಧಾರಾಳ ಕಾಣಬಹುದು. ಬಹಳ ಜನಪ್ರಿಯ ಉದಾಹರಣೆ ಅಮರನಾಥದ ಶಿವಲಿಂಗ. ಆದರೆ ಅವೆಲ್ಲ ವಾರ್ಷಿಕ ಋತುಮಾನದ ಏರುಪೇರುಗಳಲ್ಲಿ 'ಉದ್ಭವಿಸಿ' 'ಅಂತರ್ಧಾನ'ವಾಗುವ ಗಂಟೆ ದಿನಮಾನದ ರಚನೆಗಳು. ತೊಂಗಲುಗಳ ಗೌರವ ಅವಕ್ಕೆ ಸಲ್ಲುವುದಿಲ್ಲ. ಶಿಲ್ಪ ಕಾರಕ ಶಕ್ತಿಯಲ್ಲಿ ಸೋರುವ ನೀರಷ್ಟೆ ಸಮಾನಗುಣ). ನೋಟಕರ ಕಲ್ಪನಾಶಕ್ತಿಗನುಗುಣವಾಗಿ ರಚನೆಗಳಲ್ಲಿ ದೇವಾಧಿದೇವತೆಗಳಿಂದ ಹಿಡಿದು ಅಸಂಗತ ಕಾವ್ಯದವರೆಗೆ ಏನೆಲ್ಲಾ ಗುರುತಿಸಬಹುದು. ಅಕ್ಕಪಕ್ಕಗಳನ್ನು ಕತ್ತೆತ್ತಿ ನೋಡುವುದೋ ಸಪುರ ಓಣಿಯಲ್ಲಿ

ಎದುರಿನಿಂದ ವಾಪಾಸಾಗುತ್ತಿರುವವರ ಮೈ ಒರೆಸದಂತೆ ಸುಧಾರಿಸುವುದೋ ಎನ್ನುವುದರೊಳಗೆ ಮೇಲೆ ಗೋಡೆ ಗೋಡೆ ಕೂಡಿ ಗವ್ವನೆ ಗವಿ ತೆರೆದುಕೊಂಡಿತು. ನಾಲ್ಕು ಹೆಜ್ಜೆ ಒಳ ಹೋಗುತ್ತಿದ್ದಂತೆ ಅಲ್ಲಿ ಮಾಡು ಹಿಂದೆಂದೋ ಕುಸಿದು ಗವಾಕ್ಷಿಯನ್ನೇ ತೆರೆದು ಕೊಟ್ಟಿತ್ತು. ಮುಂದೆ ಮಾಡು ತಗ್ಗುತ್ತಾ ಕತ್ತಲು ಗಾಢವಾಗುತ್ತಾ ಬಂದಲ್ಲಿಗೆ ನಾವು ಹಿಮ್ಮುಖರಾಗುವುದು ಅನಿವಾರ್ಯವಾಯ್ತು. ಆನಂದಾ ಇಲ್ಲಿ ಅನಿವಾರ್ಯವಾಗಿ ಎರಡು ಉಪಕಥೆಗಳು.

ಭಾರತದ ಸನ್ನಿವೇಶದಲ್ಲಿ 'ಪಶ್ಚಿಮಘಟ್ಟ' ಧಾರಾಳ ಕೇಳುತ್ತೇವೆ. ಹಾಗೇ ಪೂರ್ವಘಟ್ಟವೂ ಒಂದು ಇದೆ (ನಿನಗ್ಗೊತ್ತಿತ್ತಾ?). ನನ್ನ ಎರಡನೇ ಭಾರತ ಬೈಕ್ ಪ್ರವಾಸದಲ್ಲಿ ವಿಶಾಖಪಟ್ಟಣದಿಂದ ನೇರ ಪಶ್ಚಿಮಕ್ಕೆ ಸಾರಿ ಇದರ ಒಂದು ವೈಶಿಷ್ಟ್ಯ ಕಂಡದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳದಿರಲಾರೆ. ಅದುವೇ ಆ ವಲಯಗಳಲ್ಲಿ ಭಾರೀ ಕೇಳಿಬರುವ ಹೆಸರು ಅರಕ್ಕು ಕಣಿವೆ ಮತ್ತು ಬುರ್ರಾಗುಹೆ. ದಕ ಜಿಲ್ಲೆಯ ಯಾವುದೇ ಕಣಿವೆ, ಗುಡ್ಡೆ, ಪದವು (= ಗುಡ್ಡೆ ನೆತ್ತಿಯ ಸಮತಳ ಭೂಮಿ, ಮೈದಾನ) ಕೊಡುವ ದೃಶ್ಯದೆದುರು ಅರಕ್ಕು ನಿವಾಳಿಸಿ ಒಗೆಯಬಹುದು. ನಾಲ್ಕು ಚರುಮುರಿ ದುಕಾನು ಎರಡು ಡಬ್ಬಿ ಹೋಟೆಲುಗಳ ಕೊಳಕಿನ ಅರಕ್ಕು ಕಣಿವೆಗೆ ಸುತ್ತು ಗುಡ್ಡಗಳೇನೋ ಇವೆ. Added attraction ಊಂತ ಜಲಪಾತ ಒಂದರ ಉಲ್ಲೇಖವೂ ಇದರೊಡನೆ ಬರುತ್ತದೆ. ಆದರೆ ಅಂದು ನೀರು, ಹಸಿರು, ರಚನಾ ವೈಶಿಷ್ಟ್ಯವೇನೂ ಇಲ್ಲದೆ ಅರಕ್ಕು ಕಣಿವೆ ದೊಡ್ಡ ನಿರಾಶೆ. ವ್ಯತಿರಿಕ್ತವಾಗಿ ಅದಕ್ಕೂ ಸ್ವಲ್ಪ ಮೊದಲೆ ಸಿಗುವ ಬುರ್ರಾ ಗುಹೆಗಳು ಮಾತ್ರ ಪರಮಾದ್ಭುತ. ನಮ್ಮ ವಾಹನ ತಂಗುದಾಣದಲ್ಲೇ ಇಲಾಖೆ ಪ್ರವೇಶಶುಲ್ಕ ವಸೂಲಾತಿಯೊಡನೆ (ಬೇಕಾದವರಿಗೆ) ಮಾರ್ಗದರ್ಶಿ, ಬಾಡಿಗೆಗೆ ಟಾರ್ಚುಗಳನ್ನೂ ಒದಗಿಸುತ್ತಿತ್ತು. ಕಾಂಕ್ರೀಟು ಮೆಟ್ಟಿಲುಗಳಲ್ಲಿ ಇಳಿಯುವ ನಮ್ಮನ್ನು ಭಾರೀ ಗುಹೆ ಆವರಿಸಿಬಿಡುತ್ತದೆ. ಎಂಬತ್ತು–ನೂರಡಿ ಎತ್ತರಕ್ಕೆ ಸುಮಾರು ಅಷ್ಟೇ ಅಗಲಕ್ಕೆ ತೆರೆದುಕೊಂಡಿದ್ದರೂ ಯಾವುದೇ ಆಯಕ್ಕೆ ದಕ್ಕದ ಮಹಾದ್ವಾರವದು. ಒಳಗೂ ವರ್ಣಿಸಿ ಮುಗಿಯದ ವಿವಿಧ ಸ್ತರಗಳು, ತಿರುವುಗಳು, ಉಪಗುಹೆಗಳು, ಪೊಳ್ಳು ದಿಬ್ಬಗಳು – ಅದೊಂದು ಮಾಯಾಲೋಕ. ಅಲ್ಲೆಲ್ಲೋ ಮಾಡು ಸಣ್ಣದಾಗಿ ಕಿಂಡಿಬಿದ್ದು ದ್ವಾರದ ಬೆಳಕಿಗೆ ಪೂರಕ ಊರೆಗೋಲು (ಬೆಳಕಿನಕೋಲು) ಕೊಟ್ಟಿದೆ. ಒಳಗೊಳಗೆ ಹೋದಂತೆ ಕಣ್ಣಿಗೆ ತ್ರಾಸವಾಗದಂತೆ ಜೊತೆಗೆ ಪರಿಸರಕ್ಕೆ ಹೊರೆಯಾಗದೆ ಗುಹಾಶಿಲ್ಪವನ್ನು ಎತ್ತಿ ತೋರುವ ವಿದ್ಯುತ್ ದೀಪವ್ಯವಸ್ಥೆ ಇತ್ತು. ಇಲ್ಲಿನ ತೊಂಗಲುಗಳ ಅಗಾಧ ಅಪಾರ ರಚನೆಗಳ ಬಗ್ಗೆ ಹೇಳಹೊರಟರೆ ಅಕ್ಷರಶಃ ಸಾವಿರ ನಾಲಗೆ ಬೇಕು! ಅಲ್ಲಲ್ಲಿ ನೀರು ತೊಟ್ಟಿಕ್ಕುತ್ತಿತ್ತು. ಶೋಧಿಸಿದ ಆದರೆ ಸಾರ್ವಜನಿಕ ಪ್ರವೇಶಕ್ಕೆ ಭದ್ರವಲ್ಲದ, ಶೋಧವೇ ನಡೆಯದ ಹತ್ತಾರು ಒಳಗುಹಾಮುಖಗಳು ತೆರೆದುಕೊಂಡೂ ಇದ್ದವು. ಮುಖ್ಯ ಗುಹೆಯಲ್ಲಿ ಸುಮಾರು ಒಳಗಿನವರೆಗೆ ಪ್ರವಾಸಿಗಳ ಓಡಾಟಕ್ಕೆ ಪುಟ್ಟಪಥ ನಿರ್ಮಿಸಿ, ಕವಲುಗಳಲ್ಲಿ ನುಗ್ಗಿ ಸಾಹಸ ಮಾಡದಂತೆಯೂ ಅವಘಡಕ್ಕೆ ಸಿಲುಕದಂತೆಯೂ ಬೇಲಿ, ನಾಮಫಲಕಗಳ ತಡೆ ಕಟ್ಟಿದ್ದರು. ಪತ್ರಲಹರಿಯ ಓಟವನ್ನು ಬಿಟ್ಟು ಅದರ ವಿವರಗಳನ್ನು ಹುಡುಕಿ ಕೊಡುವ ಸಾಹಸ ಸದ್ಯ ಮಾಡುವುದಿಲ್ಲ. ಅಂದಿನ ಟಿಪ್ಪಣಿಗಳನ್ನು ತೆಗೆದು, ಆಕರಗಳನ್ನು ತೆರೆದು ನಿಖರ ವಿವರಗಳನ್ನು ಅದರ ಮೇಲೆ ನನ್ನ ಭಾವವಿಸ್ತರಣ ಕೊಡುವುದನ್ನು ಮುಂದೆಂದಾದರೂ ಬರವಣಿಗೆಗಿಳಿಯಬಹುದಾದ ನನ್ನ ಭಾರತ ಪ್ರವಾಸ ಕಥನಕ್ಕೆ ಮೀಸಲಿಟ್ಟಿದ್ದೇನೆ. ಹಾಗೇಂತ ಅದೆಂದು ಬರುತ್ತದೆ ಎಂದು ಕೇಳಬೇಡ, ಬಾರದೆಯೂ ಇರಬಹುದು!! ಏನೇ ಇರಲಿ, ಸುತ್ತಾಡಲು, ಒಂದೊಂದು ಹೆಜ್ಜೆಯಲ್ಲೂ ಗಂಟೆಗಟ್ಟಳೆ ಧ್ಯಾನಿಸಲು ಬುರ್ರಾ ನೀಡುವ ಪ್ರೇರಣೆ ಎಂದೂ ಮಾಸದು.

ತೊಂಗಲು, ದೀರ್ಘಕಾಲೀನ ರಚನಾವೈವಿಧ್ಯ ಉಳಿಸಿಕೊಂಡ ಖ್ಯಾತಿಗಳೇನೂ ಇಲ್ಲದಿದ್ದರೂ ನಮ್ಮ ಕರಾವಳಿ ಜಿಲ್ಲೆಗಳಲ್ಲಿ ಪ್ರಾಕೃತಿಕ ಗುಹೆಗಳಿಗೇನೂ ಕೊರತೆಯಿಲ್ಲ. ನೆಲ್ಲಿತೀರ್ಥದ ಕೊಳ, ನೆಲ್ಲಿತಟ್ಟು ತೀರ್ಥದ ಜಲಪಾತ, ಜಾಂಬ್ರಿಯ ಐತಿಹ್ಯ, ಅಂಬರೀಷ ಗುಹೆಯ ಜಾನಪದ, ಕನಕಮಜಲಿನ ಚಾರಿತ್ರಿಕತೆ, ದಂಬೆಗುಡ್ಡೆಯ ಜಲಸಮೃದ್ಧಿ, ಸೂಳೆಪದವಿನ ಬಾವಲಿಸೈನ್ಯ, ಮಂಡೆಕೋಲಿನ ಪಿಲಿಬಾಂಜಾರ, ಸುಳ್ಳಮಲೆ ಮತ್ತು ಗುಗ್ಗುಳಮಾಟೆಗಳ ತೀರ್ಥಸ್ನಾನ, ಪೊಸಡಿಗುಂಪೆಯ ಪಾಂಡವರ ಬಾವಿ ಮತ್ತು ತೀರ್ಥ ವಿಭೂತಿಗುಹೆಗಳು, ಅನಂತಪುರದ 'ಬಬ್ಯನಿವಾಸ' ಹೀಗೆ ಪಟ್ಟಿಮಾಡಿದಷ್ಟೂ ಮುಗಿಯದ ಗುಹೆಗಳನ್ನು ನಾನು ತಂಡ ಕಟ್ಟಿ ಈ ವಲಯದಲ್ಲಿ ಶೋಧಿಸಿದ್ದು ನಿನಗೆ ಗೊತ್ತೇ ಇದೆ. ಆದರೆ ಇದ್ದ ಸ್ಥಿತಿಯಲ್ಲೂ ಅವನ್ನು ಗುರುತಿಸಿ, ಉಳಿಸಿಕೊಳ್ಳುವ ಕೆಲಸ ಮಾತ್ರ ಏನೂ ನಡೆದಿಲ್ಲ. ಎಲ್ಲೋ ಕೆಲವಕ್ಕೆ ದೇವಾಲಯಗಳ ಸಂಬಂಧ ಇರುವುದರಿಂದ ತೀರಾ ಸೀಮಿತ ಸಾರ್ವಜನಿಕ ಭೇಟಿ ನಡೆಯುತ್ತದೆ. ಉಳಿದಂತೆ ಕಾಶಿಗೋ ರಾಮೇಶ್ವರಕ್ಕೋ ಭೂಗತ ಮಾರ್ಗದ ಕನಿಷ್ಠ ಗೌರವವೂ ದಕ್ಕದೆ ಬೇಟೆಯ ಕಣವಾಗಿ, ಅಕ್ರಮ ಚಟುವಟಿಕೆಗಳ ತಾಣವಾಗಿ, ಕಸದ ಕುಪ್ಪೆಯಾಗಿ ಪರಿವರ್ತನೆಗೊಂಡಿವೆ. ಗುಹೆಯ ಹೆಸರಿನಲ್ಲಿ ಪ್ರಚಾರ ಗಿಟ್ಟಿಸಿದರೂ ಅದರ ಉಳಿವಿಗೇ ಸಂಚಕಾರ ತರುವ ಅಭಿವೃದ್ಧಿಯ ಕಾಮಗಾರಿಗಳು ನಡೆದಿವೆ.

ಕೆಸರುಮುಖಿ



ಬಂದಂತೆಯೇ ದೋಣಿಯೇರಿ ಭರಟಾಂಗ್ ಸೇರಿದೆವು. ಮುಂದಿನದು ಜೀಪು ಸವಾರಿಯ ದಾರಿ. ದೂರ, ತಗುಲಿದ ಸಮಯ ಇತ್ಯಾದಿ ನೆನಪಿನಿಂದ ದೂರವಾಗಿವೆ ಆದರೆ ಕೊನೆಗೆ ಜೀಪಿಳಿದ ಜಾಗ ಮಾತ್ರ ದಟ್ಟ ಕಾಡಿನ ಎಲ್ಲೂ ಅಲ್ಲದ ಒಂದು ಮೂಲೆ. ಮುಂದಕ್ಕೂ ಅಸ್ಪಷ್ಟ ದಾರಿ ಇತ್ತು ಆದರೆ ವಾಹನ ಸಂಚಾರ ನಿರ್ಬಂಧಿಸಿದ್ದರು. ಅಲ್ಲಿ ನೂರಿನ್ನೂರು ಅಡಿ ಉದ್ದಗಲಕ್ಕೆ ಮರಗಿಡಗಳ ಸುಳಿವಿರದ ಬೋಳು ದಿಬ್ಬ ರಣಗುಡುವ ಬಿಸಿಲಿನಲ್ಲಿ ಹರಡಿಕೊಂಡಿತ್ತು. ಕಾರುಲಾರಿಗಳ ವರ್ಕ್‌ಶಾಪಿನಲ್ಲಿ ಮಡ್ಡಿ ಎಣ್ಣೆ ಕುಡಿದ ಮಣ್ಣಿನ ಹಾಗೆ ನೆಲ ಕರಿ ಕರಿ. ಅದೇ ನಮ್ಮನುಭವಕ್ಕೆ ಪ್ರಥಮವಾಗಿ ಸಿಕ್ಕಿದ್ದ ಪ್ರಾಕೃತಿಕ ವೈಶಿಷ್ಟ್ಯ - Mud Volcano ಅರ್ಥಾತ್ ಕೆಸರ ಬುಗ್ಗೆ! ಅಗ್ನಿಮುಖಿಗಳು ಬರಿಯ ಬೆಂಕಿ ತೋರಿಸಿ, ಲಾವಾ ಹರಿಸುವುದಲ್ಲ. ಸಾಕಷ್ಟು ಹೊಗೆ, ಉಗಿ ಅಬ್ಬರದೊಡನೆ ಕಲ್ಲು ಮಣ್ಣು ಬೂದಿಯನ್ನೂ ಕಕ್ಕುತ್ತವೆ ಎಂದು ಕೇಳಿದ್ದೆವು. ವಾಸ್ತವದಲ್ಲಿ ಇಲ್ಲೂ ಒಂದು ಅಗ್ನಿಮುಖಿ, ತನ್ನೊಳಗುದಿಗೆ ಹಿಂದೆಂದೋ (ಮನುಷ್ಯನ ಆಯುರ್ಮಾನದ ಲೆಕ್ಕ ಹಾಕುವುದೇ ಆದರೆ ಸಾವಿರಾರು ವರ್ಷಗಳ ಹಿಂದೆ!) ಬಾಯಿ ಕಳೆದದ್ದಿರಬೇಕು. ಆದರೆ ಕಾಲಾಂತರದಲ್ಲಿ ಒಳಗಿಂದೊಳಗೇ ಸಾಗರದ ನೀರು, ಮಣ್ಣು ಅದರಲ್ಲಿ ನುಗ್ಗಿ ದಮ್ಮು ಕಟ್ಟಿಸಿರಬೇಕು. ಹಾಗಾಗಿ ಒಳಗಿನ ಒತ್ತಡಕ್ಕೆ ಇಂದು ಹೊರಜಿನುಗುವುದು ಕೇವಲ ಕರಿ ಕರಿ ಕೆಸರು ಮಾತ್ರ. ಸುಮಾರು ನೂರಡಿ ಗುಣಿಸು ನೂರಡಿ ಜಾಗಕ್ಕೆ ರಕ್ಷಣಾ ಬೇಲಿ ಹಾಕಿ ಕೆಸರಕಣ್ಣುಗಳನ್ನು ಜನ ಸಮೀಪಿಸದಂತೆ ವ್ಯವಸ್ಥೆ ಮಾಡಿದ್ದಾರೆ. ಅತ್ಯುತ್ಸಾಹಿಗಳು ಬೇಲಿ ಹಾರದಂತೆ, ಕಲ್ಲು ಕಸ ಎಸೆದು ಪ್ರಾಕೃತಿಕ ಸ್ಥಿತಿಯನ್ನು ಕೆಡಿಸದಂತೆ (ಯಾರಿಗ್ಗೊತ್ತು, ಅಲ್ಲಿ ನೆಲಕುಸಿದು ಜೀವನಷ್ಟವಾಗುವ ಸಾಧ್ಯತೆಯೂ ಇರಬಹುದು) ಒಂದು ಪಾರದ ಜನವನ್ನೂ (ಹೆಂಗಸು) ಇಟ್ಟಿದ್ದಾರೆ. ಆವರಣದ ಒಳಗೆ ಹತ್ತಿಪ್ಪತ್ತಡಿ ಅಂತರದಲ್ಲಿ, ಒಂದೆರಡು ಬೆರಳ ಗಾತ್ರದ ಅಸ್ಪಷ್ಟ ತೂತದಿಂದ ತುಸುವೇ ಉಗಿ ಸುಳಿದಂತೆ, ಗುಳ್ಳೆ ಸಿಡಿದಂತೆ, ಗೋಬರ್ ಗ್ಯಾಸ್ ಪ್ಲಾಂಟಿನ ಕೊನೆಯಲ್ಲಿ ಗ್ಯಾಸ್ ಕಳೆದುಳಿದ ಸಗಣಿಪಾಕ ಜಿನುಗಿದಂತೆ, ಸಣ್ಣ ಸಣ್ಣ ಬುದ್ಬುದಿಕೆಯಲ್ಲೂ ನಮ್ಮ ಪುಟ್ಟ ಬೊಗಸೆ ತುಂಬಬಹುದಾದಷ್ಟೇ ಕರಿ ಮಡ್ಡಿ ಹೊರ ಉಕ್ಕುತ್ತಿತ್ತು. ಮೊಂಬತ್ತಿಯ ನೀರಿನಂತೆ ವಿವಿಧ ಧಾರೆಗಳಲ್ಲಿ ಇಳಿದಿಳಿದು ಸ್ಥಿರವಾಗುತ್ತಿತ್ತು. ನನಗೆ ಹಿಂದೆ ಊರಲ್ಲಿ, ನಿಖರವಾಗಿ ಹೇಳುವುದಾದರೆ ಬೆಟ್ಟಂಪಾಡಿಯ ಬೆಂದ್ರ್ ತೀರ್ಥದಲ್ಲಿ (= ಬಿಸಿನೀರ ಕೆರೆ) ಇದರದ್ದೇ ಇನ್ನೊಂದು ರೂಪವನ್ನು ನೋಡಿದ್ದು, ಕೆರೆಗಿಳಿದು ಅನುಭವಿಸಿದ್ದು ನೆನಪಿಗೆ ಬಂತು. ಬೆಂದ್ರ್ ತೀರ್ಥದಷ್ಟಲ್ಲದಿದ್ದರೂ ಇಲ್ಲಿನ ಕೆಸರು ಸಾಕಷ್ಟು ಬಿಸಿಯಿತ್ತು, ಆಗೀಗ ಸಣ್ಣದಾಗಿ ಹಬೆಯಾಡುತ್ತಲೂ ಇತ್ತು. ಕುದುರೆಮುಖ ಗಣಿಗಾರಿಕೆಯ 'ಅದಿರಿನ ಪಾಯಸ' (slurry) ಕೊಳವೆ ಒಡೆದು ಸ್ಫಟಿಕ ನಿರ್ಮಲ ಝರಿಗಳನ್ನು, ಹಸಿರುಬಿಟ್ಟು ಇನ್ನೊಂದು ವರ್ಣವಿಲ್ಲ ಎನ್ನುವಂತಿದ್ದ ಪಶ್ಚಿಮ ಘಟ್ಟದ ಓರೆಯ ಕಾಡನ್ನೂ ವ್ಯಾಪಿಸಿದಂತೆ ಇದು ನಿರಂತರ ಹರಡುತ್ತಲಿತ್ತು. ತನ್ನ ಬಾಲವನ್ನೇ ಸಿಂಬಿಸುತ್ತಿ ಉನ್ನತಾಸನದಲ್ಲಿ ಕುಳಿತ ಕಪಿವೀರನಂತೆ ಮೆರೆದ ಕೆಸರಮುಖಿಯನ್ನು ಕುತೂಹಲ, ಭಯಮಿಶ್ರಿತ ಭಾವದಿಂದ ಬೇಲಿಗುಂಟ ಪ್ರದಕ್ಷಿಣೆ ಹೊಡೆದೆವು. ಉದ್ದಕ್ಕೂ ವಿಜ್ಞಾನದ ಮಿತಿಯಲ್ಲಿ ಅದು ಆ ಕ್ಷಣಕ್ಕೆ ವಿಶ್ರಾಂತವೆಂದು ಗಣಿಸಲ್ಪಟ್ಟರೂ ಎಂದೂ ಅಬ್ಬರಿಸಬಹುದು, ನಿರ್ಭಾವದ ಕೆಸರತೆರೆಯನ್ನು ಕಿತ್ತೊಗೆದು, ರಾಳ ಹೊಡೆದು ದೈತ್ಯವೇಷದಲ್ಲಿ ಧೀಂಗಣಿಸಬಹುದು ಎನ್ನುವ ಭಯ ತಲೆಯಲ್ಲಿ ತಿರುಗುತ್ತಲೇ ಇದ್ದದ್ದನ್ನು ಹೇಳದಿರಲಾರೆ.

ಕೆಸರಮುಖಿಯ ದಿಬ್ಬದ ತಪ್ಪಲಿನಲ್ಲಿ ಇಲಾಖೆ ಅಂಡಮಾನಿಗರ ಅಟ್ಟಳಿಗೆ ಮನೆಯ ರೂಪದಲ್ಲಿ ಒಂದು ನೆರಳಾಸರೆ ಕಲ್ಪಿಸಿತ್ತು. ನಮ್ಮನ್ನು ಅಲ್ಲಿಗೆ ತಂದಿದ್ದ ಜೀಪು ದಿನಕ್ಕೆ ಹತ್ತೆಂಟು ಟ್ರಿಪ್ ಮಾಡುತ್ತದಂತೆ. ಹಾಗಾಗಿ ಜೀಪಿನ ಸಮಯ ಕಾಯುವ ನೆಪದಲ್ಲಿ ಹತ್ತು ಮಿನಿಟು ಅಟ್ಟಳಿಗೆಯಲ್ಲಿ ವಿಶ್ರಮಿಸಿ ಭರಟಾಂಗಿಗೆ ಮರಳಿದೆವು. ಅಲ್ಲೊಂದು ಮನೆಯಲ್ಲಿ ಊಟದ ವ್ಯವಸ್ಥೆ ಮಾಡಿದ್ದರು. ಷಡ್ರಸಗಳ ವೈಭವ ಇರಲಿಲ್ಲವಾದರೂ ಹೊಟ್ಟೆ ತುಂಬಿಸುವ ಮಟ್ಟದಲ್ಲಿ ಗುಣ ಶುಚಿ ತೃಪ್ತಿಕರವಾಗಿತ್ತು. ಎರಡು ಮೂರು ಬಸ್ಸುಗಳ ಜನ (ಜೀಪಿನ) ಕಂತು ಕಂತಿನಲ್ಲಿ ಬರುತ್ತಿದ್ದಂತೆ ಮನೆಯವರು ಸೀಮಿತ ಜಾಗದಲ್ಲಿ ಊಟ ಹಾಕಿ ಹಾಕಿ ಜನರನ್ನು ಹೊರ 'ನೂಕು'ತ್ತಿದ್ದರು. ಹೊರಗೆ ಒಂದು ತುಣುಕೂ ನೆರಳಿಲ್ಲದೆ ಬಿಸಿಲು ತಲೆ ತೂತಾಗುವಷ್ಟು ಖಾರವಿತ್ತು. ಅಲ್ಲೇ ನೂರಿನ್ನೂರು ಮೀಟರ್ ದೂರದ ದೋಣಿಗಟ್ಟೆಗೆ ನಡೆದು ಹೋಗಿ, ಇದ್ದ ಒಂದು ಜೋಪಡಿಯಂಥಾ ತಂಗುದಾಣ, ಮೂರು ಪದರದಲ್ಲಿ ಕಿತ್ತು ಬರುತ್ತಿದ್ದ ಪೈಂಟ್ ಬಡಕೊಂಡ ಹೋಟೆಲಿಗೆಲ್ಲಾ (ನೆಪಕ್ಕೆ ಚಾ ಕುಡಿದೆವು) ಹಂಚಿಕೊಂಡು ದೋಣಿ ಕಾದೆವು. ಉಪಾಧ್ಯರಿಗೆ ಅಂಚೆ ಡಬ್ಬಿಯೊಂದು ಕಂಡು ಹಳೆ ಸೀಕು ಮರುಕಳಿಸಿತು. "ಕಾಂಬ, ಇಲ್ಲಿಂದ ಸಾಲಿಗ್ರಾಮಕ್ಕೆ ಎಷ್ಟ್ ದಿನ ತೆಕ್ಕೊಂತಾ" ಎಂದು ಹೇಳುತ್ತಾ ತಮ್ಮ ಮನೆ ವಿಳಾಸ ಬರೆದ ಖಾಲಿ ಕಾರ್ಡೊಂದನ್ನು ಪೋಸ್ಟ್ ಮಾಡಿದರು. ಎಲ್ಲ ಸರಿ, ಖಾಲಿ ಕಳಿಸಿದ್ದು ಯಾಕೆಂತ ನನ್ನ ಆಕ್ಷೇಪ! ಬಂದ ಲಕ್ಕೋಟೆಯ ಬದಿ ಕತ್ತರಿಸಿ, ಒಳ ಹೊರಗೆ ಮಾಡಿ ಬೇಕಾದ್ದು ಬೇಡದ್ದೆಲ್ಲಾ

ಟಿಪ್ಪಣಿ ಮಾಡಿ, ಓದ್ತಾರೋ ಬಿಡ್ತಾರೋ ಪಾವತಿ ಕಾಯುವ ನನ್ನ ಪ್ರಕಾಶಕ ಮಿತ್ರರನ್ನೆಲ್ಲ ಗೋಳುಹೊಯ್ದೊಳ್ಳುವ ನನಗೆ ಐವತ್ತು ಪೈಸೆಯ ಕಾರ್ಡು ಖಾಲಿ ಹೋದದ್ದು ಹೇಗೆ ಒಪ್ಪಿಗೆಯಾದೀತು! ಅಂದು ಬ್ಲೇರಿಗೆ ಮರಳುವ ದಾರಿಯನ್ನು ದೋಣಿ, ಬಸ್ಸುಗಳಲ್ಲಿ ಮತ್ತೆ ಇಂಚಿಂಚೂ ಹೊಸತೆಂಬಂತೆ ಕಣ್ತುಂಬಿಕೊಂಡರೂ ಇಲ್ಲಿ ದಾಖಲಿಸುವ ವಿಶೇಷ ಏನೂ ಇರಲಿಲ್ಲ. ಅಪರಾಹ್ನ ಇನ್ನೂ ಸಾಕಷ್ಟು ಉಳಿದಿರುವಂತೇ ಬ್ಲೇರ್ ತಲಪಿದೆವು.

ಬಸ್ಸಿಳಿದಲ್ಲಿ ಜಲಸೈನ್ಯದವರದೊಂದು ಮ್ಯೂಸಿಯಂ ಇತ್ತು. ಅದಕ್ಕೊಂದಿಷ್ಟು ಕಾಣಿಕೆ ಕೊಟ್ಟು ನೋಡಿದೆವು. ಸಮೃದ್ಧ ಮೀನ್ಮನೆ (aquarium) ಮುಖ್ಯವಾಗಿ ನಿರೀಕ್ಷಿಸಿದ್ದ ನಮಗೆ ನಿರಾಶೆಯೇ ಆಯ್ತು. ಭಾರೀ ಮೀನುಗಳ ಒಂದೆರಡು ಮೃದ್ವಸ್ಥಿ, ಆ ವಲಯಗಳಲ್ಲಿ ಸಾಮಾನ್ಯವಾಗಿ ಕಾಣುವ ಬಹುರೂಪೀ ಹವಳದ ರಚನೆಗಳು ಮತ್ತೆ ಬೋರ್ಡು ತುಂಬಾ ಬರವಣಿಗೆ ಕಪ್ಪು ಬಿಳುಪಿನ ಚಿತ್ರಗಳು. ಒಂದು ಪುಸ್ತಕ ಸೀಡೀಗಳ ಮಾರಾಟ ಮಳಿಗೆಯೂ ಹೀಗೇ ಹರಕೆ ಸಂದಾಯಕ್ಕೆ ಇತ್ತು. ಅವರದೇ ಪಟ್ಟಿಯನ್ನು ತಲಾಶ್ ಮಾಡಿ ನಿರೇನ್ ಬಯಸಿದ ಸೀಡೀ ಒಂದೂ ಅಲ್ಲಿರಲಿಲ್ಲ. ಇಲಾಖೆಯ ಬಿಲ್ವಿದ್ಯಾ ಪರಿಣತಿಗೆ ಮ್ಯೂಸಿಯಂ ಒಂದು ಖಾಯಂ ಸಾಕ್ಷಿ ಎಂದುಕೊಂಡು ಹೀಗೆ ನುಗ್ಗಿ ಹಾಗೆ ಹೊರಟೂ ಬಂದೆವು. ಅನ್ನಪೂರ್ಣೆಯಲ್ಲಿ ಹೊಟ್ಟೆ ಪೂರ್ಣರಾಗಿ ಕೋಣೆ ಸೇರಿಕೊಂಡೆವು.

ದಿನ ಏಳು (ಏಪ್ರಿಲ್ ೨೪)

ಒಟ್–ರಾಸ್–ಈ ದ್ವೀಪ:

ಬ್ಲೇರ್ ದ್ವೀಪ ಮಹಾಬಂಧೀಖಾನೇ ಪ್ರಧಾನವಾಗಿ ಆಡಳಿತ ಕೇಂದ್ರವಾಗಿತ್ತು. ಅಂದರೆ ಅಲ್ಲಿ ಆಳುವ ವರ್ಗಕ್ಕೆ (ಬ್ರಿಟಿಷರು) ಕೌಟುಂಬಿಕ ವಿರಾಮ ವಿಹಾರದ ಖಾಸಗಿತನಕ್ಕೆ ಅವಕಾಶಗಳು ಸಾಲದನ್ನಿಸಿರಬೇಕು. ಅನುಕೂಲಕ್ಕೆ ಒದಗಿದ ದ್ವೀಪ ರಾಸ್ (ಬಹುಶಃ ನಿರ್ವಸಿತ ದ್ವೀಪವನ್ನು ನಾಗರಿಕ ಮಾಡಿದ ಅಧಿಕಾರಿಯ ಹೆಸರಿರಬೇಕು). ಬ್ಲೇರಿನಿಂದ ಮಂದಜಲಯಾನದಲ್ಲೂ ಹತ್ತೇ ಮಿನಿಟಿನ ದೂರ, ಯಾವುದೇ ತುರ್ತು ಪರಿಸ್ಥಿತಿಗೆ 'ಕಣ್ಣಳವಿಯಲ್ಲೇ' ಒದಗುವ ನೆಲವೆಂದೇ ರಾಸ್ ಅಭಿವೃದ್ಧಿಗೊಂಡಿರಬೇಕು. ಅಲ್ಲಿನ ನೆಲದ ಪ್ರತಿ ಅಂಗುಲಂಗುಲದ ರಕ್ಷಣೆ, ವಸತಿ, ವಿಹಾರ ರಚನೆಗಳೆಲ್ಲ ಸೌಕರ್ಯಗಳೆಲ್ಲ ಉನ್ನತ ದರ್ಜೆಯವು. ಆ ನೆಲದ ಮತ್ತು ಜನಗಳ ಕಾವಲು, ಚಾಕರಿಗಾಗಿದ್ದವರಿಗೆ ತಾತ್ಕಾಲಿಕ ವಸತಿಯ ವ್ಯವಸ್ಥೆಯಿದ್ದಿರಬಹುದಾದರೂ ಅವರ ಮುಖ್ಯ ನೆಲೆಯನ್ನು (ಮನೆ, ಹೆಂಡತಿ ಮಕ್ಕಳು ಇತ್ಯಾದಿ) ಬ್ಲೇರ್ ದ್ವೀಪದಲ್ಲೇ ಉಳಿಸಿದ್ದರಿಂದ ಸ್ವಾತಂತ್ರ್ಯೋತ್ತರದಲ್ಲಿ ರಾಸ್ ಅನಾಥವಾಗಿರಬೇಕು. ಅದಕ್ಕೂ ಹೆಚ್ಚಿಗೆ ಹೊಸ ಜಮಾನಾದ ದೇಶಪ್ರೇಮದಲ್ಲಿ ತಿರಸ್ಕಾರಕ್ಕೊಳಗಾಗಿರಬೇಕು. ಮುಂದೆಂದೋ 'ಹಳತನ್ನು ಪ್ರದರ್ಶಿಸುವಲ್ಲೂ' ಹಣವಿದೆ ಎಂಬ ದಿವ್ಯ ಸತ್ಯ ಹೊಳೆದಿರಬೇಕು. ಈಗ ಪ್ರವಾಸೋದ್ಯಮದ ಹೆಸರಿನಲ್ಲಿ ಆಂಶಿಕವಾಗಿ ಜೀರ್ಣೋದ್ಧಾರಗೊಂಡು ನೋಡಲೇಬೇಕಾದ ಐಟಂ ಆಗಿದೆ! ಸರಿ, ಬ್ಲೇರ್ ವಾಸದ ಕೊನೆಯ ದಿನವನ್ನು ಅದಕ್ಕೇ ಮೀಸಲಿಟ್ಟಿದ್ದೆವು. ಭಾರಾಟಾಂಗ್ ಪ್ರವಾಸದ ಜಡ ಮರುಬೆಳಗ್ಗೆ ಎಷ್ಟು ಎಳೆದರೂ ಆರು ಗಂಟೆಗೂ ಮುನ್ನ ನಮ್ಮನ್ನು ಸ್ನಾನಾದಿ ಪ್ರಾತರ್ವಿಧಿಗಳನ್ನು ಮುಗಿಸಿ ಅನ್ನಪೂರ್ಣೆಯ ಎದುರು ಇಡ್ಲಿ ವಡೆಯ ಪ್ರಸಾದಕ್ಕೆಗೆ ಧ್ಯಾನ ಮಾಡಿಸಿತು. ಅದು ದಕ್ಕಿದ ಮೇಲೆ ನಿದ್ರಿಸಿದ್ದ ಪೇಟೆಯುದ್ದಕ್ಕೆ ನಡೆದೇ ದೋಣಿಗಟ್ಟೆ ಸೇರಿದರೂ ಮೊದಲ ದೋಣಿಗೆ ಸುಮಾರು ಒಂದೂವರೆ ಗಂಟೆ ಚುರುಗುಟ್ಟುವ ಬಿಸಿಲಿನಲ್ಲಿ ಕಾಯಬೇಕಾಯ್ತು. ಅಲ್ಲಿ ಕೆಲವು ಹೊಸಯುಗದ ಯುದ್ಧವೀರರ ಗೋರಿಕಲ್ಲುಗಳು (ಬ್ರಿಟಿಷರದ್ದಲ್ಲ) ವೈಭವೋಪೇತವಾಗಿ ನೆಲ ಆಕ್ರಮಿಸಿದ್ದವು. ಹಾಗೆ ಮೂರಡಿ ಎತ್ತರ, ಹದಿನೈದಿಪ್ಪತ್ತಡಿ ಚಚ್ಚೌಕಕ್ಕೆ (ಕನ್ನಡಿಯಂತೆ ಪಾಲಿಷ್‌ಗೊಂಡ) ವ್ಯಾಪಿಸಿದ್ದ ಕಟ್ಟೆಯೊಂದರ ಕೇಂದ್ರದಲ್ಲಿ ನಿಂತಿದ್ದ ಸ್ಮಾರಕ ಸ್ತಂಭದ ಮರೆಯ ತುಣುಕು ನೆರಳಿನಲ್ಲಿ ನಾವು ಸುಖ ಕಂಡದ್ದನ್ನು ನೆನೆಸುವಾಗ ನಗುವುದೋ ಅಳುವುದೋ ನೀನೇ ಹೇಳು. ಒಂದೇ ಭಾರತದ ಅಪಕಲ್ಪನೆಯಲ್ಲಿ ದ್ವೀಪಸ್ತೋಮದ ನಿಜದ ಹಗಲು ರಾತ್ರಿಯನ್ನು ಅನುಸರಿಸುವ ಆಡಳಿತ ನಮ್ಮಲ್ಲಿ ಇಲ್ಲದಿರುವುದೇ ಈ ಸಮಯಹಾಳುತನಕ್ಕೆ ಮುಖ್ಯ ಕಾರಣವಿರಬಹುದು. (ನಿನ್ನ ಅಮೆರಿಕಾದಲ್ಲಿ ನಾಲ್ಕೈದು time zones ಇದ್ದರೂ ಐಕ್ಯಮತ್ಯಕ್ಕೆ ಕೊರತೆ ಬಂದಿಲ್ಲವೆಂದು ಕೇಳಿದ್ದೇನೆ.)



ರಾಸ್ ದ್ವೀಪಕ್ಕೆ ಕೊಳಕಟೆ ದೋಣಿಗಟ್ಟೆ ಇಲ್ಲ, ಕೆಂಪುಗಂಬಳಿ ಹಾಸಿದ ನಡೆಮಡಿಯ ಸ್ವಾಗತ ಕಛೇರಿಯೇ ಇದೆ ಎಂದು ಕಂಡಾಗ ನಿಜಕ್ಕೂ ಹೆದರಿಕೆಯಾಯ್ತು. ಇನ್ನೆಲ್ಲಿ ಪರಂಗಿಯವ ಎದುರುಗೊಂಡು ಕೊಳ್ಕಟೆ ಚಡ್ಡಿ, ಹರ್ಕಟೆ ಚಪ್ಲಿಯಲ್ಲಿದ್ದ ನಮ್ಮ ಉಪಾಧ್ಯರನ್ನು ಅನಾಮತ್ತಾಗಿ ಎತ್ತಿ ಎಸೀತಾರೋ ಇತಿಹಾಸದ ಪುನರಾವರ್ತನೆಯಾಗುತ್ತದೋ (ಈಚೆಗಲ್ವಾ ನಮ್ಮ ವಿಪರೀತ ಬುದ್ಧಿಯ ಅಂತಾರಾಷ್ಟ್ರೀಯ ಕಲಾವಿದ ಎಂ ಎಫ್ ಹುಸೇನ್ ಲಂಡನಿನ ಪ್ರತಿಷ್ಠಿತ ಕ್ಲಬ್ಬಿಗೆ ಆಹ್ವಾನಿತನಾದರೂ ಚಪ್ಲಿಯಲ್ಲಿ ಬಂದದ್ದಕ್ಕೆ ತಿರಸ್ಕೃತನಾದ್ದು?) ಎಂದು ಹೃದಯ ತಲ್ಲಣಿಸಿತು. ಸೂಟುಬೂಟಿನವರೇ ಎದುರುಗೊಂಡರೂ (ದೇಶೀಯರೇ!) ಅದು ಕೇವಲ ಟಿಕೆಟ್ ಚೆಕ್ ಮಾಡಲು ಮತ್ತು ಅಲ್ಲಿದ್ದ ಅಧಿಕೃತ ತಿನಿಸುಗಟ್ಟೆಯ ದುಬಾರಿ ತಿನಿಸುಗಳಿಗೆ ಗಿಲೀಟು ಹಚ್ಚುವ ಕ್ರಮ ಎಂದು ತಿಳಿದು ಮನಸ್ಸು ಹಗುರಾಯ್ತು. ಮುಂದೆ ನಾವು ಮುಕ್ತರು; ಅಪ್ಪಟ ದೇಶೀ ಅವ್ಯವಸ್ಥೆಯ ಬಳಕೆದಾರರು! ಬ್ರಿಟಿಷರು ಆ ದ್ವೀಪದಲ್ಲೊಂದು ಸಣ್ಣ ಪ್ರಾಣಿ ಸಂಗ್ರಹಾಲಯ ನಡೆಸಿದ್ದರಂತೆ. ಮುಂದೆ ಅದನ್ನು ಕೇಳುವವರಿಲ್ಲದೆ ಜಿಂಕೆಗಳನ್ನುಳಿದು ಎಲ್ಲವೂ ನಶಿಸಿದವಂತೆ. ಬಂಧನ ಹರಿದು ದ್ವೀಪದೊಳಗೆ ಸ್ವತಂತ್ರವಾದ ಜಿಂಕೆಗಳು ಅರೆ–ವನ್ಯವಾಗಿ ಇಂದಿಗೂ ಉಳಿದಿರುವುದು ನಮಗೆ ಧಾರಾಳ ನೋಡಸಿಕ್ಕಿತು. ದ್ವೀಪ ಸುತ್ತಿ ಮರಳುವಾಗ ಆ ಜಿಂಕೆಗಳು ಪ್ರವಾಸಿಯ ಕೈ ತುತ್ತಿಗೆ ಕತ್ತು ಚಾಚುವುದೂ ಕಂಡಾಗ ಬಹುಶಃ ಇಂದಿನ ಅಭಿವೃದ್ಧಿಯ ಅಲೆಯಲ್ಲಿ ಅವಕ್ಕೆ ಆಡಳಿತವೇ ಸೊಪ್ಪು ನೀರಿನ ವ್ಯವಸ್ಥೆ ಮಾಡಿರಬೇಕು ಎಂದುಕೊಂಡೆವು (ಕಡಿಕೆ ಕಟ್ಟಿ, ನಮ್ಮಿಷ್ಟದ ಭತ್ತ ಅಕ್ಕಿ ತುಂಬಿಸಿಕೊಂಡು ಊಟ ಮಾಡುತ್ತಿದ್ದ ನಮ್ಮ ಮೇಲೆ ಕೃಪೆದೋರಿ ಸರಕಾರ ರೇಷನ್ ಅಂಗಡಿ ಕೊಟ್ಟು, ಮುಗ್ಗುಲು ಅಕ್ಕಿ, ಹುಳಸುರಿದ ಗೋಧಿ ಒದಗಿಸಲಿಲ್ಲವೇ ಹಾಗೆ). ಅಯ್ಯೋ ಬಿಡು, ಇನ್ನು ಹೀಗೇ ಹೆಚ್ಚು ನಾನು ಬರೆಯುತ್ತಾ ಹೋಗಿ ನಾಳೆ ಬೂಕರ್ರೋ ಆಸ್ಕರ್ರೋ ನನ್ನ ಮೇಲೆ ಮುರ್ಕೊಂಡು ಬಿದ್ದೀತು. (ಗೊತ್ತಲ್ಲಾ ಭಾರತ ಬೈದು ಬರೆದವರಿಗೆಲ್ಲ ಅಂತಾರಾಷ್ಟ್ರೀಯ ಪ್ರಶಸ್ತಿ ಬರುತ್ತದೆಂಬ ವಾದ?) ಅನಂತರ ದೇಶಭಕ್ತಿಯನ್ನು ಗುತ್ತಿಗೆ ತೆಗೆದುಕೊಂಡವರು ಗುದ್ದಿವಾದ ಹೇಳಲೂ ಬಂದಾರು.

ಹಳಗಾಲದ ಈಜುಕೊಳ ತುಸುವೇ ಜೀರ್ಣೋದ್ಧಾರಗೊಂಡಂತಿತ್ತು. ಹಿಂದಿನ ಎಂಥದ್ದೋ ಒಂದು ಕಟ್ಟಡ, ತುಸುವೇ ಜೀರ್ಣೋದ್ಧಾರಗೊಂಡು (ನಾಲ್ಕೆಂಟು ಪ್ರೇಕ್ಷಕರು ಸಿಕ್ಕರೂ) ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಸಜ್ಜುಗೊಂಡಿತ್ತು. ಚಿತ್ರವನ್ನು ನಾವು ಸ್ವಲ್ಪ ಅನುಭವಿಸಿ ಹೊರನಡೆದೆವು. ಪ್ರವಾಸಿಗಳು ಸಾಕಷ್ಟು ಬಂದರೂ ಆ ಸಣ್ಣ ಸಿನಿಮಾ ಮಂದಿರ ಯಾಕೆ ನಿರ್ವಸಿತ ಕಳೆ, ಕೊಳೆ ಹೊಂದಿರಬಹುದು ಎನ್ನುವುದಕ್ಕೆ ಸಾಕ್ಷಿಯಾಯಿತು ಆ ಸಾಕ್ಷ್ಯಚಿತ್ರ. (ಈಚೆಗಿನ ಅಭಯನ ಅನುಭವದ ಬೆಳಕಿನಲ್ಲಿ ವಿಶ್ಲೇಷಿಸುವುದೇ ಆದರೆ ಚಿತ್ರ ಹೇಗಿದೆ ಎನ್ನುವುದಕ್ಕಿಂತ ಯಾರದ್ದಿದೆ ಎಂದೂ ನೋಡಬೇಕೋ ಏನೋ). ಉಳಿದಂತೆ ಉಪ್ಪು ನೀರಿನಿಂದ ಕುಡಿಯುವ ನೀರು ತಯಾರಿಸುವ ಘಟಕ, ಅಚ್ಚುಮನೆ, ದ್ವೀಪದ ಅತ್ಯುನ್ನತ ಕೇಂದ್ರದಲ್ಲಿ ಭವ್ಯಗಾಗಿ ರಚಿಸಿದ್ದ ಇಗರ್ಜಿ, ಸೈನಿಕರ ವಸತಿ ಸಾಲು ಎಲ್ಲಾ ವಾತಾವರಣದ ಆಘಾತದಲ್ಲಿ ಶಿಥಿಲವಾಗಿ ಆಲದ ಜಾತಿಯ ಮರಗಳ ಆಕ್ರಮಣದಲ್ಲಿ ಮತ್ತಷ್ಟು ಗತಿಗೆಟ್ಟಿವೆ. ಆ ಬೀಳಲು, ಬೇರುಗಳ ಹೆಣಿಗೆಯಲ್ಲಿ ಗೋಡೆ, ಗೋಪುರಗಳ ದೊಡ್ಡ ದೊಡ್ಡ ಭಾಗಗಳು ಕಳಚಿಯೂ ಬಿದ್ದುಹೋಗಲಾಗದ ಸ್ಥಿತಿಯಲ್ಲಿ ನಿಂತಿರುವ ಅದ್ಭುತ ಪ್ರಾಕೃತಿಕ ಸತ್ಯ ರೋಮಾಂಚನವುಂಟು ಮಾಡುತ್ತದೆ. ಜಗತ್ತಿನಲ್ಲಿ ಅತ್ಯಂತ ದೊಡ್ಡ ಬೌದ್ಧ ದೇವಾಲಯ ಸಂಕೀರ್ಣವೆನ್ನಿಸಿರುವ ಇಂಡೋನೇಶಿಯಾದ ಬೋರಾಬುದರ್ ಹೀಗೇ ವನ್ಯದ ತೆಕ್ಕೆಗೆ ಸಿಲುಕಿರುವಂತೆ ಪುನಃಶೋಧಗೊಂಡಾಗಿನ ಚಿತ್ರಗಳು ನೆನಪಿಗೆ ಬಂತು. ಬೋರಾಬುದರ್‌ನಲ್ಲೋ ಅಜಂತಾದಂತಲ್ಲೋ ಸಂಸ್ಕೃತಿಯ ಒಂದು ಮಹತ್ತರ ಕುರುಹು ನಶಿಸಿ ಹೋಗುತ್ತದೆ ಎನ್ನುವ ಒತ್ತಡದಲ್ಲಿ ಜೀರ್ಣೋದ್ಧಾರ ನಡೆದಿದೆ, ಸಹಜವಾಗಿ ಪ್ರವಾಸೀ ಆಕರ್ಷಣೆ ಹೆಚ್ಚುತ್ತಲೇ ಇದೆ. ಆದರೆ ಇಲ್ಲಿ ಮೂಲದಲ್ಲಿ ಭಾರೀ ವೈಶಿಷ್ಟ್ಯಪೂರ್ಣ ರಚನೆಗಳೇನೂ ಇರಲಿಲ್ಲವಾದ್ದರಿಂದ ಸದ್ಯದ ಪ್ರಾಕೃತಿಕ ಪುನರುತ್ಥಾನವನ್ನೇ ಮುಂದುವರಿಸುವುದು ಪ್ರವಾಸೀ ಆಕರ್ಷಣೆಯ ದೃಷ್ಟಿಯಿಂದಲೂ ವೆಚ್ಚದ ದೃಷ್ಟಿಯಿಂದಲೂ ಹೆಚ್ಚು ನ್ಯಾಯ. ಆದರೆ ಈಗಾಗಲೇ ಇಲಾಖೆಗಳು ಇಲ್ಲಿ ಆಡಿರುವ (ಸದ್ಯಕ್ಕೆ ಸಣ್ಣದೇ) ಆಟಗಳನ್ನು ನೋಡುವಾಗ ಬೇಸರ ಆವರಿಸಿಕೊಳ್ಳುತ್ತದೆ. ನಾವಲ್ಲಿದ್ದಷ್ಟೂ ಹೊತ್ತು ಎಲ್ಲೋ ಮೂಲೆಯಿಂದ ವಿದ್ಯುಜ್ಜನಕವೋ ಕುಡಿ ನೀರ ಪಂಪೋ ಇಡೀ ದ್ವೀಪವನ್ನು ನಡುಗಿಸುವಂತೆ ಬೊಬ್ಬಿರಿಯುತ್ತಿದ್ದದ್ದು ಆ ಪರಿಸರಕ್ಕೆ ಮಾಡಿದ ಅವಮಾನ. ದ್ವೀಪಕ್ಕೆ ಪ್ರವಾಸಿಗಳು ಬರುವ ದಿಕ್ಕಿನಲ್ಲೇ ರಚಿಸಿರುವ ಭಾರೀ ಕಾಂಕ್ರೀಟ್ ಕಟ್ಟಡ (ಮ್ಯೂಸಿಯಂ ಇರಬೇಕು, ಅಂದು ರಜಾದಿನವಿದ್ದು ಮುಚ್ಚಿತ್ತು.) ಪ್ರಾಚ್ಯ ಸೌಂದರ್ಯ ಗ್ರಹಿಸುವ ಕಣ್ಣುಗಳಿಗೆ ಕಿಸರು. ಇಂದಿಗೂ ದ್ವೀಪದ ನೀರ ಅಗತ್ಯಗಳನ್ನು ಪೂರೈಸುತ್ತಿರುವ ಹಳೆಯ ಮಳೆನೀರ ಸಂಗ್ರಹಕ್ಕಿದ್ದ ಕೆರೆ ತೀರಾ ದುಸ್ಥಿಯಲ್ಲಿದೆ, ದ್ವೀಪದ ಹಿಮ್ಮೈಗೆ ಬಂಗಾಳಕೊಲ್ಲಿಯೇ ತೆರೆದುಕೊಂಡಂತಿದೆ. ಅಲ್ಲೂ ಒಳಭಾಗದಲ್ಲೂ ರಚಿತವಾದ ಗೋಡೆ ಬುರುಜುಗಳು ಇಲಾಖೆಗಳ ಅಭಿವೃದ್ಧಿ ಯೋಜನೆಗಳ ಭಾರದಲ್ಲೇ ಕುಸಿದು ಬಿದ್ದರೆ ಆಶ್ಚರ್ಯವಿಲ್ಲ. ದ್ವೀಪದಲ್ಲಿ ಅಸಂಖ್ಯ ತೆಂಗಿನ ಮರಗಳಿವೆ. ಇಂದು ಅವೆಲ್ಲ ತೀರಾ ಅಸಡ್ಡೆಗೊಳಗಾದಂತಿವೆ. ಆದರೂ ಅವುಗಳೆಡೆಯಲ್ಲಿ ದ್ವೀಪ ಬೆಳಗಲು ವಿಶಿಷ್ಟ ದೀಪಸಾಲು ಹಚ್ಚುವ ಯೋಜನೆಯೊಂದು ಎಂದೋ ಕಾರ್ಯಗತಗೊಂಡು (ಬಿಲ್ಲು ಪಾಸಾಗುವವರೆಗೆ ಕಾರ್ಯಾಚರಣೆಯೂ ಮಾಡಿರಬಹುದು) ಇಂದು ಐತಿಹಾಸಿಕ ಅವಶೇಷಗಳ ಸಾಲಿಗೆ ಸೇರುತ್ತಿದೆ. ಇಂಥ ಬೊಂತೆಗಳನ್ನು ಕಟ್ಟಿಕೊಂಡ ಇಲಾಖೆ (ಪ್ರವಾಸೋದ್ಯಮದ್ದಿರಲಿ, ಪ್ರಾಚ್ಯವೇ ಇರಲಿ) ದ್ವೀಪಕ್ಕೆ ಪ್ರೇಕ್ಷಣೀಯ ಪಟ್ಟಿಯಲ್ಲಿ ಅತಿ ಗಣ್ಯ ಸ್ಥಾನಗಿಟ್ಟಿಸುತ್ತೇವೆ ಎಂದು ತಿಳಿದಿದ್ದರೆ ಅದು ಸುಳ್ಳು.

ಮಧ್ಯಾಹ್ನ ಮತ್ತೆ ನಾವು ಬ್ಲೇರ್‌ನಲ್ಲಿ ಅನ್ನಪೂರ್ಣರಾದೆವು. ಅಪರಾಹ್ನದ ಕಾರ್ಯಕ್ರಮ ಚಾರಣ. ದ್ವೀಪಸ್ತೋಮದ ಅತ್ಯುನ್ನತ ಕೇಂದ್ರ, ಬ್ರಿಟಿಷರ ಭಾಷೆಯಲ್ಲಿ ಹೇಳುವುದಾದರೆ ಹಿಲ್ ಸ್ಟೇಶನ್ – ಮೌಂಟ್ ಹ್ಯಾರಿಯೆಟ್, ಬ್ಲೇರ್ ದ್ವೀಪದ್ದೇ ಒಂದು ದೂರದ ಅಂಚಿನಲ್ಲಿ ಕಂಗೊಳಿಸುತ್ತಿತ್ತು. ಅದಕ್ಕೆ ಉದ್ದದ ನೆಲದಾರಿ ಬಿಟ್ಟು ಸಮೀಪದ ನೀರ್ಮಾರ್ಗವೂ ಒಂದಿತ್ತು. ನಾವು ಅದನ್ನೇ ಹಿಡಿದೆವು. ಮೊದಲು ಪುಟ್ಟ ಹಡಗಿನ ಯಾನ. ಅದು ಹೆಚ್ಚು ಸಾರ್ವಜನಿಕ ಬಳಕೆಯಲ್ಲೂ ಇರುವ ಸೌಕರ್ಯವಾದ್ದರಿಂದ ಲಾರಿ, ಬಸ್ಸು, ಕಾರಲ್ಲದೆ ಹಲವು ದ್ವಿಚಕ್ರ ವಾಹನಗಳೂ ನಮ್ಮ ಹಡಗೇರಿದ್ದು ನಿಜಕ್ಕೂ ಒಂದು ದೃಶ್ಯ. ಮುಂದಿನ ದೋಣಿಗಟ್ಟೆಯಲ್ಲಿ ಒಂದು ಬಾಡಿಗೆ ಕಾರು ಹಿಡಿದು "ಹ್ಯಾರಿಯೆಟ್ ಚಲೋ" ಎಂದೆವು. ಮೂರ್ನಾಲ್ಕು ಕಿಮೀ ಸಪುರ ದಾರಿಯಲ್ಲಿ ಊರು, ಮನೆಗಳನ್ನು ದಾಟಿ ನಿರ್ಜನ ಘಾಟೀ ದಾರಿಗೆ ಬರುತ್ತಿದ್ದಂತೆ ಅಯಾಚಿತವಾಗಿ ಚಾಲಕ ಕಾರು ನಿಲ್ಲಿಸಿ, ನಮ್ಮನ್ನಿಳಿಸಿ ಕಡಲಕಿನಾರೆಯತ್ತ ನಮ್ಮ ಗಮನ ಸೆಳೆದ. ಗುಡ್ಡದ ಏಣೊಂದು ಸಮುದ್ರದೊಳಗೆ ಚಾಚಿತ್ತು. ಅದರ ಅಂಚಿನಲ್ಲಿ ಪುಟ್ಟದೊಂದು ದೀಪಸ್ತಂಭ; ನಮ್ಮ ವಂಡೂರ್ ಯಾತ್ರೆಗೆ ಬೈಕ್ ಬಾಡಿಗೆ ಕೊಟ್ಟವ ರೂಪಾಯಿ ಇಪ್ಪತ್ತರ ನೋಟಿನಲ್ಲಿ ತೋರಿಸಿದ್ದೇ ಚಿತ್ರ. ಬೇಡ ಬೇಡಾಂದ್ರೂ ಮತ್ತಾತನದೇ ಮಾತು ನೆನಪಿಗೆ ಬಂತು – "ದ್ವೀಪಸ್ತೋಮದ ಅಸ್ತಿತ್ವವನ್ನು ಮಹಾನ್ ದೇಶ ತನ್ನದೇ ಭಾಗವೆಂದು ಕೃಪೆಯಿಟ್ಟು ತೋರಿದ ಏಕೈಕ ಕುರುಹು". ಅದರಲ್ಲಿ ವಿಷಾದವಿತ್ತು. ಅದು ಪ್ರಾಮಾಣಿಕವೂ ಇರಬಹುದು. ಆದರೆ ಇಂಥಲ್ಲಿ ಆತ್ಮಶೋಧ ನಮಗೆ ಇನ್ನೊಬ್ಬರನ್ನು ಸಮಾಧಾನಿಸಲು ಹೆಚ್ಚು ಸ್ಥೈರ್ಯ ಕೊಡುತ್ತದೆ. ಮುಖ್ಯ ನೆಲದಲ್ಲಿರುವ ನಮ್ಮ ಕೊರಗುಗಳ ಪಟ್ಟಿಯೇನೂ ಕಡಿಮೆಯದ್ದಲ್ಲ. ನೆಲ, ಜಲ, ಪಾರಿಸರಿಕ, ಜಾನಾಂಗಿಕ, ಭಾಷೆ, ಸಂಸ್ಕೃತಿ, (ಕೊನೆಯದಾಗಿ ಎನ್ನಲೋ ಪ್ರಧಾನವಾಗಿ ಎನ್ನಲೋ) ವೈಯಕ್ತಿಕ ರಾಜಕೀಯ ಪ್ರಣಾಳಿಗಳ ವಿಪುಲ ವೈವಿಧ್ಯ ಮತ್ತಷ್ಟೇ ಗೊಂದಲಗಳ ನಡುವೆಯೂ ಜೀವನ (ಚೆನ್ನಾಗಿಯೇ) ನಡೆದೇ ಇದೆಯಲ್ಲವೇ! ಜೀವನ ಸಾಗರದ ಆಳ ಹರಹುಗಳ ಬಗಲಿಗೆ ಅಪ್ರಿಯ ಸತ್ಯಗಳ ಗಟ್ಟಿನೆಲ ನುಗ್ಗಿದರೆ, ಗುರುತು ತಪ್ಪದಂತೆ ದೀಪಸ್ತಂಭವಿಡಲು ಮರೆಯಬೇಡ ಮಂಕುತಮ್ಮ!

ಮೌಂಟ್ ಹ್ಯಾರಿಯೆಟ್ ಎಂಬ ಮಹಾಗಿರಿ!



ಚಿಡಿಯಾ ಟಾಪಿನಲ್ಲಿ ಕಂಡಂಥದ್ದೇ ಘಾಟಿ, ಕಾಡು. ಒಟ್ಟು ಕಾಲರ್ಧ ಗಂಟೆಯ ಸವಾರಿ ನಮ್ಮನ್ನು ದಾರಿಯ ಕೊನೆ ಮುಟ್ಟಿಸಿತು. ವಾಹನಗಳಿಗೆ ತಂಗಲು, ತಿರುಗಲು ಅನುಕೂಲವಾಗುವಷ್ಟು ಕಾಡು ಬೋಳಿಸಿ ಸಣ್ಣ ಮೈದಾನ ಮಾಡಿದ್ದರು. ಉಳಿದಂತೆ ಜೋಪಡಿ ಚಾ ದುಕಾನು, ಹಳಗಾಲದ ವಿಶ್ರಾಂತಿಗೃಹ, ಆಧುನಿಕ ವೀಕ್ಷಣಾ ಅಟ್ಟಳಿಗೆ, ಕೆಲಸಗಾರರ ವಸತಿ ಇಷ್ಟೇ ಹ್ಯಾರಿಯೆಟ್ಟಿನ ನಾಗರಿಕ ಸೌಲಭ್ಯಗಳು. ಅಟ್ಟಳಿಗೆಗೇರಿದರೆ ಸುತ್ತುವರಿದ ಕಾಡು ಮೀರಿ ನೀರು, ಆಚಿನ ಬ್ಲೇರ್ ದ್ವೀಪ ಸುಂದರ ವಿಹಂಗಮ ನೋಟಗಳು. ನಾವು ನಿಂತಲ್ಲಿಂದ ತೊಡಗಿ ಆ ಶ್ರೇಣಿಯ ತಲೆಯಲ್ಲೇ ಚಾರಣ ಪಥವಿದೆ. ಅದರಲ್ಲಿ ಒಂದೆರಡು ಕಿಮೀ ನಡೆದರೆ ಸಿಗುವ ಕಾಲಾಪತ್ತರ್ ನೋಡಲೇಬೇಕಾದ ಅದ್ಭುತ ಎಂದ ಕಾರಿನ ಚಾಲಕ. ನಾನು ಎಲ್ಲೇ ಒಡ್ಡೋಲಗ ಕೊಡುವಾಗ "ಬೆಟ್ಟಗುಡ್ಡಕ್ಕೆ ನಾನೇ ಸರಿ" ಎನ್ನುವವ ಇಲ್ಲಿ ಸುಮ್ಮನೆ ವಾಪಾಸಾಗುವುದುಂಟೇ. ಮಟ್ಟಸ ಕಾಲುದಾರಿ ಕಡಿದಿದ್ದರು. ಸಣ್ಣ ಇಳುಕಲು ಮತ್ತಷ್ಟೇ ಏರು. ಇಕ್ಕೆಲಗಳ ಗೋಡೆಯಷ್ಟೇ ಅಲ್ಲ, ಚಾಚಿಕೊಂಡು ನೆತ್ತಿಯ ಮೇಲೂ ಹೆಚ್ಚುಕಡಮೆ ಚಪ್ಪರ ಹಾಕಿದಂತೆ ಮರಗಿಡ ಬಳ್ಳಿ. ಪಕ್ಷಿಗಳ ಉಲಿ ಮತ್ತು ದರ್ಶನ ಯಾಕೋ ಚಿಡಿಯಾ ಟಾಪಿನಷ್ಟು ಇರಲಿಲ್ಲ. ಹಿಂದೇ ಹೇಳಿದಂತೆ ಬೇರೆ ದೊಡ್ಡಪ್ರಾಣಿಗಳೇನೂ ಎದುರಾಗುವ ಯೋಚನೆ ಈ ದ್ವೀಪ ಸ್ತೋಮಗಳಲ್ಲೇ ಇರಲಿಲ್ಲ. ಎಲ್ಲೋ ಒಂದೆರಡು ಸಣ್ಣ ಕವಲು ದಾರಿ ಕಾಣಿಸಿದರೂ ಮುಖ್ಯ ಜಾಡು ತಪ್ಪುವಂತಿರಲೇ ಇಲ್ಲ. ನಾವು ನಡಿಗೆಗಿಳಿಯುವಾಗಲೇ ಸೂರ್ಯ ದ್ವೀಪಸ್ತೋಮದ ದಿಗಂತದಂಚಿಗೆ ತಲಪಿದ್ದ. ಸಹಜವಾಗಿ ನಮ್ಮ ಧಾವಂತ ಅರ್ಧ ಮುಕ್ಕಾಲು ಗಂಟೆಯೊಳಗೆ ಮರಳಿ ಕಾರಿನ ಬಳಿ ಮುಗಿಯಲೇ ಬೇಕಿತ್ತು. ಆದರೆ ಅಷ್ಟೂ ಅವಧಿಯಲ್ಲಿ ನಮ್ಮ ನಡಿಗೆ ಏಕಮುಖವಾಗಿ ಸಾಗಿದರೂ ಕಾಲಾಪತ್ತರ್ ಕಾಣಲೇ ಇಲ್ಲ. ಎಲ್ಲೋ ಒಂದು ಕಡೆ ಸ್ವಲ್ಪ ಗಿಡಮರಗಳು ವಿರಳವಾದಲ್ಲಿ ಜಾಡಿನಂಚಿಗೆ ಸರಿದು ಕಣ್ಣೋಟದಲ್ಲಿ ಪರಿಸರ ಜಾಲಾಡಿದೆವು. ಕೀಲುಕೋತಗೇರಿಯಿಂದ ಒಳಗೆ ಕಾಡಿನಲ್ಲಿ ಉದ್ದಕ್ಕೆ ನಡೆದು ಹೀಗೇ ಭವಾನೀ ಹೊಳೆಯಂಚಿನ ಕಣಿವೆಗಿಣುಕಲು ಬಂದವರಿಗೆ ಧುತ್ತನೆ ಪಾತಾಳದಿಂದೆದ್ದು ನಮ್ಮಿಂದಲೂ ಮೇಲಕ್ಕೆ ಮಲೆತು ನಿಂತ (ನೆಲ ಮಟ್ಟದಿಂದ ಸುಮಾರು ಎರಡು ಸಾವಿರ ಅಡಿ ಎತ್ತರದ) ರಂಗನಾಥ ಸ್ತಂಭವೇ ಮನದಾಳದಿಂದ ಎದ್ದು ಇಲ್ಲಿ ಜೋಡಿ ಹುಡುಕುತ್ತಿತ್ತು! ಆದರೆ ಕಾಲಾಪತ್ತರ್ ನಾಪತ್ತೆ. ಕಡಿದು ಮಾಡಿದ ಜಾಡು ಮುಗಿದು

ಅಸ್ಪಷ್ಟ ಕವಲು ದಾರಿ ಎದುರಾಯ್ತು. ಕತ್ತಲಲ್ಲಿ ಸಿಕ್ಕಿಕೊಳ್ಳಬೇಡೀಂತ ಕಾರಿನ ಚಾಲಕ ಎಚ್ಚರಿಸಿದ್ದೂ ನೆನಪಿಗೆ ಬಂದು ಸ್ವಲ್ಪ ನಿರಾಶೆಯಲ್ಲೇ ಹಿಂದಕ್ಕೆ ನಡೆದೆವು. ಅದೇ ಗಿಡಮರಗಳು ವಿರಳವಾದ ಜಾಗದಲ್ಲಿ ಮತ್ತೊಮ್ಮೆ ಕತ್ತು ಕೊಕ್ಕರೆ ಮಾಡುವಾಗ ನಿಂತದ್ದು ಮಣ್ಣಲ್ಲ, ಕರಿಕಲ್ಲು ಎಂದು ಗುರುತಿಸಿದೆವು. ಎಲಾ ಇವನಾಂತ ಆ ಪುಟ್ಟ ದಿಣ್ಣೆಯಂತಾ ಕಲ್ಲಿನ ಆಜೂಬಾಜೂ ನೋಡುವಾಗ ಯಾರೋ ಸೀಮೆಸುಣ್ಣದಲ್ಲಿ ಗೀಚಿದ್ದು ಕಾಣಿಸಿತು – ಕಾಲಾಪತ್ತರ್; ಕುಂಟರ ನಾಡಿನಲ್ಲಿ ಮೋಂಟನೇ ನೆಂಟ!

ಎಲ್ಲೋ ಯಾರೋ ಕೂಗಿದ್ದು ಕೇಳಿಸಿತು. ಜಾಡು ಕಾಣಿಸುವಷ್ಟು ಬೆಳಕು ಉಳಿದಿತ್ತು ಮತ್ತು ನಮಗೆ ದಾರಿ ತಪ್ಪುವ ಭಯವೇನೂ ಇರಲಿಲ್ಲವಾದ್ದರಿಂದ ಅದನ್ನು ಉಪೇಕ್ಷಿಸಿ ನಡೆದೇ ಇದ್ದೆವು. ಕೂಗು ದೊಡ್ಡದೂ ಆಗಿ ಯಾರೋ ಟಾರ್ಚ್ ಬೆಳಗಿಕೊಂಡು ಎದುರಿನಿಂದ ಓಡಿಯೂ ಬಂದರು – "ಅರೆ! ಇಂವಾ ಚಾ ದುಕಾನಿನ ಮಾಲಿಕ" ಎಂದು ನಮಗೆ ಉದ್ಗರಿಸಿ ಹೋಯ್ತು. ಅವನ್ನ ಹಿಂಬಾಲಿಸಿದಂತೆ ನಮ್ಮ ಕಾರಿನ ಚಾಲಕ ಮತ್ತೆ ಅತಿಥಿಗೃಹದ ಮೇಟಿ. ಅವರು ಕೂಗಿದ್ದು ನಮಗಾಗಿ, ಹುಡುಕಿ ಬರುತ್ತಿದ್ದದ್ದೂ ನಮ್ಮನ್ನೇ. ಮತ್ತೆ ತಿಳಿಯಿತು ಅವರ ಆತಂಕ. ಅಲ್ಲಿನ ಜನಪದರು ಆ ಕಾಡಿನಲ್ಲೊಂದು ಪಿಶಾಚವಿದೇಂತಲೂ ಅದು ಜನರನ್ನು ವಶೀಕರಿಸಿಕೊಂಡು ದಾರಿತಪ್ಪಿಸುತ್ತದೆಂದೂ ನಂಬಿದ್ದರು. ನಮ್ಮನ್ನು ಆ ದುಷ್ಟಶಕ್ತಿಯಿಂದ ಪಾರುಗಾಣಿಸಲು ಪಾಪ ಅವರು ಓಡೋಡಿ ಬಂದಿದ್ದರು! ನಾವು ಅವರನ್ನು ಸಮಾಧಾನಿಸುತ್ತಾ ಕಾರಿಗೆ ಮರಳಿದೆವಾದರೂ ನಮ್ಮ ಹಲವು 'ಭೂತಪಿಶಾಚಗಳ' ರೋಮಾಂಚಕ ನೆನಪು ಮರುಕಳಿಸದಿರಲಿಲ್ಲ. ಸುಳ್ಯದಾಚಿನ ವಿಷ್ಣುದೇವಳಕ್ಕೆ ಸಂಬಂಧಿಸಿದ ಕಾಡಿನಲ್ಲಿ 'ಮೋಹಿನಿ'ಯನ್ನು ಉಪೇಕ್ಷಿಸಿ ವನವನ್ನು ಮನಸಾ ಪ್ರೇಮಿಸಿದ್ದು, ಭಾಗಮಂಡಲದ ಸಮೀಪದ ಈರುಳ್ಳಿಮಲೆಯಲ್ಲಿ ಶಿವಪಾರ್ವತಿಯರ ಉಯ್ಯಾಲೆಯಾಟ ನೋಡಿ ಲೋಕ ಕಳೆದುಕೊಳ್ಳುವ ಜನಪದ ನಂಬಿಕೆಯನ್ನು ಪ್ರಕೃತಿಪ್ರೇಮದ ತಕಡಿಯಾಟದಲ್ಲಿ ಕಡಿಮೆ ತೂಗಿದ್ದು, ಪ್ರಾಕೃತಿಕ ಗುಹೆಗಳ ಅನಾವರಣದ ಪರ್ವಕಾಲದಲ್ಲಿ ಕೌಂಡಿಕಾನದ ರುದ್ರಪಾದೆಯನ್ನು (ಸೂಕ್ತ ವಿಧಿವಿಧಾನವಿಲ್ಲದೆ ದಾಟಿದವರು ರಕ್ತಕಾರಿ ಸಾಯುತ್ತಾರೆ ? ಸ್ಥಳೀಯ ನಂಬಿಕೆ) ಸವಾಲು ಜವಾಬಿನ ಅಮಲಿನಲ್ಲೇ ಹೊಕ್ಕು ಹೊರಟು ಮರಗಳ್ಳರ ಹುನ್ನಾರವನ್ನು ಪ್ರಕಟಿಸಿದ್ದು ಒಂದೇ ಎರಡೇ. ಏಳು ಸಾಗರದಾಟಿ ಮೌಂಟ್ ಹ್ಯಾರಿಯೆಟ್ ತಲೆಯಲ್ಲೂ ನಮ್ಮನ್ನು ಕಾಡಿದ (ಕಾಡದ?) ಅಲೌಕಿಕ ಶಕ್ತಿಗೆ ನಮೋನ್ನಮ:

ದಿನ ಎಂಟು (ಏಪ್ರಿಲ್ ೨೫)

ಪುನಃ ಕೈಕೊಟ್ಟ ಬೈಕ್

ಮತ್ತೆ ಕಾರು, ದೋಣಿಗಟ್ಟೆ, ಹಡಗು, ಅನ್ನಪೂರ್ಣೆ, ಬಿಡಾರ ವಿವರಿಸಲೇನೂ ಉಳಿದಿಲ್ಲ. ಮರುದಿನ ಬೆಳಿಗ್ಗೆ ಅನ್ನಪೂರ್ಣೆಯಲ್ಲಿ ಕುರ್ಚಿ ಬಿಸಿಮಾಡಿ ಅರ್ಥಾತ್ ಕಾದು, ತಿಂಡಿ ತಿನ್ನಬೇಕಾಯ್ತು. ಕಾರಣ, ಅವರು ಆದ್ಯತೆಯಲ್ಲಿ ವಿಮಾನದವರ ನಿಶ್ಚಿತ ಪೊಟ್ಟಣ ತಿಂಡಿಗಳನ್ನು ನಮಗೂ ಮೊದಲೇ ಬಂದು ಕಾದಿದ್ದ ಭದ್ರತಾ ವ್ಯಾನಿಗೆ ಕೊಡಬೇಕಿತ್ತು. ಈ ಲಾಡೆನ್ನೂ ಎಲ್ಟಿಟೀಯೀ (ಈಗ ಒಂದು ಕಡಮೆಯಾಗಿದೆ!?) ಗೊಂದಲವಿರದಿದ್ದರೆ ಹಳಗಾಲದಲ್ಲಿ ನಮ್ಮೂರ ಪೇಪರ್ ವ್ಯಾನುಗಳಲ್ಲಿ ಚಾಲಕನ ಪಕ್ಕ ಇರುಕಿಕೊಂಡು ಅವೇಳೆಯಲ್ಲಿ ಪ್ರಯಾಣಿಸಿದ ಹಾಗೇ ನಾವು ಭದ್ರತಾ ವ್ಯಾನ್ ಚಾಲಕನಿಗೆ ನಾಕಾಣೆ ಕೊಟ್ಟು ವಿಮಾನ ನಿಲ್ದಾಣಕ್ಕೆ ಹೋಗಬಹುದಿತ್ತು ಎಂದು ಜೋಕಿಕೊಂಡೆವು. ನಮ್ಮ ಬಾಡಿಗೆ ಕಾರು ಕೇಳಿದ್ದಂತೆ ಬಂತು. ಮರಳುವ ವಿಮಾನ ಸರಣಿಯಲ್ಲಿ ಮೊದಲ ಯಾನ ಮಾತ್ರ ಏರಿಂಡಿಯಾದ್ದು. ನಮ್ಮ ಪರ್ವತಾರೋಹಿ ಪ್ರಜ್ಞೆಯಲ್ಲಿ (ಹೊಟ್ಟೆ ಗಟ್ಟಿಯಿರಬೇಕು, ಘಟ್ಟ ಎದುರಾಗಬೇಕು) ಹೋಟೆಲನ್ನು ಖಾಲಿ ಮಾಡುವವರಂತೆ ತಿಂದು ಬಂದವರಿಗೆ ವಿಮಾನದಲ್ಲಿ (ಹಿಂದೆ ಮೂರೂ ಡೆಕ್ಕನ್ ಟ್ರಾವಲ್ಸ್ ಯಾನದಲ್ಲಿ ಕುಡಿಯುವ ನೀರೂ ಹಣ ಕೇಳುತ್ತಿತ್ತು. ಇಲ್ಲಿ ಟಿಕೇಟಿನ ಅಂಗವಾಗಿ ತಿಂಡಿ, ತೀರ್ಥ ಉಚಿತ) ತಿಂಡಿ ತಂದಾಗ "ಅಯ್ಯೋ ಸೋತೆವಲ್ಲಾ" ಎಂದುಕೊಂಡರೂ ಹೊಟ್ಟೆಗೆ ಮೋಸ ಮಾಡಲಿಲ್ಲ. (ಅಮ್ಮನಿಗೆ ಗೊತ್ತಾಗಿದ್ದರೆ ಖಂಡಿತಾ ಬಯ್ದಿದ್ದಳು – ಪ್ರಾಯ ಐವತ್ತು ದಾಟಿದ ಮೇಲೂ ಯಾಕೆ ಹಾಗೆ ತಿನ್ನದೂ?) ಮಧ್ಯಾಹ್ನ ಊಟಬಿಟ್ಟರೂ ಸರಿ (ಅಜೀರ್ಣವಾದರೆ ದೇವರೇ ಗಸಿ – ದೇವು ಉವಾಚ!) ಎಂದು ಕಟ್ಟೊಡೆದರೆ ಮತ್ತದೇ ಬ್ಲೇರ್ ದ್ವೀಪದ ಅನ್ನಪೂರ್ಣೆಯ ತಿನಿಸುಗಳು. ಅಪ–ಉಲ್ಲೇಖಿಸುವುದಾದರೆ 'ಹೋದೆಯಾ ಪಿಶಾಚಿ ಎಂದರೆ ಬಂದೇ ಏರಿಂಡಿಯಾದಲ್ಲಿ' ಎಂದ ಹಾಗಾಯ್ತು! ಚೆನ್ನೈಯ್ಯಲ್ಲಿ ಡೆಕ್ಕನ್ನಿನ ಲಿಂಕಿರಬೇಕಿತ್ತು. ಆದರೆ ಆ ಕಂತ್ರಿಗಳು ಮತ್ತೇನೇನೋ ಸಬೂಬು ಹೇಳಿ (ನಿಜದಲ್ಲಿ ಸಾಕಷ್ಟು ಜನವಾಗಿರಲಿಲ್ಲಾಂತ ನಮ್ಮ ಸಂಶಯ) ಸಂಜೆ ವಿಮಾನಕ್ಕೆ ಭರ್ತಿ ಮಾಡಿದರು. ಸಹಜವಾಗಿ ಬೆಂಗಳೂರಿನಿಂದ ನಮ್ಮ ಮುಂದಿನ ಪ್ರಯಾಣ ಮಾರಣೇ ದಿನ ಬೆಳಿಗ್ಗೆಯಷ್ಟೇ ಸಾಧ್ಯ ಎನ್ನುವ ಅವರ ಮಾತಿಗೆ ಮರುಳಾಗದಷ್ಟು ಈಗ ನಾವು ಪಳಗಿದ್ದೆವು. 'ಚೆನ್ನೈ ಲೌಂಜಿನ ಹವಾನಿಯಂತ್ರಿತ ವ್ಯವಸ್ಥೆಯೊಳಗಿದ್ದೂ ಬೆಮರ್ದನ್ ಅಶೋಕವರ್ದನ್' ಎಂಬಂತೆ ನಾವು ಕೋಪಿಸಿ, ನಿರೇನ್ ಅಭಯರು ಡೆಕ್ಕನ್ ಸಿಬ್ಬಂದಿಗಳ ತಲೆ ತಿಂದು ಬೆಂಗಳೂರು–ಮಂಗಳೂರು ಟಿಕೆಟ್ ಹಣ ವಾಪಾಸು ಮಾಡಿಸಿಕೊಂಡೆವು. ಮತ್ತೆ ದೂರವಾಣಿಯಲ್ಲಿ ಬೆಂಗಳೂರಿನ ಪರಿಚಿತರನ್ನು ಸಂಪರ್ಕಿಸಿ, ಅಂದಿನ ರಾತ್ರಿ ಬಸ್ಸಿನ ಸೀಟ್ ಕಾದಿರಿಸಿಕೊಂಡದ್ದರಿಂದ ಊರಿನಲ್ಲಿ ನಮ್ಮ ನಮ್ಮ ಕೆಲಸಕ್ಕೆ ಹಾಜರಾಗುವಲ್ಲಿ ತಪ್ಪಲಿಲ್ಲ ಎನ್ನುವುದೇ ಸಮಾಧಾನ!

ಮರಳಿ ಮಠದಲ್ಲಿ (ಏಪ್ರಿಲ್ ೨೬)

ಪ್ರವಾಸಕ್ಕೆ ಮೊದಲು ಅಭಯ ತನ್ನ ವಿಡಿಯೋ ಕ್ಯಾಮರಾ ಒಯ್ಯುವುದಿಲ್ಲ ಎಂದು ಪಟ್ಟು ಹಿಡಿದಿದ್ದ. ಆ ಕ್ಯಾಮರಾ ಹಿಡಿದುಬಿಟ್ಟರೆ ಮತ್ತದೇ ತ್ರಿಪಾದಿ ಊರು (ಇದೊಂದು ಪ್ರಾಣಿಯಲ್ಲ, Tripodಊ), ವಿಶಿಷ್ಟ ಚೌಕಟ್ಟು ಸಂಯೋಜಿಸು, ಬೆಳಕು ಏನು ಮಾಡಲೀ ಎಂದೆಲ್ಲಾ ವೃತ್ತಿಪರತೆ ಕಾಡಿ 'ಎಂಜಾಯ್‌ಮೆಂಟ್' ಹಾಳುಮಾಡಿಬಿಡುತ್ತದೆ ಎನ್ನುವುದು ಅವನ ನಿಲುವು. ವೃತ್ತಿ ಮತ್ತು ವಿರಾಮ ಅಥವಾ ಮನರಂಜನೆಯನ್ನು ಪ್ರತ್ಯೇಕಿಸದ (ಮಿಶ್ರ ಮಾಡಿ ಒಂದನ್ನೊಂದು ಕೆಟ್ಟಾದಾಗಿ ಪ್ರಭಾವಿಸದ ಎಚ್ಚರದೊಡನೆ) ಜೀವನಕ್ರಮ ನನ್ನದು. ಅಂಗಡಿಯಲ್ಲಿ ಯಾರೊಡನೆಯೂ ಹರಟೆ ಹೊಡೆಯಬಲ್ಲೆ ಜೊತೆಗೇ ನಿರ್ದಾಕ್ಷಿಣ್ಯವಾಗಿ ಅವರ ಖರೀದಿಯ ಬಿಲ್ಲು ವಸೂಲು ಮಾಡುತ್ತೇನೆ. ಕಾಡುಬೆಟ್ಟದ ಚಾರಣ, ಶಿಬಿರದಲ್ಲಿ ಏನನ್ನೂ (ವೈಯಕ್ತಿಕ ಮಿತಿಯಲ್ಲಿ) ನಿಭಾಯಿಸಬಲ್ಲೆ ಹಾಗೆಂದು ಆರ್ಥಿಕವಾಗಿ ಇನ್ನೊಬ್ಬರಿಗೆ ಹೊರೆಯೂ ಆಗದ 'ವ್ಯಾಪಾರೀ ಬುದ್ಧಿ' ಕಳೆದು ಹೋಗುವುದಿಲ್ಲ. ಮತ್ತೆ ಅಲ್ಲಿ ಎಂದೂ ನನ್ನ ಅಂಗಡಿಯ ವಶೀಲೀಬಾಜೀ ಹಚ್ಚಿದ್ದೂ ಇಲ್ಲ. ಇದನ್ನೆಲ್ಲ ಹೇಳಿ, ಅಭಯನ ತಲೆತಿಂದು ಕ್ಯಾಮರಾ ಹಿಡಿಸಿದ್ದೆ. ಆದರೆ ಯಾವುದು ತೆಗೆಯಬೇಕು, ಬೇಡ ಇತ್ಯಾದಿ ನಿರ್ದೇಶನವನ್ನು ನಾನು ಅವನಿಗೆ ಕೊಡದ ಸಂಯಮ ಪ್ರವಾಸದುದ್ದಕ್ಕೂ ಕಾಪಾಡಿಕೊಂಡಿದ್ದೆ. ಹಾಗೆ ಅವನು ತೆಗೆದ ಒಂದಷ್ಟು ದೃಶ್ಯಗಳನ್ನು ಅವನದೇ ದೃಷ್ಟಿಕೋನದಲ್ಲಿ ಸಂಕಲಿಸಿದ್ದನ್ನು ಲಗತ್ತಿಸಿದ್ದೇನೆ. ಇಷ್ಟುದ್ದಕ್ಕೆ ನನ್ನನ್ನು ನೀನು (ನೀವು) ಸಹಿಸಿಕೊಂಡದ್ದು ನಿಜವೇ ಆದರೆ ಐದೇ ಮಿನಿಟಿನ ಈ ಚಿತ್ರವನ್ನೂ ನೋಡಿ. ಎಲ್ಲಕ್ಕೂ ಒಟ್ಟಾಗಿ ಇದುವರೆಗೆ ಕಟ್ಟೆ ಕಟ್ಟಿ ಇಟ್ಟ ಪ್ರತಿಕ್ರಿಯೆಗಳ ಮಹಾಪೂರವನ್ನು ಕೆಳಗಿನ ಪಾತ್ರೆಗೆ ತುಂಬುವಿಯಾ(ರಾ)ಗಿ ನಂಬಿದ್ದೇನೆ.

ಇಂತು ನಿನ್ನ ಏಕಮಾತ್ರ ಅಣ್ಣ
ಅಶೋಕವರ್ಧನ